ಅಧ್ಯಕ್ಷರು.—ಈ ವಿಚಾರ ಅಷ್ಟು ಮಹತ್ವದ್ದು ಇದ್ದರೆ ನಾವು ನೀವು ಸ್ಪೆಷಲ್ ಆಗಿ ಕುಳಿತು ಮಾತನಾಡೋಣ. ಮಾನ್ಯ ಸದಸ್ಯರು ನನ್ನ ಚೇಂಬರ್‌ಗೆ ಬರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರನ್ನೊಳಗೊಂಡಂತೆ ಎಲ್ಲರೂ ಅರೆಸ್ಟ್ ಆಗತಕ್ಕಂಥ ಸಂದರ್ಭವಿರುತ್ತದೆ, ಅವರೆಲ್ಲರ ಸುತ್ತಲೂ ಪೋಲೀಸ್‌ನವರ ಸರ್ಪ ಕಾವಲನ್ನು ಹಾಕಿರುತ್ತಾರೆ. ಅವರೆಲ್ಲರೂ ಕೂಡ ಜೈಲಿಗೆ ಹೋಗುತ್ತಿದ್ದಾರೆ. ಇದು ಒಂದು ಗಂಭೀರವಾದ ವಿಷಯವಾಗಿರುತ್ತದೆ. ಎಂಥೆಂಥದ್ದೊ ಸಣ್ಣ ಸಣ್ಣ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇವೆ, ಇದು ಸಾಮಾನ್ಯ ಜನಕ್ಕೆ ಸಂಬಂಧಪಟ್ಟ, ಅದರಲ್ಲೂ ಕೂಲಿಕಾರರಿಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ. ಅಂಥವರ ಪ್ರಶ್ನೆ ಬಂದಾಗ ಏನು ಮಾಡದೆ ಇದ್ದರೆ ಹೇಗೆ ? ಅದಕ್ಕೋಸ್ಕರವಾಗಿ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಯೋಚನೆ ಮಾಡುತ್ತೇನೆ. ನಾಳೆ ನಾಡಿದ್ದು ವಿಚಾರ ಮಾಡೋಣವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶಾಸನ ಕಾರ್ಯಕಲಾಪಗಳು

1) ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ, 1985
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಸಹಕಾರಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, 1985ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯು ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.--ಪ್ರಸ್ತಾವ ಏನೆಂದರೆ 1985ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯು ಮುಂದೆ ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು ಮಾನ್ಯ ಸಹಕಾರಿ ಸಚಿವರ ಪರವಾಗಿ).--ಮಾನ್ಯ ಅಧ್ಯಕ್ಷರೇ. 1985ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯು ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.--ವಿಧೇಯಕವನ್ನು ಮಂಡಿಸಲಾಗಿದೆ.—

2. ಕರ್ನಾಟಕ ಅಗತ್ಯ ವಸ್ತುಗಳ (ನಿಯಂತ್ರಣ) ವಿಧೇಯಕ, 1985.
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಪಶು ಸಂಗೋಪನಾ ಹಾಗೂ ಪಶುವೈದ್ಯ ರಾಜ್ಯಮಂತ್ರಿಗಳು).--ಮಾನ್ಯ ಅಧ್ಯಕ್ಷರೆ, 1985ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು, ಸಭೆಯು ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.--ಪ್ರಸ್ತಾವ ಏನೆಂದರೆ '1985ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ಸಭೆಯು ಮುಂದೆ ಇಡಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1985-86ನೇ ಸಾಲಿನ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೇ, 1985-89ನೇ ಸಾಲಿನ ಈ ಆಯವ್ಯಯವನ್ನು ಮಾನ್ಯ ಅರ್ಥಮಂತ್ರಿಗಳು ಈ ಸಭೆಯು ಮುಂದೆ ಮಂಡಿಸಿದ್ದಾರೆ. ಕರ್ನಾಟಕ ರಾಜ್ಯದ ವಿವಿಧ ವರ್ಗಗಳು ಏನಿವೆ, ಅವರು ಹಿಂದುಳಿದವರಾಗಿರಬಹುದು, ಹರಿಜನರಾಗಿರಬಹುದು ಅಥವಾ ಯಾರು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರತಕ್ಕಂಥ ಜನ ಇದ್ದಾರೆ ಅವರೆಲ್ಲರ ಕಲ್ಯಾಣ ಸಾಧನೆ ಮಾಡತಕ್ಕಂಥಾದ್ದರ ಪ್ರತಿಪಾದಿಸುವ ಕನ್ನಡಿಯಂತೆ ಇರತಕ್ಕಂಥ ಈ ಆಯವ್ಯಯ

ANNEXURE

ಏನಿದೆ, ಇದನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತಿದ್ದೇನೆ. ಇದನ್ನು ಸ್ವಾಗತಮಾಡುವಾಗ ಸುಮಾರು 75 ಕೋಟಿ ರೂಪಾಯಿಗಳ ಖೋತಾ ಆಯುವ್ಯಯದ ಬಗ್ಗೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳವಾಗಿ ಹೇಳಿದ್ದಾರೆ. ಎರಡು ಸಾವಿರ ಕೋಟಿ ಅಂದಾಜಿನ ಈ ಆಯುವ್ಯಯದಲ್ಲಿ 75 ಕೋಟಿ ರೂಪಾಯಿ ಕೊರತೆ ಏನಿದೆ, ಇದೇನೂ ಅಂತಹ ದೊಡ್ಡ ಖೋತಾ ಆಯುವ್ಯಯ ಅಲ್ಲವೆಂದು ಹೇಳುತ್ತಾ, ನನ್ನ ಮಾನ್ಯ ಕಾಂಗ್ರೆಸ್ ಸ್ನೇಹಿತರು ಅಧಿಕಾರವಲ್ಲಿದ್ದಾಗ ಮಂಡಿಸಿದಂತಹ ಹಲವಾರು ಖೋತಾ ಬಡ್ಜೆಟ್ಟುಗಳನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. 1978-79ರಲ್ಲಿ ಶ್ರೀ ಯಾಪ್ಯಾರವರು ಅರ್ಥಮಂತ್ರಿಗಳಾಗಿದ್ದರು. ಆಗ ಒಟ್ಟು ಅಂದಾಜು 675.53 ಕೋಟಿ ರೂಪಾಯಿಗಳು ಕೊರತೆ ಇದ್ದದ್ದು 120 ಕೋಟಿ. ಅಂದರೆ 675.53 ಕೋಟಿ ರೂಪಾಯಿಗಳ ಒಟ್ಟು ಅಂದಾಜಿಗೆ ಕೊರತೆ 120 ಕೋಟಿ ಇದ್ದಾಗ ಈ ಆಯುವ್ಯಯ ಏತಕ್ಕೂ ಪ್ರಯೋಜನವಿಲ್ಲವೆಂದು ಹೇಳಿದ್ದಾರೆ. ಇಷ್ಟು ಕೊರತೆ ಇರಬೇಕಾದರೆ ಮಾನ್ಯ ಅರ್ಥಮಂತ್ರಿಗಳು ಕರ್ನಾಟಕ ರಾಜ್ಯದ ಜನತೆಯ ಕಲ್ಯಾಣ ಮಾಡುವುದಕ್ಕಾಗಿ ಖೋತಾ ಆಗಿರಬೇಕೆಂದು ಹೇಳಬಹುದೇ ಹೊರತು, ಅನಾವಶ್ಯಕವಾಗಿ ದುಂದುವೆಚ್ಚ ಆಗಿದೆ ಎಂದು ಹೇಳುವುದಾದರೆ ಅದು ಸೌಜನ್ಯವಾಗಲಾರದು ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇನ್ನು, 1979-80ರಲ್ಲಿ ಅಂದಾಜು 809.70 ಕೋಟಿ ರೂಪಾಯಿಗಳು ಇದ್ದರೆ, ಕೊರತೆ 76 ಕೋಟಿ. ಶ್ರೀ ಯಾಪ್ಯಾರವರು ಈ ಆಯ ವ್ಯಯದ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಇಲ್ಲಿ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದು ಹೀಗಿದೆ—

> "The cost of preparing a budget is at any time a difficult one. In particular to prep re a budget which is by and large acceptable to all section of public opinion is even more difficult...."

ಯಾವುದೇ ಸಂದರ್ಭವಾಗಲೀ, ಈ ಆಯುವ್ಯಯವನ್ನು ತಯಾರುಮಾಡುವಾಗ ಸಮಾಜದ ಎಲ್ಲಾ ವ್ಯಕ್ತಿಗಳ, ಎಲ್ಲಾ ರಾಜಕೀಯ ಪಕ್ಷಗಳು ಒಪ್ಪುತಕ್ಕಂಥ ರೀತಿಯಲ್ಲಿ ಆಯುವ್ಯಯವನ್ನು ತಯಾರುಮಾಡಲು ಸಾಧ್ಯವಿಲ್ಲ, ಇಲ್ಲಿ ಭಿನ್ನಾಭಿಪ್ರಾಯ ಬಂದೇ ಬರುತ್ತದೆ—ಎಂದು ಶ್ರೀ ಯಾಪ್ಯಾರವರು ತಾವು 1979-80ರಲ್ಲಿ ಆಯುವ್ಯಯವನ್ನು ಮಂಡನೆ ಮಾಡುವಾಗ ತಮ್ಮ ಭಾಷಣದಲ್ಲಿ ಇದನ್ನು ಹೇಳಿದ್ದಾರೆ. 1980-81ರ ಕೊರತೆ ಬಗ್ಗೆ ನಾನು ಹೇಳುತ್ತಿದ್ದೆ. ನಾನು ಈಗ ಎರಡು ಸಾವಿರ ಕೋಟಿ ರೂಪಾಯಿ ಅಂದಾಜು ಇರುವಾಗ 75 ಕೋಟಿ ಕೊರತೆ ತೋರಿಸಿದ್ದರಿಂದ, ಇನ್‌ಫ್ಲೇಶನ್ ಜಾಸ್ತಿಯಾಗುತ್ತದೆ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಎಕನಾಮಿಕ್ ಸರ್ವೆ 1984-85ರಲ್ಲಿ ಹೀಗೆ ಹೇಳಲಾಗಿದೆ—

> "The inflation rate in the State has been significantly less during 1984-85. It is particularly noteworthy that the consumer prices have risen only marginally during the year. The consumer's prices of industrial workers have risen by 4% during 1984-85 compared to 14% in 1983-84".

ಅಧ್ಯಕ್ಷರೇ, 1981-82ರಂದು ಅಂದಾಜು 1032 ಕೋಟಿ ರೂಪಾಯಿ. ಕೊರತೆ 80.09 ಕೋಟಿ. 1982-83ರಲ್ಲಿ ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಆರ್ಥಿಕ ಮಂತ್ರಿಯಾಗಿದ್ದರು, ಆಗ ಒಟ್ಟು ಅಂದಾಜು 1250.75 ಕೋಟಿ ಇದ್ದರೆ, ಕೊರತೆ ಇದ್ದದ್ದು 64.77 ಕೋಟಿ. ಕೇಂದ್ರ ಸರ್ಕಾರದ ಯೋಜನಾ ವೆಚ್ಚದಲ್ಲಿ 40 ಸಾವಿರ ಕೋಟಿ ರೂಪಾಯಿ ಕೊರತೆ ಇದೆ. ಆದರೆ ಅವರು ಹೇಳತಕ್ಕಂಥ ಮಾತು 21ನೇ ಶತಮಾನದಲ್ಲಿ ಈ ದೇಶದ ಜನರನ್ನು ಅಭಿವೃದ್ಧಿ ಪಥದಲ್ಲಿ ತರುತ್ತೇವೆ ಎಂದು ಹೇಳಿರತಕ್ಕದ್ದು, ಏನಿದೆ ಇದು ಹುಸಿ ಮಾತು ಎಂದು ಹೇಳುವುದಾದರೆ ಅರ್ಥ ತಜ್ಞರನ್ನು ಕರೆಸಿ ಪರಿಶೀಲನೆ ಮಾಡಿ ತಿಳಿದುಕೊಳ್ಳಬೇಕು.

ಈ ಓವರ್ ಡ್ರಾಫ್ಟ್ 242.85 ಕೋಟಿ ರೂಪಾಯಿ ಇದೆಯೆಂದು ಈ ಆಯುವ್ಯಯವನ್ನು ತಯಾರುಮಾಡುವಾಗ ಎಲ್ಲರೂ ಹೇಳಿರತಕ್ಕಂಥಾದ್ದು. ಈ ಒವರ್ ಡ್ರಾಫ್ಟ್‌ನಿಂದಾಗಿ ಜನರ ಮೇಲೆ ಸಾಕಷ್ಟು ತೆರಿಗೆ ಹಾಕುತ್ತಾರೆ ಎಂದು ಎಲ್ಲರೂ ಭಾವಿಸಿದ್ದರು. ಆದರೆ ಕೇವಲ 50 ಕೋಟಿ ರೂಪಾಯಿಗಳ ತೆರಿಗೆ ಹಾಕಿ ಈ ಆಯುವ್ಯಯವನ್ನು ಮಾನ್ಯ ಅರ್ಥಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ತಯಾರು ಮಾಡಿದ್ದಾರೆ. ಇದರಲ್ಲಿ ಒಂದು ಪ್ರಶ್ನೆ ಏನೆಂದರೆ ಓಟು ತೆಗೆದುಕೊಳ್ಳುವ ಸಲುವಾಗಿ ಸಮಾಜ ಕಲ್ಯಾಣದ ಕೆಲಸ ಮಾಡಿದ್ದಾರೆ ಎಂಬುದು; ಈ ಪ್ರಪಂಚದಲ್ಲಿ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರ

ತಕ್ಕಂಥ ಯಾವ ರಾಷ್ಟ್ರವೇ ಆಗಲಿ, ಅಲ್ಲಿ ನಾವು ಯಾವ ಪಕ್ಷದ ಸರ್ಕಾರ ಎಂಬುದನ್ನು ನೋಡುತ್ತೇವೆ. ಒಂದು ಪಕ್ಷ ಸರ್ಕಾರ ಅಧಿಕಾರಕ್ಕೆ ಬಂದಾಗ ತನ್ನ ಅಧಿಕಾರ ಅವಧಿಯಲ್ಲಿ ಸಮಾಜದಲ್ಲಿ ಏನಾಗಬೇಕು ಎಂದು ತಿಳಿದು, ಏನೇನು ಸುಧಾರಣೆ ಮಾಡಬೇಕೆಂದು ತಿಳಿದು ಸಾಧನೆ ಮಾಡತಕ್ಕಂಥ ಉದ್ದೇಶದಿಂದ ಮಾಡುತ್ತಾರೆ. ಹೀಗೆ ಒಳ್ಳೆಯ ಕೆಲಸ ಮಾಡಿದರೆ ಜನ ತಮಗೆ ಓಟು ಕೊಡುತ್ತಾರೆ ಎಂಬ ಉದ್ದೇಶ ಇರುತ್ತದೆ. ಅದು ಪಕ್ಷ ರಾಜಕೀಯವನ್ನು ಪ್ರಜಾಪ್ರಭುತ್ವದಲ್ಲಿ ಮಾಡತಕ್ಕಂಥ ವ್ಯವಸ್ಥೆ. ಇವತ್ತಿನ ದಿವಸ ಈ ಸಮಾಜ ಕಲ್ಯಾಣವನ್ನು ಮಾಡಿದ್ದಕ್ಕೋಸ್ಕರವಾಗಿಯೇ ಕಳೆದ ಸಲ ಚುನಾವಣೆ ಏನು ನಡೆಯಿತು, ಆಗ ಕರ್ನಾಟಕದ ಜನತೆ ಬಹುಮತದಿಂದ ಜನತಾಪಕ್ಷವನ್ನು ಅಧಿಕಾರದಲ್ಲಿ ಮತ್ತೆ ತಂದಿದ್ದಾರೆ.

ಸ್ವಾಮಿ, ನಾವು ಅಂದರೆ ಈ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಇದುವರೆಗೆ ಕೊಟ್ಟಿರುವ ಪ್ರೌಢಶಾಲೆಗಳು 892. ಕಿರಿಯ ಕಾಲೇಜುಗಳು 296. ಪದವಿ ಕಾಲೇಜುಗಳು 57, ಪಾಲಿಟೆಕ್ನಿಕ್‌ಗಳು 50, ಔದ್ಯಮಿಕ ತರಬೇತಿ ಸಂಸ್ಥೆಗಳು 144. ಇದರ ಜೊತೆಗೆ ಮಂಜೂರು ಮಾಡಿರತಕ್ಕಂಥಾದ್ದು 216 ಪ್ರೌಢಶಾಲೆಗಳು 94 ಖಾಸಗಿ ಕಿರಿಯ ಕಾಲೇಜುಗಳು, 21 ಖಾಸಗಿ ಪಾಲಿಟೆಕ್ನಿಕ್‌ಗಳು ಮತ್ತು 4 ಖಾಸಗಿ ಪದವಿ ಕಾಲೇಜುಗಳು. ಸಾಕಷ್ಟು ಮಟ್ಟಿಗೆ ಹಳ್ಳಿಗಳಲ್ಲಿ ವಾಸಿಸುವ ಜನರಿಗೆ ವಿದ್ಯಾಭ್ಯಾಸವನ್ನು ಕೊಡಬೇಕು ಎನ್ನುವ ಮೂಲ ಉದ್ದೇಶ ಸರ್ಕಾರದ್ದು. ಈ ಸಾಧನೆಯನ್ನು ಸರ್ಕಾರ ಮಾಡಿದೆ, ಈ ಸಂದರ್ಭದಲ್ಲಿ ನಾನು ಸಂಬಂಧಪಟ್ಟ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನಾವು ವಿದ್ಯಾಭ್ಯಾಸ ಕೊಡುವಾಗ ನಮ್ಮ ಸಾಮಾಜಿಕ, ಆರ್ಥಿಕ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ಹೀಗಿರುವಾಗ ಬರೀ ಗುಮಾಸ್ತರನ್ನು ತಯಾರುಮಾಡತಕ್ಕಂಥಾ ಕಾಲೇಜುಗಳ ಬದಲಿಗೆ ಜಾಬ್ ಓರಿಯೆಂಟೆಡ್ ಎಜುಕೇಶನ್ ಕೊಡಲುವ್ಯವಸ್ಥೆ ಮಾಡುವುದರಿಂದ ಹಳ್ಳಿಗಾಡಿನ ಜನರು, ರೈತರ ಮಕ್ಕಳು ಏನಿದ್ದಾರೆ, ಅವರಿಗೆ ಉದ್ಯೋಗಾವಕಾಶ ಕಂಡುಕೊಳ್ಳಲು, ಸೆಲ್ಫ್ ಎಂಪ್ಲಾಯ್‌ಮೆಂಟ್ ಹೊಂದಲು ಸಾಧ್ಯವಾಗುತ್ತದೆಯೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

1–00 p.m.

1985-86ರಲ್ಲಿ ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳಿಂದ 1 ಲಕ್ಷ ಹೆಕ್ಟೇರ್ ಜಮೀನು ಸಾಗುವಳಿಯಾಗಿದೆ. ಸಣ್ಣ ಪ್ರಮಾಣದ ನೀರಾವರಿ ಯೋಜನೆಯಲ್ಲಿ 13 ಸಾವಿರ ಹೆಕ್ಟೇರ್ ಜಮೀನು ಸಾಗುವಳಿಯಾಗಿದೆ. ಇದರ ಮೂಲ ಉದ್ದೇಶವೇನೆಂದರೆ ನಮ್ಮ ರೈತನು ತನ್ನ ಉತ್ತುಬಿತ್ತುವ ಕಾಯಕದಲ್ಲೇ ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿ ಎಂಬುದು. ಅದಕ್ಕಾಗಿ ಹಲವಾರು ಯೋಜನೆಗಳನ್ನು, ರೈತ ತನ್ನ ಆರ್ಥಿಕ ಭದ್ರತೆಯನ್ನು ಗಳಿಸಿಕೊಳ್ಳಲಿ ಎಂಬ ಉದ್ದೇಶದಿಂದ ಮಾಡಲಾಗಿದೆ. ಇದರ ಜೊತೆಗೆ ಸರ್ಕಾರ ಮಾಡಬೇಕಾಗಿರುವುದು ನೀರಾವರಿ ಯೋಜನೆಗಳ ವಿಕೇಂದ್ರೀಕರಣ. ಇದಾದಾಗ ಸಣ್ಣ ಸಣ್ಣ ಪ್ರದೇಶಗಳಲ್ಲಿ ವಿಕೇಂದ್ರೀಕರಣವಾಗಿ, ಹಳ್ಳಿಗಳಲ್ಲಿ ಲಿಫ್ಟ್ ಇರಿಗೇಷನ್ ಮುಂತಾದ ಅಭಿವೃದ್ಧಿಪರ ಕಾರ್ಯಗಳಲ್ಲಿ ರೈತ ತೊಡಗಲು ಸಾಧ್ಯವಾಗುತ್ತದೆ. ಆದ್ದರಿಂದ ಹಳ್ಳಿಗಾಡುಗಳತ್ತ ನೀರು ಹರಿಸುವ ಕೆಲಸದ ಕಡೆ ಸರ್ಕಾರ ಯೋಚನೆ ಮಾಡಬೇಕು.

ಸ್ವಾಮಿ, ಕರ್ನಾಟಕದಲ್ಲಿ 40 ಲಕ್ಷ ಸಂಸಾರಗಳಿವೆ. ಈ ಪೈಕಿ 26 ಲಕ್ಷ ಸುಮಾರು 1ರಿಂದ 4 ಎಕರೆವರೆಗೆ ಭೂಮಿ ಹೊಂದಿರತಕ್ಕ ರೈತರದ್ದು, ಸಣ್ಣ ರೈತರದ್ದು. ಈಗಿರತಕ್ಕ ರೈತರು ಬೆಳೆಯುತ್ತಿರುವ ಅತಿ ಕಡಿಮೆ ಇಳುವರಿಯಾದ 1 ಕ್ವಿಂಟಾಲ್, ಎರಡು ಕ್ವಿಂಟಾಲ್‌ಗಳ ಪ್ರಮಾಣ ದಾಟಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವಂತೆ ಅನುಕೂಲಗಳನ್ನು ಒದಗಿಸಲು ಸುಮಾರು 1 400 ಕೋಟಿ ರೂ. ಬೇಕಾಗುತ್ತದೆ. ಹಾಲಿ ಸರ್ಕಾರ ಬ್ಯಾಂಕ್‌ಗಳಿಂದಲೂ, ಸಹಕಾರ ಸಂಘಗಳಿಂದಲೂ ಕೋಟಿಗಟ್ಟಲೆ ಹಣ ಕೊಟ್ಟಿದೆ. ಅಂದರೆ ಕೇವಲ ಶೇಕಡ 15ರಷ್ಟು ಮಾತ್ರರೈತರಿಗೆ ನೆರವಾಗುವ ಪ್ರಯತ್ನವನ್ನು ಸರ್ಕಾರ ಮಾಡಿದೆ. ಏಕೆಂದರೆ ಸರ್ಕಾರದ ಅರ್ಥವ್ಯವಸ್ಥೆ ಸ್ವಲ್ಪ ಕಷ್ಟದಲ್ಲಿದೆ. ಆದರೆ ಕೇಂದ್ರ ಸರ್ಕಾರ ಹಾಲಿ ತನ್ನ ಸಂಪನ್ಮೂಲದ ಪ್ರಮಾಣವಾದ 3,600 ಕೋಟಿ ರೂ.ಗಳ ಡಿಪಾಜಿಟ್ ಮೊಬಲಗಿನ ಪೈಕಿ ತನಗೆಷ್ಟು ಬೇಕೋ ಅಷ್ಟನ್ನು ಉಳಿಸಿಕೊಂಡು ಉಳಿದ ಶೇಕಡ 50ರ ಮೊಬಲಗನ್ನು ರಾಜ್ಯ ಸರ್ಕಾರಕ್ಕೆ ಕೊಡುವುದಾದರೆ ರೈತರ ಉದ್ಧಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರ ಇತರ ರಾಜ್ಯಗಳೊಡನೆ ನೇತೃತ್ವವಹಿಸಿಕೊಂಡು ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಸಂಪನ್ಮೂಲಕ್ಕಾಗಿ ಒತ್ತಾಯ ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

ಇನ್ನು ವಿದ್ಯುತ್ ಉತ್ಪಾದನೆ, ಇದರ ಬಗ್ಗೆ ಪ್ರಯತ್ನ ಮಾಡಿದ್ದಾರೆ. ಶೇಕಡ 16ರಷ್ಟು ಭಾಗೆ ಉತ್ಪಾದನೆ ಜಾಸ್ತಿಯಾಗುವ ಸಂಭವವಿದೆ, 6ನೇ ಯೋಜನೆಯಲ್ಲಿ 408.9 ಕೋಟಿ ರೂ.ಗಳ ಬದಲಿಗೆ

494 ಕೋಟಿ ರೂ.ಗಳನ್ನು ಖರ್ಚುಮಾಡಬೇಕೆಂದು ಸರ್ಕಾರ ತೀರ್ಮಾನಿಸಿದೆ. ಇದೇ ಸಂದರ್ಭದಲ್ಲಿ ಹಳ್ಳಿಗಾಡುಗಳಲ್ಲಿರತಕ್ಕ ರೈತರು ಮತ್ತು ಕುಶಲ ಕರ್ಮಿಗಳು ಏನಿದ್ದಾರೆ ಅವರಿಗೆ ವಿಶೇಷವಾಗಿ ನೆರವಾಗಬೇಕೆನ್ನುವ ದೃಷ್ಟಿಯಿಂದ ಕನಕಪುರ, ಪೀಣ್ಯ, ಜಮಖಂಡಿ, ಕೋಲಾರ, ಬೀದರ್ ಮತ್ತು ಇಂಡಿಗಳಲ್ಲಿ ಹೆಚ್ಚಿನ ವಿದ್ಯುತ್ ಸರಬರಾಜಿಗೆ ವ್ಯವಸ್ಥೆ ಮಾಡುವ ಪ್ರಯತ್ನ ಸಾಗಿದೆ. ಇದರಿಂದ ಯಾರಿಗೆ ವಿದ್ಯುತ್ ಖೋತಾ ಸಂಭವಿಸಿದೆ ಅಂಥವರಿಗೆ ವಿದ್ಯುತ್ ಸರಬರಾಜು ಪರಿಸ್ಥಿತಿ ಸುಧಾರಿಸಲು ಸಹಾಯವಾಗುತ್ತದೆ, ಒಟ್ಟಿನಲ್ಲಿ ಆಯವ್ಯಯದಲ್ಲಿ ಇದರ ಬಗ್ಗೆ ಪ್ರಯತ್ನಿಸಿರುವುದು ಒಳ್ಳೆಯ ಸಂಗತಿ.

ಇನ್ನು ಕನ್ನಡದ ಬಗ್ಗೆ ಹೇಳುವುದಾದರೆ ಕನ್ನಡವನ್ನು ರಾಜ್ಯದ ಎಲ್ಲ ಹಂತಗಳಲ್ಲೂ ಯಶಸ್ವಿಯಾಗಿ ಜಾರಿಗೆ ತರುವ ಕೆಲಸದಲ್ಲಿ ಸಾಕಷ್ಟು ಮಟ್ಟಿಗೆ ಯಶಸ್ವಿಯಾಗಿದೆ. ಒಂದೇ ಒಂದು ಹೇಳಬೇಕೆಂದರೆ ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿದ್ದ ಒಟ್ಟು ಬೆರಳಚ್ಚು ಯಂತ್ರಗಳ ಸಂಖ್ಯೆ 1790 ಆದರೆ 1985–86ನೇ ಸಾಲಿನಲ್ಲಿ ಒಂದೇ ಬಾರಿಗೆ 2300 ಬೆರಳಚ್ಚು ಯಂತ್ರಗಳನ್ನು ಸರ್ಕಾರ ಕೊಳ್ಳಲು ಆಲೋಚನೆ ಮಾಡಿದೆ. ಕನ್ನಡದ ಬಗ್ಗೆ ಮಾತನಾಡಬೇಕಾದರೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಕನ್ನಡ ಚಲನಚಿತ್ರಗಳಿಗೆ ಈಗ ಕೊಡುತ್ತಿರುವ ಒಂದೂವರೆ ಲಕ್ಷ ರೂ ಗಳ ಸಹಾಯಧನವನ್ನು ಮೂರು ಲಕ್ಷ ರೂ.ಗಳಿಗೆ ಏರಿಸಿದರೆ ಕನ್ನಡ ಚಿತ್ರರಂಗ ಉದ್ಧಾರವಾಗುತ್ತದೆ ಎಂಬ ಯೋಚನೆ ಸರ್ಕಾರ ಮಾಡಿದಂತಿದೆ, ಆದರೆ ಇದು ಅಷ್ಟೇನೂ ಒಳ್ಳೆಯ ಫಲಿತಾಂಶ ಕೊಡದು ಇದರ ಬದಲು ಕನ್ನಡದಲ್ಲಿ ಇರುವ ಹೆಮ್ಮೆಯ ಕಾದಂಬರಿಗಳನ್ನು ಅಷ್ಟೇ ಒಳ್ಳೆಯ ರೀತಿಯಲ್ಲಿ ಆಧರಿಸಿದ ಚಿತ್ರಗಳಿಗೆ, ಕರ್ನಾಟಕದಲ್ಲಿ ಇರುವ ಇತಿಹಾಸ ಪ್ರಸಿದ್ಧ ಸ್ಥಳಗಳನ್ನಾಧರಿಸಿ ತಯಾರಿಸಿದ ಚಿತ್ರಗಳಿಗೆ, ಕನ್ನಡದ ವೀರಾಧಿವೀರರ ಜೀವನವನ್ನು ಆಧರಿಸಿ ತಯಾರಿಸಿದ ಚಿತ್ರಗಳಿಗೆ ಈ ಸೌಲಭ್ಯವನ್ನು ಸೀಮಿತಗೊಳಿಸಿದ್ದಿದ್ದರೆ, ಒಳ್ಳೆಯದಾಗುತ್ತಿತ್ತು. ಆದರೆ ಇಂದು ಕನ್ನಡದಲ್ಲಿ ತಯಾರಾಗುತ್ತಿರುವ ಹೊಡೆದಾಟದ ವಿಚಿತ್ರ ಕಿರುಚಾಟದ, ಅಸಹ್ಯ ಒದ್ದಾಟಗಳ ಚಿತ್ರಗಳಿಗೆಲ್ಲ ಈ ಸೌಲಭ್ಯವನ್ನು ಕೊಟ್ಟರೆ ಹೇಗೆ ಉದ್ಧಾರವಾಗುತ್ತದೆ? ಆದುದರಿಂದ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು.

ಎರಡನೆಯದಾಗಿ ಶಿಕ್ಷಣದ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ರಾಷ್ಟ್ರೀಯ ಬಹುಮಾನ ಪಡೆದ ರಾಜ್ಯದ ಶಿಕ್ಷಕರಿಗೆ 25,000 ಮತ್ತು 10,000 ರೂ. ಕೊಡುವ ಯೋಜನೆ ಇದೆ. ನಮ್ಮಲ್ಲಿ ಹಳ್ಳಿಗಾಡುಗಳಿಂದ ಬಂದಿರತಕ್ಕ ಎಷ್ಟೋ ಜನ ಒಳ್ಳೆಯ ಶಿಕ್ಷಕರಿದ್ದಾರೆ. ಅವರು ಎಲೆಯ ಮರೆಯ ಕಾಯಿಯಂತಿದ್ದಾರೆ, ಇಂಥ ಶಿಕ್ಷಕರನ್ನು ಆಯ್ಕೆ ಮಾಡುವುದು ಮುಖ್ಯವಾಗಿ ಸರಿಯಾಗಿ ಆಗಬೇಕಾದ ಕೆಲಸವಾಗಿದೆ. ಸರ್ಕಾರದ ಅಧಿಕಾರಿಗಳು ಸ್ವಜನ ಪಕ್ಷಪಾತ ಮತ್ತು ಭ್ರಷ್ಟತೆಗೆ ಒಳಗಾಗುವುದು ಸಾಮಾನ್ಯ. ಆ ಥರ ಇಲ್ಲಿಯೂ ಆಗಲಾರದು ಎಂಬ ಭಾವನೆ ಏನಿಲ್ಲ. ಅನೇಕ ಜನ ಪ್ರಶಸ್ತಿ ಪಡೆದಂಥವರು ಅದಕ್ಕೆ ಯೋಗ್ಯವಾಗಿಲ್ಲ. ಸರಿಯಾಗಿ ಕೆಲಸ ಮಾಡಿಲ್ಲ. ನೀವು ಕೊಡತಕ್ಕಂಥ ಪ್ರಶಸ್ತಿ ಧನ ಏನಿದೆ ಅದು ಸಂಬಂಧಪಟ್ಟವನು ಶಿಕ್ಷಣ ಕ್ಷೇತ್ರದಲ್ಲಿ ಯಾವುದಾದರೂ ಹೊಸ ಶಾಲೆಯನ್ನು ತೆರೆದು ಆದರ್ಶೋಸ್ಕರ ಬಹುಕಾಲ ದುಡಿದವರಿಗೆ, ಅಥವಾ ಮಕ್ಕಳಿಗೆ ಉಪಯುಕ್ತವಾದಂಥ ಸಾಹಿತ್ಯ ನಿರ್ಮಾಣ ಮಾಡಿರುವವರಿಗೆ ಆದರ್ಶ ಶಿಕ್ಷಕ ಜೀವನ ನಡೆಸಿರುವವರಿಗೆ ಇದನ್ನು ಕೊಡಬೇಕು. ಅಲ್ಲದೆ ಯಾರ ಒತ್ತಾಯಕ್ಕಾಗಲೀ. ಆಮಿಷಕ್ಕಾಗಲೀ ಪ್ರಶಸ್ತಿಯ ಆಯ್ಕೆ ಆಗಕೂಡದು. ಏನೇ ಆದರೂ ಈ ಪ್ರಶಸ್ತಿ ನೀಡಿಕೆಯನ್ನು ನಾನು ಸ್ವಾಗತ ಮಾಡುತ್ತೇನೆ.

ಅಲ್ಪಸಂಖ್ಯಾತರ ನಿಗಮದ ವಿಚಾರ. ಮಾನ್ಯ ದೇವರಾಜ ಅರಸು ಅವರು ಈ ಸಮಾಜದಲ್ಲಿ ಆರ್ಥಿಕವಾಗಿ ರಾಜಕೀಯವಾಗಿ ಹಿಂದುಳಿದಿರತಕ್ಕ ಅಲ್ಪಸಂಖ್ಯಾತರನ್ನು ಹೊಡೆದೆಬ್ಬಿಸಿದ್ದರು. ಇದರ ಬಗ್ಗೆ ಅವರಿಗೆ ಕೃತಜ್ಞತೆಗಳು ಸಲ್ಲಬೇಕು. ಆ ಕೆಲಸವನ್ನು ಇಂದಿನ ಸರ್ಕಾರ ಮುಂದುವರೆಸಿ ರಾಜ್ಯದ ಅಲ್ಪಸಂಖ್ಯಾತ ಜನ ಇತರೇ ಜನರೊಂದಿಗೆ ಸರಿಸಮಾನವಾಗಿ ಎಲ್ಲ ರಂಗಗಳಲ್ಲೂ ಪ್ರವರ್ಧಮಾನಕ್ಕೆ ಬರಲಿ ಎಂಬ ಉದ್ದೇಶದಿಂದ ಸ್ಥಾಪಿಸಿರುವ ನಿಗಮಕ್ಕೆ 1 ಕೋಟಿ ರೂ.ಗಳ ಮೂಲಧನವನ್ನು ಒದಗಿಸಿ ಕೊಟ್ಟಿರುವುದು ಸಾಹಸದ ಒಂದು ಕೆಲಸ. ಯಾರು ದೇವರಾಜ ಅರಸು ಅವರ ಹೆಸರನ್ನು ಕೇವಲ ಹೇಳಿಕೊಂಡು ತಿರುಗಿ ಏನೂ ಕೆಲಸ ಮಾಡಲಿಲ್ಲವೋ ಅಂಥವರು ಮಾಡಬೇಕಾಗಿದ್ದ ಕೆಲಸವನ್ನು ಸ್ವಯಂ ಜನತಾ ಸರ್ಕಾರ ಮಾಡಿದೆ. ಅದಕ್ಕಾಗಿ ಮಾನ್ಯ ಹೆಗಡೆಯವರಿಗೆ ಕೃತಜ್ಞತೆಗಳು. ಇದನ್ನು ನಾನು ಸಮರ್ಥಿಸುತ್ತೇನೆ.

ಇನ್ನು ಮಹಿಳೆಯರ ಕಲ್ಯಾಣದ ಬಗ್ಗೆ. ಈ ದೇಶದಲ್ಲಿ, ಇಡೀ ಅಂತರರಾಷ್ಟ್ರೀಯವಾಗಿ ಖ್ಯಾತಿ ಪಡೆದ ಶ್ರೀಮತಿ ಇಂದಿರಾಗಾಂಧಿಯವರು ದೇಶದ ಪ್ರಧಾನಿಯಾಗಿದ್ದರು. ಇಂದು ನಾವು ಮಹಿಳೆಯರಿಗಾಗಿ ಕೈಗೊಂಡಿರುವ ಕೆಲಸವನ್ನು ಅವರೇ ಅಂದು ಮಾಡಬಹುದಾಗಿತ್ತು. ಆದರೆ ಅವರು ಮಾಡಲಿಲ್ಲ. ತಆದರೆ ಜನತಾ ಸರ್ಕಾರ ಮಾಡಿದೆ. ಮಹಿಳೆಯರಿಗಾಗಿ ಒಂದು ನಿಗಮವನ್ನೇ ಸ್ಥಾಪನೆ ಮಾಡಿದೆ. ಇದು

ಇಡೀ ದೇಶದಲ್ಲೇ ಎಲ್ಲೂ ಇಲ್ಲ. ಜೊತೆಗೆ ಮಹಿಳೆಯರಿಗೆ ನಾನಾ ರೀತಿಯಿಂದ ರಕ್ಷಣೆ ನೀಡಲು ನಮ್ಮ ಸರ್ಕಾರ ಕಾರ್ಯಕ್ರಮ ಕೈಕೊಂಡಿದೆ. ಅದರಲ್ಲಿ ಮುಖ್ಯವಾಗಿ ಹಿಂದೂ ಅವಿಭಕ್ತ ಕುಟುಂಬಗಳ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ದಾಯಾದಿ ಹಕ್ಕುಗಳನ್ನು ನೀಡಲು ಶಾಸನವೊಂದನ್ನು ತರಲು ಸರ್ಕಾರ ಪ್ರಯತ್ನ ಮಾಡಿದೆ. ಇದೊಂದು ಚಾರಿತ್ರಿಕವಾದ ಮತ್ತು ಐತಿಹಾಸಿಕವಾದಂಥ ಶಾಸನವೆಂದು ಹೇಳಬಹುದು. ಇಲ್ಲಿಯುವರೆಗೆ ನಾನಾ ಕ್ಷೇತ್ರಗಳಲ್ಲಿ ಚುನಾವಣೆಗಳು ನಡೆದಿವೆ. ಮಹಿಳೆಯರು ಇಲ್ಲಿಯವರೆಗೆ ಸಾಮಾನ್ಯವಾಗಿ ಜನರಲ್ ಕ್ಷೇತ್ರದಲ್ಲಿ ನಿಂತು ಆರಿಸಿ ಬರುತ್ತಿದ್ದರು. ಆದರೆ ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಪುರಸಭೆ ಚುನಾವಣೆಗಳೇ ಆಗಲಿ, ಕಾರ್ಪೊರೇಷನ್ ಚುನಾವಣೆಗಳೇ ಆಗಲೀ, ಶೇಕಡಾ ಇಪ್ಪತ್ತರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಇಡೀ ದೇಶದಲ್ಲಿ ಇಂತಹ ಒಂದು ವ್ಯವಸ್ಥೆಯನ್ನು ಯಾವ ರಾಜ್ಯಗಳಲ್ಲಿಯೂ ಮಾಡಿಲ್ಲ. ಪಂಚಾಯತ್ ಮಸೂದೆಯಲ್ಲಿ ಇದನ್ನು ಶೇಕಡಾ 25ಕ್ಕೆ ಹೆಚ್ಚು ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡಿದೆ. ವಿಧವೆಯರಿಗೆ ಮಾಸಾಸನ ಕೊಡುವ ವ್ಯವಸ್ಥೆಯೂ ಜಾರಿಗೆ ಬಂದಿದೆ. ಯಾವುದೇ ವಯಸ್ಸಿನಲ್ಲಿ ಗಂಡ ಸಾಯಲಿ, ಅಂತಹ ಮಹಿಳೆಯರಿಗೆ ಬೇರೆ ಕಡೆಯಿಂದ ರಕ್ಷಣೆ ಸಿಗದಿದ್ದರೆ ಸರ್ಕಾರವೇ ರಕ್ಷಣೆ ಕೊಡಬೇಕೆಂದುಕೊಂಡು ಮಾಸಾಸನ ಕೊಡುವ ವ್ಯವಸ್ಥೆ ಜಾರಿಗೆ ಬಂದಿದೆ. ಇದರ ಜೊತೆಗೆ ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಬಡವರಾದಂಥ ಗರ್ಭಿಣಿ ಹೆಂಗಸರಿಗೆ ಮೂರು ತಿಂಗಳ ಕಾಲ ಹೆರಿಗೆ ಭತ್ಯ ಕೊಡುವ ಯೋಜನೆಯನ್ನು ಜಾರಿಗೆ ತರಲಾಗಿದೆ. ಇಡೀ ದೇಶದಲ್ಲಿಯೇ ಮೊದಲನೆಯದಾಗಿ ನಮ್ಮ ಮಾನ್ಯ ರಾಮಕೃಷ್ಣ ಹೆಗಡೆಯವರ ಜನತಾ ಸರ್ಕಾರ ಇಂತಹ ಯೋಜನೆ ಒಂದನ್ನು ಜಾರಿಗೆ ತಂದಿದೆ. ನಮ್ಮ ಸರ್ಕಾರ ಯಾವಯಾವ ವರ್ಷಗಳಲ್ಲಿ ಈ ಬಾಬುಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಿದೆ ಎಂಬ ವಿವರಗಳನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ, ವಯಸ್ಸಾದವರಿಗೆ ಮಾಸಾಸನ ಕೊಟ್ಟಿರುವುದು ಈ ರೀತಿ ಇದೆ. 1980-81ರಲ್ಲಿ 14.61 ಕೋಟಿ ರೂಪಾಯಿಗಳು. 1981-82ರಲ್ಲಿ 17,15 ಕೋಟಿ ರೂಪಾಯಿಗಳು. 1982-83ರಲ್ಲಿ 19.75 ಕೋಟಿ ರೂಪಾಯಿಗಳು. 1983-84ರಲ್ಲಿ 25.65 ಕೋಟಿ ರೂಪಾಯಿಗಳು 1984-85ರಲ್ಲಿ 30.50 ಕೋಟಿ ರೂಪಾಯಿಗಳು. ಈ ಯೋಜನೆ 1980-81ರಲ್ಲಿ ಜಾರಿಗೆ ಬಂದರೂ ಅಲ್ಲಿಂದ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣ ಒಂದಕ್ಕೆ ಎರಡರಷ್ಟು ಹೆಚ್ಚಾಗಿದೆ. ವಿಧವೆಯರಿಗೆ ಮಾಸಾಸನ ಕೊಟ್ಟಿರುವ ಲೆಕ್ಕ ತೆಗೆದುಕೊಂಡರೆ, 1982 ರಿಂದ 1984ರವರೆಗೆ ಈ ಯೋಜನೆ ಜಾರಿಯಲ್ಲಿರಲಿಲ್ಲ ; ಆದರೆ 1984-85ರಲ್ಲಿ 3 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಲಾಗಿದೆ. ಅದೇ ರೀತಿ ಗರ್ಭಿಣಿ ಹೆಂಗಸರಿಗೆ 1984-85ರಲ್ಲಿ ಹೆರಿಗೆ ಭತ್ಯ ಕೊಡಲು 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ರೈತರಿಗೆ ಕೊಟ್ಟಿರುವ ರಿಯಾಯಿತಿಗಳ ಲೆಕ್ಕಕ್ಕೆ ಬಂದರೆ, ಸಹಕಾರಿ ಇಲಾಖೆ ಮೂಲಕ 1983-84ರಲಿ 8.64 ಕೋಟಿ ರೂಪಾಯಿಗಳನ್ನು 1984-85ರಲ್ಲಿ 51.37 ಕೋಟಿ ರೂಪಾಯಿಗಳನ್ನು ರೈತರಿಗೆ ರಿಯಾಯಿತಿ ಕೊಡಲಾಗಿದೆ. ಸರ್ಕಾರದಿಂದ ರೈತರಿಗೆ 1984-85ರಲ್ಲಿ 12.47 ಕೋಟಿ ರೂಪಾಯಿಗಳನ್ನು ರಿಯಾಯಿತಿ ರೂಪದಲ್ಲಿ ಕೊಡಲಾಗಿದೆ. ಮತ್ತೆ ಇಲ್ಲಿಯವರೆಗೆ ರೈತರು ಬ್ಯಾಂಕ್‌ಗಳಿಂದ ಇಲ್ಲವೇ ಸಹಕಾರಸಂಘಗಳಿಂದ ಬಾವಿ ತೆಗೆಸಲು ಸಾಲ ತೆಗೆದುಕೊಂಡು, ಬಾವಿಯಲ್ಲಿ ನೀರು ಬರದಿದ್ದರೂ ಸಹ ಬಾವಿಯ ಸಾಲವನ್ನು ವಾಪಸ್ ಮಾಡಬೇಕಾಗಿತ್ತು. ಆದರೆ ಬಾವಿಯಲ್ಲಿ ನೀರು ಬರದಿದ್ದರೆ ಸಾಲ ವಾಪಸ್ ಕೇಳುವುದು ಸರ್ಕಾರದ ನೈತಿಕ ಹಕ್ಕಲ್ಲವೆಂದು ನಮ್ಮ ಜನತಾ ಸರ್ಕಾರ ಭಾವಿಸಿಕೊಂಡು 1984-85ರಲ್ಲಿ ಸುಮಾರು 6.73 ಕೋಟಿ ರೂಪಾಯಿಗಳಷ್ಟು ಇಂತಹ ಸಾಲಗಳಿಗೆ ಸರ್ಕಾರ ಪರಿಹಾರ ಕೊಡುವುದರ ಮೂಲಕ ರೈತರ ಸಾಲವನ್ನು ವಜಾ ಮಾಡಿದೆ. ಸೇಲ್ಸ್‌ಟ್ಯಾಕ್ಸ್ ಮತ್ತು ಪ್ರೊಫೆಷನಲ್ ಟ್ಯಾಕ್ಸ್‌ಗೆ ಸಂಬಂಧಪಟ್ಟಂತೆ 1983-84ರಲ್ಲಿ 16.03 ಕೋಟಿ ರೂಪಾಯಿಗಳನ್ನು ಮತ್ತು 1984-85ರಲ್ಲಿ 3 ಕೋಟಿ ರೂಪಾಯಿಗಳನ್ನು ರಿಯಾಯಿತಿ ರೂಪದಲ್ಲಿ ಕೊಡಲಾಗಿದೆ.

ಇನ್ನು ಓವರ್-ಡ್ರಾಫ್ಟ್ಸ್ ಬಗ್ಗೆ ಮತ್ತು ಕೊರತೆ ಬಜೆಟ್ ಬಗ್ಗೆ ಇಲ್ಲಿ ಮಾನ್ಯ ಸದಸ್ಯರುಗಳು ನಾನಾ ರೀತಿಯಲ್ಲಿ ಆಪಾದನೆಗಳನ್ನು ಮಾಡುತ್ತಾರೆ. ಆದ್ದರಿಂದ ನಾನು ಇದೇಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಮೂರು ನಾಲ್ಕು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಸುಯತ್ತೇನೆ. ಓವರ್ ಡ್ರಾಫ್ಟ್ ವಿಚಾರದಲ್ಲಿ ಕೇಂದ್ರಸರ್ಕಾರ ನಮಗೆ ಯಾವ ರೀತಿ ಹಣ ಕೊಟ್ಟಿಲ್ಲ ಎಂಬ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಹೈಯರ್ ಪ್ಲಾನ್ ಎಕ್ಸ್‌ಪೆಂಡೀಚರ್ ಬಾಬಿನಲ್ಲಿ ಈ ಕೆಳಕಂಡಂತೆ ಹಣ ಖರ್ಚು ಮಾಡಲಾಗಿದೆ.—

Higher plan expenditure :

For achieving the higher rate of development, the actual plan expenditures exceeded the approved outlays by substantial amounts, as shown below :

Year	Approved outlay	Actual exenditure
1980-81	392.55	389 43
1981-82	423.90	456-60
1982-83	475.00	525-89
1983-84	475.00	626-98
1984-85	650.28	711-81 (RE)

Higher exgenditure on Irrigation :-

In addition to the investments made under the annual plans, the following expenditure was incurred on irrigation projects pending approval with a view to maximising the irrigation facilities in the State, and thereby improve the rural economy. During 1980-85, the additional expenditure this uncurred is shown below :—

Yeer	(in crores)
1980-81	25.17
1981-82	25-55
1982-83	32-10 (RE)
1983-84	44.16 (RE)
1984-85	62.56 (RE)

ಇನ್ನು ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಬರಗಾಲ ಬಂತು. ಬರಗಾಲಕ್ಕಾಗಿ ಖರ್ಚು ಮಾಡಿರುವಂತಹ ಹಣ 166.48 ಕೋಟಿ ರೂಪಾಯಿಗಳು. Here, the sanctioned ceilings by the Government of India, is 32.73 crores and the Central assistance received was only Rs. 29.73 crores. ಅಂದರೆ ನಮ್ಮ ರಾಜ್ಯ ಇದಕ್ಕಾಗಿ ಏನು ಹಣ ಖರ್ಚು ಮಾಡಿದೆ, ಅದರಲ್ಲಿ ಕಾಲು ಭಾಗದಷ್ಟು ಕೂಡ ಕೇಂದ್ರದಿಂದ ನಮಗೆ ಬರಲಿಲ್ಲ, ಆದರೂ ಸಹ ಜನರು ಕಷ್ಟದಲ್ಲಿದ್ದಾರೆಂಬ ಕಾರಣದಿಂದ ತನ್ನದೇ ಆದಂಥ ಹಣವನ್ನು ಖರ್ಚು ಮಾಡುವುದರ ಮೂಲಕ ಜನತೆಗೆ ಪರಿಹಾರವನ್ನು ಒದಗಿಸಿದೆ. ನಮ್ಮ ರಾಜ್ಯಸರ್ಕಾರ ಜಾಸ್ತಿ ಹಣ ಖರ್ಚು ಮಾಡಲು ಬಂದಂಥ ಮತ್ತೊಂದು ಬಾಬು ಎಂದರೆ ಡಿ.ಎ. ಪೇಮೆಂಟ್ಸ್. ಅವರ ವಿವರ ಈ ರೀತಿ ಇದೆ.—DA Payments : Following the release of D.A. instalments by the Union Government, the State Government was left with no option but to make the D.A. payments to its employees. As a result, the expenditure on D.A. payments which was only Rs. 17.57 crores in 1980-81 rose to 285,21 crores of rupees in 1984-85 as can be seen from the following facts :—

Years	Rs. in crores
1980-81	17.57
1981-82	74-02
1982-83	149-78
1983-84	204-94
1984-85	282-21

ಕೇಂದ್ರಸರ್ಕಾರ ತನ್ನ ನೌಕರರಿಗೆ ಡಿ.ಎ. ಬಾಬ್ತು ಹಣ ಜಾಸ್ತಿ ಮಾಡಿದ ಕಾರಣದಿಂದ ನಮ್ಮ ಸರ್ಕಾರವೂ ಸಹ ತನ್ನ ನೌಕರರಿಗೆ ಡಿ ಎ. ಜಾಸ್ತಿ ಮಾಡಬೇಕಾಗಿ ಬಂತು. ಇದರಿಂದ ಜಾಸ್ತಿ ಖರ್ಚು ಬಂತು. ಆದರೆ ಕೇಂದ್ರದಿಂದ ಮಾತ್ರ ನಮಗೆ ಬರಬೇಕಾದ ನ್ಯಾಯಯುತವಾದಂಥ ಪಾಲು ಬರಲಿಲ್ಲ.

These are all the documents which I want to bring to the notice of the Chair. **The revenue losses due to non implementation of Eight Finance Commission's Award during 1984-85 :—**

The Eighth Finance Commission Report was to have been treated as almost an award and it should have been implemented from 1984-85 itself. But, the Government of India did not implement this during 1984-85. The reasons reported are that they took note of the interim report and also there was a resource constraint. Non-implementation for one year out of the five year period award has meant a loss of Rs. 150 crores to Karnataka.

Debt Relief :—

The debt relief given to the State by way of write off on the basis of the recommendations of the Eighth Finance Commission to Karnataka was only Rs. 48.45 crores while in respect of several other States it ranged from Rs. 196 crores to Rs. 338 crores.

Grants-in-aid under Article 275 :—

The Eighth Finance Commission gave substantial grants-in-aid under article 275 to states which were determined as having deficits. Karnataka, however, was assessed as a State with a surplus and therefore, no grant-in-aid was recommended under articles 275 In the case of 5 other States, grants-in-aid given under article 275 varied from Rs. 43 crores to Rs. 444 crores.

No Grants for Upgradation of Services :—

The Eighth Finance commission awarded substantial grants for upgradation of services in different States for Karnataka, no grants were recommended. In respect of several States, the grants awarded for upgradation of services varied from Rs. 63 crores to Rs. 158 crores.

63 ಕೋಟಿಯಿಂದ 158 ಕೋಟಿ ರೂ.ವರೆಗೆ ಅಪ್‌ಗ್ರೇಡೇಷನ್ ಎಂದು ಕೇಂದ್ರ ಸರ್ಕಾರ ಬೇರೆಯವರಿಗೆ ಕೊಟ್ಟಿದೆ ನಮಗೆ ಕೊಟ್ಟಿಲ್ಲ 275ನೇ ರಾಜ್ಯಾಂಗದ ಕಾಲಂವಿನ ಪ್ರಕಾರ ನಮಗೆ ಏನು ಸರ್‌ಪ್ಲಸ್ ಎಂದು ಕೊಡಬೇಕಾಗಿತ್ತೋ, ಅದನ್ನು ಕೊಟ್ಟಿಲ್ಲ. ಬೇರೆ 5 ರಾಜ್ಯಗಳಿಗೆ ಕೊಟ್ಟಿದ್ದಾರೆ. 43 ಕೋಟಿ ರೂ.ನಿಂದ 444 ಕೋಟಿ ರೂ ವರೆಗೆ ಅವರಿಗೆ ಕೊಟ್ಟಿದ್ದಾರೆ, ಕೇಂದ್ರದ ಬಗ್ಗೆ ದೂರುತ್ತಿದ್ದೇವೆಂದು ಈ ಮಾತನ್ನು ಹೇಳುತ್ತಿಲ್ಲ. ನಾವು ಹೇಳತಕ್ಕಂಥಾದ್ದು ಏನೆಂದರೆ. ನಮಗೆ ಅರೆಹೊಟ್ಟೆಗೆ ಏಕೆ ಕೊಡುತ್ತಿದ್ದೀರಿ. ಅದನ್ನು ಪೂರ್ತಿಯಾಗಿ ಕೊಟ್ಟರೆ, ನಮಗೆ ಪೂರ್ತಿಯಾಗಿ ಅನ್ನವನ್ನು ಒದಗಿಸಿ ಕೊಟ್ಟಂತಾಗುತ್ತದೆ. ಇದರ ಬಗ್ಗೆ ನಾವು ಕೇಂದ್ರದ ಜೊತೆಗೆ ಜಗಳ ಕಾಯುತ್ತಿಲ್ಲ ಎಂಬ ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತೇನೆ,

ಇನ್ನು ಸರ್ಕಾರಿ ನೌಕರರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರವು ತನ್ನ ನೌಕರರಿಗೆ ರಿವಿಜನ್ ಆಫ್ ಪೇ ಸ್ಕೇಲ್ ಮಾಡಬೇಕೆಂದು ಆಯೋಗವನ್ನು ರಚನೆ ಮಾಡಿದ್ದು, ಆ ಆಯೋಗ ಇಲ್ಲಿಯವರೆಗೆ ತಾತ್ಕಾಲಿಕ ವರದಿಯನ್ನು ಸಹ ಕೊಟ್ಟಿಲ್ಲ. ಮೈಸೂರು ನಗರದಲ್ಲಿ ನಡೆದ ಆಲ್ ಇಂಡಿಯಾ ರೈಲ್ವೆ ಫೆಡರೇಷನ್ ಸಭೆಗೆ ನಾನೂ ಹಾಜರಾಗಿದ್ದೆ. ಕೇಂದ್ರ ಸರ್ಕಾರ

ಈ ವಿಷಯದ ಬಗ್ಗೆ ಶಿಫಾರಸ್ಸು ಮಾಡುವುದಕ್ಕೆ ಮೊದಲೇ, ನಮ್ಮ ಸರ್ಕಾರ ತನ್ನ ಸರ್ಕಾರಿ ನೌಕರರಿಗೆ 50 ರೂ.ನಿಂದ 250 ರೂ.ವರೆಗೆ ಇಂಟರೀಂ ರಿಲೀಫ್ ಅನ್ನು ಕೊಟ್ಟಿದ್ದೆ. ಜೊತೆಗೆ ಒಂದು ಆಯೋಗವನ್ನು ನೇಮಕ ಮಾಡಿದೆ ಇದರಿಂದ ಸರ್ಕಾರದ ಮತ್ತು ಸರ್ಕಾರೀ ನೌಕರರ ಸಂಬಂಧ ಎಷ್ಟು ಹತ್ತಿರಕ್ಕೆ ಬೆಳಿದಿದೆ ಮತ್ತು ಅವರ ಸೌಹಾರ್ದ ಎಷ್ಟು ಹತ್ತಿರಕ್ಕೆ ಹೋಗಿದೆಯೆಂದು ತಿಳಿದುಕೊಳ್ಳಬಹುದು. ಸರ್ಕಾರಿ ನೌಕರರಿಗೆ ವಾರಕ್ಕೆ 2 ದಿನಗಳ ರಜಾ ಕೊಡತಕ್ಕಂತಹ ನೀತಿಯ ಬಗ್ಗೆ ನನ್ನ ವೈಯುಕ್ತಿಕ ಅಭಿಪ್ರಾಯ ಏನೆಂದರೆ, ಇದರಿಂದ ಬಹಳ ತೊಂದರೆಯಾಗುತ್ತದೆ. ಹಳ್ಳಿಗಾಡಿನ ರೈತರಿಗೆ ಮತ್ತು ಸಾರ್ವಜನಿಕರಿಗೆ ತಾಲ್ಲೂಕು ಕಚೇರಿ ಬಿಡಿಒ. ಕಚೇರಿ ಮತ್ತಿತರ ಕಚೇರಿಗಳಲ್ಲಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೆ ತೊಂದರೆಯಾಗುತ್ತದೆ. ಆ 2 ದಿವಸ ಸರ್ಕಾರಿ ಕೆಲಸ ನಿಂತುಹೋಗುತ್ತದೆ. ಆದ್ದರಿಂದ ಸರ್ಕಾರ ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಲಂಚದ ಬಗ್ಗೆ ಮಾತನಾಡುವಾಗ, ಇದರ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೀಗೆ ಹೇಳಿದ್ದಾರೆ. ಕ್ರಿ.ಪೂ. 321-396ರಲ್ಲಿ ಲಂಚ ತೆಗೆದುಕೊಂಡವನಿಗೆ ಕೈ ಕಡಿಯುತ್ತಾ ಇದ್ದರು ಎಂದು ಕೌಟಿಲ್ಯನ ಕಾಲದಲ್ಲೂ ಲಂಚ ಇತ್ತೆಂದು ಪರಿಣತರು ಒಪ್ಪಿಕೊಳ್ಳುತ್ತಾರೆ. ಈ ಲಂಚಗುಳಿತನ ನಮ್ಮ ಸಮಾಜದ ಪರಿಸರದಲ್ಲಿ ಬೆಳೆದುಕೊಂಡು ಬಂದಿದೆ. ಇದನ್ನು ನಮ್ಮ ಸರ್ಕಾರ ತಡೆಗಟ್ಟಬೇಕೆಂದು ಲೋಕಾಯುಕ್ತವನ್ನು ಜಾರಿಗೆ ತಂದಿದೆ. ಇದರಲ್ಲಿ ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರನ್ನೂ ಸೇರಿಸಿದ್ದಾರೆ. ಇದರ ಉದ್ದೇಶ ಏನೆಂದರೆ. ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲಿತನಕ ಲಂಚ ಇರುತ್ತದೆಯೋ ಅಲ್ಲಿಯತನಕ ಸರ್ಕಾರೀ ವ್ಯವಸ್ಥೆಯಲ್ಲಿ ಕೂಡ ಲಂಚ ಇರುತ್ತದೆ. ಈ ಶಾಸನವನ್ನು ಜಾರಿಗೆ ತರುವಂತಹ ಸಂದರ್ಭ ಬಂದಾಗ ದಯಾದಾಕ್ಷಿಣ್ಯವಿಲ್ಲದೆ, ಜಾರಿಮಾಡಬೇಕು. ದೇಶದ ರಾಜಕೀಯ ಇತಿಹಾಸದಲ್ಲಿ ಲಂಚಗುಳಿತನ ನಿರ್ಮೂಲನವನ್ನು ಪ್ರಾಮಾಣಿಕವಾಗಿ ಜಾರಿಗೆ ತಂದು, ಪ್ರಾಮಾಣಿಕ ರಾಜಕೀಯಕ್ಕೆ ಅಸ್ತಿಭಾರ ಹಾಕಲು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ

ಇನ್ನು ಹರಿಜನರ ಬಗ್ಗೆ ಹೇಳಬೇಕೆಂದರೆ, ಅದರ ಬಗ್ಗೆಯೂ ಸಾಕಷ್ಟು ಕೆಲಸವನ್ನು ನಿಮ್ಮ ಸರ್ಕಾರ ಮಾಡಿದೆ ಇಲ್ಲ ಎನ್ನತಕ್ಕಂತಹ ಸೌಜನ್ಯ ನನ್ನಲ್ಲಿ ಇಲ್ಲ ನಾನು ಯಾವುದೇ ಪಕ್ಷದಲ್ಲಿದ್ದರೂ ಕೂಡ ಹರಿಜನರ ಪರವಾಗಿ ಮಾತನಾಡಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ರಾಜಕೀಯ ಮೌಲ್ಯದ ಬಗ್ಗೆ ಮಾತನಾಡುತ್ತಾರೆ. ಮೌಲ್ಯದ ಬಗ್ಗೆ ಮಾತನಾಡುವಾಗ ಮೌಲ್ಯವನ್ನು ಜಾರಿಗೆ ತರತಕ್ಕಂತಹ ವ್ಯವಸ್ಥೆ ನಮ್ಮ ದೇಶದಲ್ಲಿ ಇದೆಯೋ ಎಂದು ವಿಚಾರಮಾಡಬೇಕು. ಕರ್ನಾಟಕದಲ್ಲಿ ಶೋಷಣೆಗೆ ಒಳಗಾದ ಜನ ಯಾರಿದ್ದರು, ಸಾವಿರಾರು ವರ್ಷದಿಂದ ತಲೆಯ ಮೇಲೆ ಹೊಲಸನ್ನು ಹೊರುವಂತಹ ಜನ ಯಾರಿದ್ದರು ಅಂತಹವರನ್ನು ಆ ಕೆಲಸದಿಂದ ವಿಮುಕ್ತಿಗೊಳಿಸಿದವರು ಶ್ರೀಮಾನ್ ಬಸವಲಿಂಗಪ್ಪನವರು. ರಾಜಕೀಯದಲ್ಲಿ ಸೌಜನ್ಯತೆಯನ್ನು ಪಡೆಯತಕ್ಕಂತಹ ಒಂದು ಕೆಲಸವನ್ನು ಅವರು ಮಾಡಿದ್ದಾರೆ. ಮೌಲ್ಯ ಇದ್ದವರಿಗೆ ಮೌಲ್ಯ ಇಲ್ಲವೆಂದು ಹೇಳುವಂತಹ ಸೌಜನ್ಯತೆಯನ್ನು ನಾನು ಕಳೆದುಕೊಳ್ಳುವುದಕ್ಕೆ ಯಾವತ್ತೂ ಸಿದ್ಧನಿಲ್ಲ. ನಮ್ಮ ಜನರ ಕೈಗೆ ಅಧಿಕಾರವನ್ನು ಕೊಡಬೇಕೆಂದು ಜಿಲ್ಲಾ ಪರಿಷತ್ ಮಸೂದೆಯನ್ನು ನಮ್ಮ ಸರ್ಕಾರದವರು ಇಂದು ಜಾರಿಗೆ ತರುವುದಕ್ಕೆ ಹೊರಟಿದ್ದಾರೆ. ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಹೊರಟಿದ್ದಾರೆ. ರೈತನು ತನ್ನ ಸಮಸ್ಯೆಯನ್ನು ಆ ಜಾಗದಲ್ಲಿಯೇ ಬಗೆಹರಿಸಿಕೊಳ್ಳುವ ವ್ಯವಸ್ಥೆ ಮಾಡುವುದಕ್ಕೆ ಇದನ್ನು ಜಾರಿಗೆ ತಂದಿದ್ದಾರೆ. ಈ ಮಸೂದೆಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ ಒಂದು ವರ್ಷದ ನಂತರ ಇದಕ್ಕೆ ಮಂಜೂರಾತಿ ಸಿಕ್ಕಿದೆ ಅದರಿಂದ ಅಧಿಕಾರ ಎಷ್ಟು ಜನರ ಕೈಗೆ ಹೋಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಒಟ್ಟು 3055 ಮಂಡಲ ಪಂಚಾಯಿತಿ ಆಗುತ್ತದೆ, 956 ಕ್ಷೇತ್ರಗಳು ಆಗುತ್ತವೆ. ಇವರ ಕೈಗೆ ಅಧಿಕಾರ ಹೋಗುತ್ತದೆ. ಯಾವ್ಯಾವ ಪಂಗಡದವರಿಗೆ ಎಷ್ಟೆಷ್ಟು ಸೀಟುಗಳನ್ನು ಹಂಚಿದ್ದಾರೆಂಬುದನ್ನು ಹೇಳಬಯಸುತ್ತೇನೆ. 27.280 ಜನರಲ್ ಸೀಟ್ಸ್‌ನಲ್ಲಿ 12.794 ಮಹಿಳೆಯರಿಗೆ ಇದೆ. ನಮ್ಮ ಮಹಿಳೆಯರು ನಮ್ಮ ರಾಜ್ಯದ ಆಡಳಿತದಲ್ಲಿ ಭಾಗವಹಿಸತಕ್ಕಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದೆ. ಅದರಲ್ಲೂ ಹಳ್ಳಿಗಾಡಿನ ಮಹಿಳೆಯರು ನಮ್ಮ ರಾಜ್ಯದ ಆಡಳಿತವನ್ನು ಕೈಗೆತ್ತಿಕೊಂಡು. ಹಳ್ಳಿಗಾಡಿನ ಸಮಸ್ಯೆ ಅಲ್ಲಿನ ರೈತರ ಸಮಸ್ಯೆ ಗೇಣಿ ಸಮಸ್ಯೆ ಮುಂತಾದವನ್ನೆಲ್ಲ ಬಗೆಹರಿಸುತ್ತಾರೆ ಇದರಲ್ಲಿ 8924 ಹರಿಜನರು ಭಾಗವಹಿಸುತ್ತಿದ್ದಾರೆ.

ಹರಿಜನರ ಬಗ್ಗೆ ಮಾತನಾಡಿದರೆ ಸಾಲದು, ಅವರ ಅನುಕೂಲಕ್ಕೆ ಏನಾದರು ಸಾಧನೆ ಮಾಡಬೇಕು. ಹರಿಜನರ ಉದ್ಧಾರ ಮಾಡುವುದಕ್ಕೆ ಸರಿಯಾದ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ರಾಜಕೀಯದಲ್ಲಿರುವ ಪ್ರತಿಯೊಬ್ಬರಿಗೂ ಹರಿಜನರ ಉದ್ಧಾರದ ಬಗ್ಗೆ ಗಮನ ಇರಬೇಕು, ಹರಿಜನರು

ನಮ್ಮ ಮನೆಯವರು ಎಂದು ತಿಳಿದುಕೊಳ್ಳಬೇಕು, ಇವರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಎಲ್ಲೀತನಕ ಹರಿಜನ ಉದ್ಧಾರ ಮಾಡುವುದಕ್ಕಾಗುವುದಿಲ್ಲ ಅಲ್ಲೀವರಿಗೆ ದೇಶ ಅಭಿವೃದ್ಧಿಯಾಗುವುದಿಲ್ಲ. ಸಮಾಜದಲ್ಲಿ ವರ್ಗರಹಿತ, ಜಾತಿರಹಿತವಾಗಬೇಕಾದರೆ ಮೊದಲು ಇವರನ್ನು ಮುಂದಕ್ಕೆ ತರಬೇಕು.

1-30 p.m.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಹರಿಜನರ ಬಗ್ಗೆ............

ಅಧ್ಯಕ್ಷರು.—ಈಗ ಪಾಯಿಂಟ್ ಆಫ್ ಆರ್ಡರ್ ಏನು ?

Sri B. Basavalingappa.—I am on a point of order Sir. Sir, there is no word like "Harijan" which is approved by the Government or by the Constitution of India. ಅನುಸೂಚಿತ ಜಾತಿ ಎಂದು ಸರ್ಕಾರವು ನೋಟಿಫಿಕೇಷನ್ ಇಶ್ಯೂ ಮಾಡಿದೆ. ಮಾನ್ಯ ಸದಸ್ಯರಿಗೆ ಹರಿಜನರ ಬಗ್ಗೆ ಬಹಳ ಆದರ ಇದ್ದರೆ, ಅನುಸೂಚಿತ ಜಾತಿಯವರು ಎಂದು ಹೇಳಲಿ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಬಸವಲಿಂಗಪ್ಪನವರು ನನಗಿಂತ ಹಿರಿಯರು ಅವರಿಗೆ ನಾನು ಒಂದು ವಿಷಯವನ್ನು ಹೇಳುತ್ತೇನೆ, ನಾನು ಹೇಳಿದ್ದು ಏಕೆ ಎಂದರೆ ಎಲ್ಲರೂ ಕೂಡ ಪ್ರಾಮಾಣಿಕವಾಗಿ ಅವರ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕು, ಪ್ರಯತ್ನವನ್ನು ಯೋಜನಾ ಬದ್ಧವಾಗಿ ಮಾಡಬೇಕು ಆಗ ಮಾತ್ರ ಹರಿಜನರು ಉದ್ಧಾರವಾಗುತ್ತಾರೆಂದು ನಾನು ಶಾಸಕನಾಗಿ ಹೇಳುತ್ತಿದ್ದೇನೆ.

Sri B. Basavalingappa.—ಮತ್ತೇ ಅದನ್ನೇ ಹೇಳುತ್ತಿದ್ದಾರೆ, He cannot call Harijan. I do not want him to call Harijan. Let him not repeat that word please.

ಅಧ್ಯಕ್ಷರು.—ಮಾನ್ಯ ಹೆಮ್ಮಿಗೆಯವರೇ, ಆದಷ್ಟು ಬೇಗ ಮುಗಿಸಿ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಈ ವಿಚಾರವನ್ನು ಹೆಚ್ಚಿಗೆ ಪ್ರಸ್ತಾಪ ಮಾಡದೇ, ವಿಷಯವನ್ನು ಮುಂದುವರಿಸುತ್ತೇನೆ. ಕೇಂದ್ರ ಸರ್ಕಾರಕ್ಕೆ ಬರುವ ಸೇಲ್ಸ್ ಟ್ಯಾಕ್ಸ್, ಇನ್‌ಕಮ್ ಟ್ಯಾಕ್ಸ್, ಎಕ್ಸೈಸ್ ಟ್ಯಾಕ್ಸ್ ಹಣವೆಲ್ಲಾ ಎಲ್ಲಿಂದ ಹೋಗುತ್ತದೆ ? ಈ ಹಣವೆಲ್ಲಾ ನಮ್ಮಿಂದ ಅವರಿಗೆ ಹೋಗುತ್ತದೆ. ಇದೇ ರೀತಿ ಎಲ್ಲಾ ರಾಜ್ಯಗಳಿಂದಲೂ ಕೇಂದ್ರಕ್ಕೆ ಹೋಗುತ್ತದೆ, ನಾವು ಅವರಿಗೆ ಕಟ್ಟಿಂತಹ ಹಣವನ್ನೇ ನಮಗೆ ಕೊಡುವುದಿಲ್ಲವೆಂದರೆ ಯಾವ ಧರ್ಮ ? ಕೆರೆಯ ನೀರನ್ನು ಕೆರೆಗೆ ಚೆಲ್ಲುವುದಕ್ಕೆ ಇವರ ಅಭ್ಯಂತರವೇನು ?

ಇನ್ನು ಈ ಸರ್ಕಾರದ ಸಾಧನೆ ಬಗ್ಗೆ ಕೇಂದ್ರ ಸರ್ಕಾರ ಹೇಳಿರತಕ್ಕಂತಹ ಒಂದು ಮಾತು ಏನು ಎಂದರೆ, ಈ ಸರ್ಕಾರ ಬಹಳ ಒಳ್ಳೆಯ ಕೆಲಸ ಮಾಡಿದೆ, ಹಾಗೂ ಚೆನ್ನಾಗಿ ಮಾಡಿದೆಯೆಂದು ಹೇಳಿ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ. ಈ ಸರ್ಕಾರದ ಸಾಧನೆಗೆ ಅನೇಕ ಸಾಕ್ಷಿಗಳು ಸಹ ಇವೆ. ಅಧ್ಯಕ್ಷರೇ ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನರ್ಸಿಂಗ್ ಹೋಮ್‌ಗಳಿಗೆ ಪ್ರತಿ ವರ್ಷ ತೆರಿಗೆಯಾಗಿ 250 ರೂಪಾಯಿಗಳನ್ನು ಕೊಡಬೇಕೆಂದು ನಿಗದಿ ಮಾಡಿದ್ದಾರೆ. ಈ ನರ್ಸಿಂಗ್ ಹೋಂಗಳು ಜನರನ್ನು ಸುಲಿಗೆ ಮಾಡತಕ್ಕಂಥ ವಿಷಯ ಏನು ಇದೆ ಅದನ್ನು ದರೋಡೆ ಎಂದು ಹೇಳಬಹುದು. ಆರೋಗ್ಯದ ಹೆಸರನ್ನು ಹೇಳಿಕೊಂಡು ವೈದ್ಯಕೀಯ ಟ್ರೀಟ್‌ಮೆಂಟ್ ಕೊಡುತ್ತೇವೆಂದು ಜನರಿಂದ ದರೋಡೆ ಮಾಡುತ್ತಿದ್ದಾರೆ. ಮೈಸೂರಿನಲ್ಲಿ ಒಂದು ಹೆರಿಗೆ ಮಾಡುವ ನರ್ಸಿಂಗ್ ಹೋಮ್ ಇದೆ ಇಲ್ಲಿಗೆ ಬರೀ ಅನುಕೂಲಸ್ಥರು ಮಾತ್ರ ಹೋಗಬಹುದು. ಬಡವರು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಇಂತಹ ನರ್ಸಿಂಗ್ ಹೋಮ್‌ಗಳಲ್ಲಿ ಕೆಲಸ ಮಾಡುವ ವೈದ್ಯರು ಗಂಟೆಗೆ 500 ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ, ಈ ಆಸ್ಪತ್ರೆಯಲ್ಲಿ ಒಂದು ಹೆರಿಗೆ ಮಾಡುವುದಕ್ಕೆ 800 ರೂಪಾಯಿಗಳನ್ನು ತೆಗೆದುಕೊಂಡಿರತಕ್ಕ ನಿದರ್ಶನಗಳು ಇವೆ. ಆದುದರಿಂದ ನಾನು ಹೇಳುವುದೇನೆಂದರೆ, 250 ರೂಪಾಯಿಗಳನ್ನು ಒಂದು ವರ್ಷಕ್ಕೆ ನರ್ಸಿಂಗ್ ಹೋಮ್‌ನವರು ಸರ್ಕಾರಕ್ಕೆ ಕೊಡಬೇಕೆಂದು ಏನು ನಿಯಮವನ್ನು ಮಾಡಿದ್ದೀರಿ ಅದನ್ನು ಬದಲಿಸಿ ನರ್ಸಿಂಗ್ ಹೋಮ್‌ನವರು ಸರ್ಕಾರಕ್ಕೆ ವರ್ಷಕ್ಕೆ 25,000 ಅಥವಾ 15,000 ಸಾವಿರ ರೂಪಾಯಿಗಳನ್ನು ಕಟ್ಟತಕ್ಕಂಥ ವ್ಯವಸ್ಥೆಯನ್ನು ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸಂವಿಧಾನ ಪ್ರಕಾರ 250 ರೂಪಾಯಿಗಳಿಂದ ಹೆಚ್ಚಿಗೆ ಹಾಕುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಹೆಮ್ಮಿಗೆಯವರೇ, ಬೇಗನೆ ಮುಗಿಸಿ.

ಶ್ರೀ ವೇದಾಂತ ಹೆಮ್ಮಿಗೆ.—ಜನರು ಬಹಳ ಉಪಯೋಗಿಸತಕ್ಕ 24 ಪದಾರ್ಥಗಳಿಗೆ ಜನತಾ ಸರ್ಕಾರ ತೆರಿಗೆಯನ್ನು ಹಾಕದೆ ಅನುಕೂಲ ಮಾಡಿಕೊಟ್ಟಿದೆ. ನಾನು ಇಷ್ಟು ಹೇಳುತ್ತೇನೆ, ಈಗ ಸರ್ಕಾರವು ಬಡವರಿಗೆ ಸೀರೆ, ಪಂಚೆ, ಮಕ್ಕಳಿಗೆ ಪುಸ್ತಕ, ಮದುವೆಯಾಗುವವರಿಗೆ ತಾಳಿ ಕೊಡುತ್ತದೆ, ಇಂತಹ ಪ್ರಗತಿ ಪರ ಕಾರ್ಯಗಳಿಗೆ ಯಾವುದೇ ರೀತಿಯ ರಾಜಕೀಯ ಒತ್ತಡ ಅಡ್ಡಬಂದರೂ ಅದನ್ನು ನಿಲ್ಲಿಸದೆ ವಿತರಣೆ ಮಾಡಬೇಕು, ಇದರಿಂದ ಜನ ಕಲ್ಯಾಣವಾಗುತ್ತದೆ. ಮಕ್ಕಳಿಗೆ ಪುಸ್ತಕಗಳನ್ನು ಕೊಡುವಲ್ಲಿ ಹಲವಾರು ತೊಂದರೆಗಳಾಗಬಹುದು, ಅದನ್ನು ಸರಿಪಡಿಸುತ್ತೇವೆ. ಜನತಾ ಸರ್ಕಾರವು ಜನರ ಬಳಿಗೆ ಹೋಗುತ್ತದೆ. ಆಯವ್ಯಯ ಪತ್ರದಲ್ಲಿ ಮಂಡಿಸಿರತಕ್ಕ ವಿಷಯಗಳಿಂದ ಕರ್ನಾಟಕದ ಜನತೆಗೆ ಆರ್ಥಿಕವಾಗಿ ಸಾಮಾಜಿಕವಾಗಿ ಸೌಲಭ್ಯದೊರಕುವಂತೆ ಮಾಡಿದ್ದಾರೆ ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ಆಭಾರಿಯಾಗಿರುತ್ತೇನೆ.

ಅಧ್ಯಕ್ಷರು.—ಧನ್ಯವಾದಗಳು,

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಒಂದು ನಿಮಿಷ ಈಗ ನಮ್ಮ ನಗರದಲ್ಲಿ ಸುಮಾರು 5 ಸಾವಿರ ಜನ ಪಿ.ಡಬ್ಲ್ಯೂ ಡಿ. ನೌಕರರು ದಸ್ತಗಿರಿಯಾಗಿದ್ದಾರೆ.

ಅಧ್ಯಕ್ಷರು.—ಯಾವ ರೂಲ್ಸ್ ಪ್ರಕಾರ ತಾವು ಮಾತನಾಡುತ್ತಿದ್ದೀರಿ, ಅದರ ಬಗ್ಗೆ ನೋಟೀಸ್ ಕೊಡಿ ನಂತರ ಮಾತನಾಡಿ.

ಶ್ರೀ ಪಂಪಾಪತಿ.—ಜನ ದಸ್ತಗಿರಿಯಾಗಿರುವಾಗ ಯಾವ ರೂಲ್ಸ್ ಪ್ರಕಾರ ಮಾತನಾಡುವುದು ?

(ಗೊಂದಲ)

ಶ್ರೀ ಪಂಪಾಪತಿ,—ದಸ್ತಗಿರಿಯಾದವರಲ್ಲಿ ಶಾಸಕರೂ ಸೇರಿದ್ದಾರೆ.

ಅಧ್ಯಕ್ಷರು.—ನೀವು ನೋಟೀಸನ್ನು ಕೊಡಿ ಅದಕ್ಕೆ ಉತ್ತರವನ್ನು ತರಿಸಿ ಕೊಡುತ್ತೇನೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ ತಮ್ಮ ಗಮನಕ್ಕೆ ತರುವುದೇನೆಂದರೆ............

ಅಧ್ಯಕ್ಷರು.—ಇದು ರೆಕಾರ್ಡಿಗೆ ಹೋಗುವುದಿಲ್ಲ. ನೀವು ಬರೆದು ಕಳುಹಿಸಿ.

ಶ್ರೀ ಪಂಪಾಪತಿ.—ಪಿ.ಡಬ್ಲ್ಯೂ.ಡಿ. ದಿನಕೂಲಿಯವರು 5 ಸಾವಿರ ಜನ ಇಲ್ಲಿಗೆ ಬಂದಿದ್ದಾರೆ, ಅವರನ್ನು ದಸ್ತಗಿರಿ ಮಾಡಲಾಗಿದೆ.

ಅಧ್ಯಕ್ಷರು.—ಯಾವುದೂ ರೆಕಾರ್ಡುಗಳಿಗೆ ಹೋಗುವುದಿಲ್ಲ. Dont record Not recorded as ordered by the Chair.

ಶ್ರೀ ಪಂಪಾಪತಿ,—ರೆಕಾರ್ಡಿಗೆ ಹೋಗುವುದು ಬೇಡ ಸ್ವಾಮಿ,

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ದಸ್ತಗಿರಿಯಾದವರಲ್ಲಿ ಸದಸ್ಯರಾದ ಭೂಪತಿಯವರು ಇದ್ದಾರೆ, ತಾವು ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ನೀವು ಬಹಳ ಸೀನಿಯರ್-ಮೋಸ್ಟ್ ಮೆಂಬರ್ ಎಂದು ನಾನು ತಿಳಿದುಕೊಂಡಿದ್ದೆ, ಈ ವಿಷಯವನ್ನು ಸದನದಲ್ಲಿ ಯಾವ ರೂಲ್ಸ್ ಪ್ರಕಾರ ಮಾತನಾಡುವುದಕ್ಕೆ ಹೊರಟಿದ್ದೀರಿ ? ಇದರ ಬಗ್ಗೆ ಬರೆದು ಕಳುಹಿಸುವುದಾದರೆ ಕಳುಹಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲಾ ರೂಲ್ಸ್ ಪ್ರಕಾರನೇ ಮಾತನಾಡುವುದಕ್ಕೆ ಸಾಧ್ಯವೆ ?

ಅಧ್ಯಕ್ಷರು.—ಇದು ಯಾವುದು ರೆಕಾರ್ಡಿಗೆ ಹೋಗುವುದಿಲ್ಲ. ನೀವು ಏನಾದರೂ ಬರೆದು ಕಳುಹಿಸುವುದಾದರೆ ಕಳುಹಿಸಿ.

ಶ್ರೀ ಪಂಪಾಪತಿ.—ನಾವು ಮಾತನಾಡುವುದಕ್ಕೆ ಮುಂಚೆಯೇ ನೀವು ಮಾತನಾಡಿದರೆ ನಾವು ಮಾತನಾಡುವುದು ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿಯೇ ಮುಖ್ಯ ಮಂತ್ರಿಗಳೂ ಇದ್ದಾರೆ, ; ....

ಅಧ್ಯಕ್ಷರು.—ಬೇಕಾದರೆ ಅವರ ಚೇಂಬರ್‌ಗೆ ಹೋಗಿ ಮಾತನಾಡಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆ ಸಮಯ ಕೊಡಿ ಸಾಕು.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

* ಶ್ರೀ ಕೆ. ಎಚ್. ಪಾಟೀಲ್ (ಗದಗ).—ಮಾನ್ಯ ಸಭಾಧಿಪತಿಗಳೇ, 1985–86ನೇ ಇಸವಿಗೆ, ಮಾನ್ಯ ಮುಖ್ಯಮಂತ್ರಿಗಳ ಅರ್ಥದಲ್ಲಿ ಅಂತಿಮವಾದ ಬಜೆಟ್ ಎಂದು ಹೇಳಿದ್ದರ ಬಗ್ಗೆ ನಾನು ಇಂದು ಮಾತನಾಡಲಿಕ್ಕೆ ಇಚ್ಛೆಪಡುತ್ತೇನೆ. ಅವರು ಮಾರ್ಚ್ ತಿಂಗಳಲ್ಲಿ ಭಾಷಣ ಮಾಡುವಾಗ ಇಂಟಿರಿಮ್ ಬಜೆಟ್ ಎನ್ನುವುದನ್ನು ಈ ಸಭೆಯ ಮುಂದಿಟ್ಟರು. ಇಂಟೀರಿಯಮ್ ಬಜೆಟ್ ಎಂದು ಹೇಳಿದ್ದರೂ ಸಹ ಅವರು ಪೂರ್ತಿಯಾಗಿ 1985-86ನೇ ಸಾಲಿನ ಬಜೆಟ್‌ನ್ನು ನಮ್ಮ ಎದುರಿಗೆ ಮಂಡಿಸಿದರು. ಅದರ ಬಗ್ಗೆ ಅನೇಕರು ಭಾಷಣಗಳನ್ನು ಮಾಡಿದ್ದಾರೆ, ಅವರೂ ಉತ್ತರಗಳನ್ನು ಕೊಟ್ಟರು. ಅಂದು ಅವರು ತೆಗೆದುಕೊಂಡ ಓಟ್ ಆನ್ ಅಕೌಂಟ್ ಇನ್ನೂ ಎರಡು ತಿಂಗಳ ಕಾಲ ಅಸ್ತಿತ್ವದಲ್ಲಿ ಇದೆ. ಇಂತಹ ಸಂದರ್ಭದಲ್ಲಿ ಮತ್ತೊಂದು ಬಜೆಟ್‌ನ ಮಂಡನೆಗೆ ಅವಕಾಶ ಇದೆಯೇ ? ಎಂಬ ಕಾನೂನಿನ ಪ್ರಶ್ನೆಯನ್ನು ನಾನು ಇಲ್ಲಿ ಕೇಳಲಿಚ್ಛಿಸುವುದಿಲ್ಲ. ಏಕೆಂದರೆ, ಒಮ್ಮೆ ಸಭಾಪತಿಯವರು ರೂಲಿಂಗ್ ಕೊಟ್ಟ ನಂತರ ಅದನ್ನು ಶಿರಸಾವಹಿಸಿ, ಕರ್ತವ್ಯ ಪಾಲನೆ ಮಾಡುವುದು ಸದಸ್ಯರ ಕರ್ತವ್ಯ. ಆದರೆ ನಾವು ಮಾತನಾಡುವಾಗ ಸದನದ ಎದುರಿಗೆ ಹೇಳದೇ ಇದ್ದರೆ ತಪ್ಪಾದೀತು ಎನ್ನುವ ದೃಷ್ಟಿಯಿಂದ ನಾನು ಮತ್ತೊಮ್ಮೆ ಪುನರುಚ್ಚರಿಸುತ್ತೇನೆ. ಹಿಂದೆ ಯಾವುದೇ ಸಂದರ್ಭಗಳಲ್ಲಿ ಆದ ಘಟನೆಗಳು ಬೇರೇ, ಈಗ ಬೇರೆ.

ಪ್ರಿಸಿಡೆಂಟ್ ಯಾವಾಗ ಆಗುತ್ತದೆ ? ಪ್ರಿಸಿಡೆಂಟ್ ಆಗಬೇಕಾದರೆ ಯಾವಾಗ ಕಾನ್ಸಿಟಿಟ್ಯೂಶನ್ ಆಗಲೀ, ರೂಲ್ಸ್ ಆಗಲೀ amdasiguity ಇರುತ್ತದೆ, ಆವಾಗ ಈ ತರಹದ ಪ್ರಶ್ನೆ ಬರುತ್ತದೆ. ಇಂದು, ಕಾನ್ಸಿಟಿಟ್ಯೂಶನ್ 202ನೇ ಆರ್ಟಿಕಲ್ ಪ್ರಕಾರ ಸ್ಪಷ್ಟವಾಗಿ ಇರುವಾಗ, ಮಾನ್ಯ ರಾಮಕೃಷ್ಣ ಹೆಗಡೆಯವರಂತಹ ಅನುಭವಿಗಳು, ಮತ್ತು ಉತ್ತಮವಾದ ಆದರ್ಶಗಳನ್ನು ಹಾಕಬೇಕೆಂದು ಬಯಸುವವರು, ಮತ್ತು ಮೌಲ್ಯಾಧಾರಿತ ರಾಜಕೀಯ ಜೀವನವನ್ನು ಸಾಗಿಸಿಕೊಂಡು ಹೋಗುವವರು, ಮತ್ತು ನಮ್ಮ ರಾಜ್ಯದಲ್ಲಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲಿಯೂ ಸಹ ರಾಜಕೀಯ ಜೀವನದಲ್ಲಿ ಒಂದು ಹೊಸ ಪರಂಪರೆಯನ್ನು ಉತ್ಪನ್ನ ಮಾಡಬೇಕೆನ್ನುವವರು ಈ ರೀತಿಯ ತಪ್ಪು ದಾರಿಗೆ ಅವಕಾಶ ಕೊಡಬಾರದು ಇಷ್ಟನ್ನು ಹೇಳಿ, ಈ ವಿಷಯವನ್ನು ಬಿಟ್ಟುಬಿಡುತ್ತೇನೆ.

(ಡಾ. ತಿಪ್ಪೇಸ್ವಾಮಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾನ್ಯ ಸಭಾಪತಿಗಳೇ, ನಮ್ಮ ಸದನದ ನಾಯಕರಾದ ಶ್ರೀ ರಾಮಕೃಷ್ಣ ಹೆಗಡೆಯವರು 20ನೇ ಮಾರ್ಚ್ 85ರಂದು ಭಾಷಣವನ್ನು ಮಾಡುವಾಗ, ನಾನು ತಾತ್ಕಾಲಿಕ ಆಯವ್ಯಯ ಅಂದಾಜು ಪಟ್ಟಿಯನ್ನು ಮಂಡಿಸುತ್ತಿದ್ದೇನೆ ಎಂದು ಹೇಳಿದರು. ಅದರ ಬಗ್ಗೆ ನಾಲ್ಕನೇ ಪ್ಯಾರದಲ್ಲಿ ಹೇಳಿದರು. "ಜನತಾ ಪಕ್ಷವು ಜನತೆಯ ಮುಂದೆ ಮಂಡಿಸಿದ ಪ್ರಣಾಳಿಕೆ ಎಂದೂ ಸರಕಾರದ ಕಾರ್ಯಕ್ರಮವಾಗಿದೆಯೆಂದೂ ಹೇಳಿದರು. ಸಭಾಧ್ಯಕ್ಷರೇ, ಅವರು ಹೇಳಿದಷ್ಟೇ ಅಲ್ಲ, ಅವರ ಹೇಳಿಕೆಯ ನಂತರ ಈ ಸದನವೂ ಸಹ ಬಹುಮತದಿಂದ ಆ ವಿಷಯವನ್ನು ಅಂಗೀಕರಿಸಿ, ಜನತಾ ಪಕ್ಷದ ಪ್ರಣಾಳಿಕೆಗೆ ಸರಕಾರದ ಕಾರ್ಯಕ್ರಮದ ಸೀಲ್‌ನ್ನು ಒತ್ತಿತ್ತು. ಇವೊತ್ತು ಅದು ಪಕ್ಷದ ಕಾರ್ಯಕ್ರಮ ಆಗಿಲ್ಲ, ಅಧಿಕಾರಿಗಳ ಕಾರ್ಯಕ್ರಮವೂ ಹೌದು, ಸರಕಾರದ ಕಾರ್ಯಕ್ರಮವೂ ಹೌದು. ನಮ್ಮ ಎದುರಿಗೆ ಈ ಪ್ರಣಾಳಿಕೆಯನ್ನು ಚರ್ಚಿಸುವುದು ಅತ್ಯಂತ ಅವಶ್ಯ. ಆ ಪ್ರಣಾಳಿಕೆಗೆ ಅನುಗುಣವಾಗಿ ಸರಕಾರದವರು ನಡೆದುಕೊಂಡಿದ್ದಾರೆಯೇ ? ಎಂದು ನಾವು ಇವೊತ್ತಿನ ದಿನದ ಚರ್ಚೆ ಮಾಡುವುದು ಅತ್ಯಂತ ಅವಶ್ಯವಾಗಿದೆ.

ಅಧ್ಯಕ್ಷರೇ, 19ನೇ ಜೂಲೈ 1985ರಂದು ಮಾನ್ಯ ಮುಖ್ಯಮಂತ್ರಿಯವರು "ನಾನೀಗ 1985–86ನೇ ಸಾಲಿನ ಬಜೆಟ್ ಅಂದಾಜು ವೆಚ್ಚಗಳನ್ನು ಮಂಡಿಸುತ್ತೇನೆ" ಎಂದು ಹೇಳಿದರು. ಅಂದು ಮಂಡಿಸಿದ ಅಂದಾಜುಗಳಲ್ಲಿಯೂ ಇಂದು ಮಂಡಿಸಿದ ಅಂದಾಜುಗಳಲ್ಲಿಯೂ ಯಾವ ಏರುಪೇರುಗಳನ್ನು ಕಂಡಿದ್ದೀರಿ ? ಅಂದು ನಮ್ಮ ಎದುರಿಗೆ ಕೊಟ್ಟಂತಹ ಅಂದಾಜಿಗಿಂತ ಖರ್ಚು ಜಾಸ್ತಿ ಮಾಡಿದ್ದರಿಂದ

ಹಣದ ಕೊರತೆ ಬಿತ್ತೆ ? ನಿಮ್ಮ ಯೋಜನೆಗಳು ಇನ್ನೂ ಹೆಚ್ಚು ಹಣವನ್ನು ಬಯಸಿದುವೇ ? ಅಥವಾ ಕೇಂದ್ರವು ಯೋಜನೆಯ ಅಂಗವಾಗಿ ಮಂಜೂರು ಮಾಡಿದ ಹಣಗಳಲ್ಲಿ ಖೋತಾ ಆಯಿತೇ ? ಇವೆಲ್ಲಾ ಕಾರ್ಯಕ್ರಮಗಳನ್ನು ಮಾನ್ಯ ಮುಖ್ಯಮಂತ್ರಿಯವರು ಈ ಸದನದ ಎದುರಿಗೆ ಇಟ್ಟಿದ್ದರೆ, ಇನ್ನೂ ಹೆಚ್ಚು ಪ್ರಕಾಶ ಬೀಳುತ್ತಿತ್ತು. ತಮಗೆ ಗೊತ್ತಿದೆ, ಅನೇಕ ಸಂದರ್ಭಗಳಲ್ಲಿ ಈ ಘನವಾದ ಸರಕಾರದ ವರಿಗೆ ಪ್ರಶ್ನೆಗಳ ಸುರಿಮಳೆಗಳನ್ನು ಹಾಕಿ, ಯಾವ ಯಾವ ಯೋಜನೆ ಎಷ್ಟೆಷ್ಟು ಹಣವನ್ನು ಸ್ವೀಕರಿಸಿದೆ? ಎಷ್ಟು ಹಣ ಮಂಜೂರು ಆಗಿದೆ ? ಮತ್ತು ಅದರಲ್ಲಿ ಎಷ್ಟು ಲೋಪವಾಗಿವೆ ? ಎಷ್ಟು ಲ್ಯಾಪ್ಸ್ ಆಗಿದೆ ? ಅಥವಾ ಕೇಂದ್ರಸರಕಾರದವರು ಕೊಡತಕ್ಕಂತಹ ಹಣವನ್ನು ಕೊಟ್ಟಿಲ್ಲವೇ ಎಂದು ಕೇಳಿದರೂ ಸಹ ಸಮರ್ಪಕವಾದ ಉತ್ತರಗಳನ್ನು ಕೊಡುವ ಸ್ಥಿತಿಯಲ್ಲಿ ಈ ಸರಕಾರ ಇಲ್ಲ. ಅದಕ್ಕೆ ಕಾರಣ, ಆ ಯೋಜನೆಗಳು ಯಾವ ಯಾವುವು ಇದ್ದಾವೆ ಎನ್ನುವಂತಹ ಮಾತು ಸಹ ಅನೇಕ ಜನರಿಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಗೊತ್ತಿಲ್ಲ ಎಂದು ಹೇಳುವುದಿಲ್ಲ. ಆದರೆ ಅವರ ಗಮನಕ್ಕೆ ತರುವಂತಹ ಜನ ಏನಿದ್ದಾರೆ. ಆ ಜನರಿಗೇ ಗೊತ್ತಿಲ್ಲ : ಇದರ ಪರಿಣಾಮವಾಗಿ ಜನತೆಯು ಕಷ್ಟದಲ್ಲಿದ್ದಾರೆ. ಕೇಂದ್ರ ಸರಕಾರದವರು ಕೊಡಾ ಮಾಡುವಂತಹ ಹೇರಳವಾದ ಹಣ, ಇವರ ಕೈಗೆ ಬಾರದೆ, ನಮ್ಮ ರಾಜ್ಯದ ಬೊಕ್ಕಸಕ್ಕೆ ಹಣ ಸಿಗದೆ, ನಾವು ಇವೊತ್ತಿನ ದಿವಸ ವಿನಾ ಕಾರಣ ತೊಂದರೆಗೆ ಈಡಾಗುವಂತಹ ದುಃಖಕರ ಪ್ರಸಂಗ ನಮಗೆ ಬಂದಿದೆ. ಇವೊತ್ತು ಜನತಾ ಪಕ್ಷದ ಚುನಾವಣ ಪ್ರಣಾಳಿಕೆಯಲ್ಲಿ ಹೇಳಿದ ಕಾರ್ಯಕ್ರಮಗಳೇ ನಮ್ಮ ಕಾರ್ಯಕ್ರಮಗಳು ಎಂದು ಹೇಳುವಾಗ. ಅವುಗಳು ಏನೇನು ಇವೆ ? ಎಷ್ಟರಮಟ್ಟಿಗೆ ಅವುಗಳ ರಚನಾತ್ಮಕವಾದ ಕಾರ್ಯಗಳಿಗೆ ಇವರು ಲಕ್ಷ ಕೊಟ್ಟಿದ್ದಾರೆ, ಎನ್ನುವುದನ್ನು ನೋಡೋಣ. ಇವೊತ್ತು ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಗ್ರಾಮ ಸ್ವರಾಜ್ಯ ಎಂದು ಹೇಳಿದ್ದಾರೆ. ಗ್ರಾಮ ಸ್ವರಾಜ್ಯದಲ್ಲಿ ಇಲ್ಲಿಯ ವರೆಗೆ ಅನೇಕ ಸಂದರ್ಭಗಳಲ್ಲಿ ನಮ್ಮ ಮುಖ್ಯಮಂತ್ರಿಯವರಿಗೆ ಕೇಂದ್ರ ಸರಕಾರವನ್ನು ಟೀಕಿಸುವುದಕ್ಕೆ ಒಂದು ಅವಕಾಶ ಸಿಕ್ಕಿತು. ಅದು ಏನೆಂದರೆ, ಇದಕ್ಕೆ ಪ್ರೆಸಿಡೆಂಟ್‌ರವರದ್ದು ಇನ್ನೂ ಅಸ್ಸೆಂಟ್ ಸಿಕ್ಕಿಲ್ಲ, ಅವರ ಅಸ್ಸೆಂಟ್ ಸಿಕ್ಕಿತು ಎಂದರೆ, ಹೆಚ್ಚು ಗ್ರಾಮದಲ್ಲಿ ರಾಮರಾಜ್ಯವನ್ನೂ ತರುತ್ತೇನೆ, ಸ್ವರಾಜ್ಯವನ್ನೂ ತರುತ್ತೇನೆ ಎಂದು ಹೇಳುತ್ತಿದ್ದರು. ನಮಗೂ ಅನ್ನಿಸುತ್ತಿತ್ತು, ಇಷ್ಟೇ ಹುರುಪಿನಿಂದ ಇವರು ಮಾಡುವಾಗ, ಕೇಂದ್ರಸರಕಾರದವರು ಏಕೆ ಅಷ್ಟು ತಡ ಮಾಡುತ್ತಿದ್ದಾರೆ ಎಂದು. ನಾವೂ ಪ್ರೆಸಿಡೆಂಟ್‌ರವರನ್ನು ಕೇಳಿದೆ. ಅವರು ಹೇಳಿದರು, ನನ್ನ ಕೈಗೆ ಇನ್ನೂ ಬಂದಿಲ್ಲ, ಸ್ವಲ್ಪ ತಡೆಯಿರಿ, ಬಂದಕೂಡಲೇ ಮಾಡುತ್ತೇನೆಂದು ಹೇಳಿದರು. ಆದರೆ ಮಾನ್ಯ ಸಭಾಧ್ಯಕ್ಷರೆ, ಇವೊತ್ತು ಏನು ಆಗಿದೆ ? ಅದು ಬಂತು, ಬಂದಮೇಲೆ ಗ್ರಾಮಸ್ವರಾಜ್ಯ ಎಲ್ಲಿ ಹೋಯಿತು ? ಗ್ರಾಮರಾಜ್ಯ ಎಲ್ಲಿ ಹೋಯಿತು ? ಗ್ರಾಮರಾಜ್ಯವೂ ಇಲ್ಲ ಸ್ವರಾಜ್ಯವೂ ಇಲ್ಲ. ಇವೊತ್ತು ಕಾನ್ಸೆಂಟ್ರೇಟೆಡ್ ಆಫ್ ಪವರ್ ಹೆಚ್ಚಾಗಲಿಕ್ಕೆ ಹತ್ತಿದೆ. ಅದು ಮಾನ್ಯ ರಾಮಕೃಷ್ಣ ಹೆಗಡೆಯವರ ನಜರಿಗೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮೌಲ್ಯಾಧಾರಿತ ರಾಜಕಾರಣ ಮಾಡುವಂತಹವರು, ಉತ್ತಮ ರಾಜಕೀಯ ಜೀವನ ಮಾಡುವಂತಹವರು, ಹಾಗೂ ರಾಜಕೀಯ ಮುಖಂಡರು ಕೂಡ ಹೌದು ಅಂತಹ ವ್ಯಕ್ತಿ ಏತಕ್ಕೆ ಇದರಲ್ಲಿ ಹಿಂದೆ ಬಿದ್ದಿದ್ದಾರೋ ನನಗಂತೂ ಗೊತ್ತಿಲ್ಲ. ಒಮ್ಮೆ ಸ್ವಾಮಿ ವಿವೇಕಾನಂದರು ಒಂದು ಕಡೆ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ನೀವು ಏತಕ್ಕೆ ಹಿಂದೆ ಬಿದ್ದಿರಿ ಎಂದು ಯಾರು ಪ್ರಶ್ನೆ ಮಾಡಿದರೂ ಅವರನ್ನೆ ನಿಮ್ಮ ಸಂಗಡಿಗರು ಯಾರು ಎಂದು ಪ್ರಶ್ನೆ ಮಾಡಿದರಂತೆ. ಅಂದ ಹಾಗೆ ನಿಮ್ಮ ಹಿಂದೆ ಇದ್ದವರು ಯಾರು ? ಅದರಂತೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅವರ ಸಂಗಡಿಗರಿಂದಲೇ ಇವತ್ತು ಹಿಂದೆ ಬಿದ್ದಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಲೋಕಾಯುಕ್ತ ಮಸೂದೆಗೆ ರಾಷ್ಟ್ರಪತಿಗಳಿಂದ ಒಪ್ಪಿಗೆ ದೊರೆಯದೆ ಇದ್ದಿದ್ದರೆ ಅದರ ಮಾತು ಬೇರೆಯಾಗಿತ್ತು. ಆದರೆ ಇವತ್ತು ಲೋಕಾಯುಕ್ತ ಮಸೂದೆಗೆ ರಾಷ್ಟ್ರಪತಿಗಳಿಂದ ಒಪ್ಪಿಗೆ ದೊರತಿದೆ. ಆದರೂ ಕೂಡ ತಾವು ಕಾರ್ಯಾಚರಣೆಯನ್ನು ಕೈಗೊಂಡಿಲ್ಲ. ಮತ್ತೆ ಜಿಲ್ಲಾ ಪರಿಷತ್ತು ಮಸೂದೆಗೆ ರಾಷ್ಟ್ರಪತಿಗಳ ಒಪ್ಪಿಗೆ ದೊರೆಯುವ ಮೊದಲು ಕರ್ನಾಟಕ ರಾಜ್ಯದಲ್ಲಿ ಚುನಾವಣೆಗಳನ್ನು ಮಾಡುವುದಕ್ಕೆ ತಮಗೆ ಯಾವ ತೊಂದರೆ ಇತ್ತು ? ಇವತ್ತು ಕರ್ನಾಟಕ ರಾಜ್ಯದಲ್ಲಿ ಅನೇಕ ಟಿ.ಡಿ.ಬಿ.ಗಳ ಚುನಾವಣೆಗಳನ್ನು ಮಾಡಿಲ್ಲ. ಹಳೆಯ ಕಾನೂನು ಪ್ರಕಾರ ಚುನಾವಣೆಗಳನ್ನು ಏತಕ್ಕೆ ಮಾಡಲಿಲ್ಲ ? ಅದೇ ರೀತಿಯಲ್ಲಿ ಸುಮಾರು 18 ಸಾವಿರ ಪಂಚಾಯಿತಿಗಳಿಗೆ ಇವತ್ತು ಚುನಾವಣೆಗಳು ನಡೆದಿಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಜನರ ಪ್ರತಿನಿಧಿಗಳು ಇಲ್ಲ. ಟಿ.ಡಿ.ಬಿ.ಗಳಲ್ಲಿ ಚುನಾಯಿತ ಜನರ ಪ್ರತಿನಿಧಿಗಳು ಇಲ್ಲ. ಆ ಎಲ್ಲಾ ಕೆಲಸಕಾರ್ಯಗಳನ್ನು ಯಾರು ನೋಡಬೇಕು, ತಾವು ರಚನಾತ್ಮಕವಾದ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ಹೇಳುತ್ತೀರಲ್ಲ, ಯಾವ ರೀತಿಯಲ್ಲಿ ತಾವು ರಚನಾತ್ಮಕ

ಕೆಲಸಕಾರ್ಯಗಳನ್ನು ಮಾಡುತ್ತೀರಿ ? ನಮ್ಮ ಗದಗ್ ತಾಲ್ಲೂಕಿನಲ್ಲಿ ಸುಮಾರು 5-6 ತಿಂಗಳಿನಿಂದ ಬಿ.ಡಿ.ಓ. ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ತಾವು ಯಾವ ರೀತಿಯಲ್ಲಿ ರಚನಾತ್ಮಕವಾದ ಕಾರ್ಯಕ್ರಮಗಳನ್ನು ಮಾಡುತ್ತೀರಿ ? ಜನತಾ ಪಕ್ಷದವರು ಮಾಡುವಂತಹ ಕೆಲಸಕಾರ್ಯಗಳನ್ನು ನೋಡುವವರು ನಾವು. ನೋಡಿ ಕೇಳುವವರು ನಾವು. ಯಾರೇ ಆಗಲಿ ಸರ್ಕಾರವನ್ನು ಟೀಕೆ ಮಾಡುವುದು ಸುಲಭದ ಕೆಲಸವಲ್ಲ. ಅದೇ ರೀತಿಯಲ್ಲಿ ನುಡಿದಂತೆ ನಡೆಯುವುದು ಕೂಡ ಬಹಳ ಕಠಿಣ. ಇದನ್ನು ಮಾನ್ಯ ಸಭಾನಾಯಕರು ಕೂಡ ತಿಳಿದುಕೊಂಡಿದ್ದಾರೆಂದು ನಾನು ಭಾವಿಸಿರುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಜೊತೆಯಲ್ಲಿ ಪತ್ರ ವ್ಯವಹಾರವನ್ನು ಮಾಡಿರುವುದು ಅಚ್ಚು ಹಾಕಿಸಿ ಎಲ್ಲಾ ಲೋಕಸಭಾ ಸದಸ್ಯರಿಗೂ ಕಳುಹಿಸಿಕೊಟ್ಟಿದ್ದಾರೆ. ಆದರೆ ಈ ಸದನದ ಗೌರವಾನ್ವಿತ ಸದಸ್ಯರಿಗೆ ಕಳುಹಿಸಿಕೊಟ್ಟಿಲ್ಲ. ನಮಗೆ ಆ ಬಗ್ಗೆ ಏನಾದರೂ ಮಾಹಿತಿ ಬೇಕಾದರೆ ನಾವು ಲೋಕಸಭಾ ಸದಸ್ಯರ ಬಳಿ ಹೋಗಿ ತೆಗೆದುಕೊಂಡು ಬರಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ಅಷ್ಟು ಆಸಕ್ತಿ ಇದ್ದರೆ ಅವರಿಗೆ ಕ್ಷಣದಲ್ಲಿಯೇ ಒಂದು ಸೆಟ್ ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಬಹಳ ಸಂತೋಷ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನೂ ಯಾವ ಯಾವ ಸದಸ್ಯರಿಗೆ ಆಸಕ್ತಿ ಇದೆಯೋ ಅವರೆಲ್ಲರಿಗೂ ಕಳುಹಿಸಿಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ.—ಕೇಂದ್ರ ಸರ್ಕಾರದಿಂದ ಬರಬೇಕಾಗಿರುವಂತಹ ಸೌಲಭ್ಯಗಳನ್ನು ಬೇಗ ದೊರಕಿಸಿಕೊಡಲೆಂದು ಕೊಟ್ಟಿದ್ದೇವೆ ಮಾನ್ಯ ಸದಸ್ಯರಿಗೂ ಬೇಕಾದರೆ ಒಂದು ಸೆಟ್ ಕಳುಹಿಸಿಕೊಡೋಣ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಕಾನೂನು ಸಚಿವರಿಗೆ ನಾನು ಹೇಳಿದ್ದು ಅರ್ಥವಾಗಿಲ್ಲ. ಅದೇ ಮಾನ್ಯ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಂಡಿದ್ದಾರೆ. ನನ್ನ ಅಭಿಪ್ರಾಯವೇನೆಂದರೆ ನಾವೆಲ್ಲ ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕೈ ಬಲಪಡಿಸಬೇಕೆಂಬುದೇ ಆಗಿದೆ. ನಮ್ಮ ರಾಜ್ಯಕ್ಕೆ ಬೇಕಾಗಿರತಕ್ಕಂಥ ಸೌಲಭ್ಯಗಳನ್ನು ಕೇಳುವ ಹಕ್ಕು ನಮಗೆ ಇದೆ, ನೀವು ಸರ್ಕಾರವನ್ನು ರಚನೆ ಮಾಡುವಾಗ ಹೇಳುವವರು ನೀವು, ಆದರೆ ಕೇಳುವವರು ನಾವು. ಎರಡೂ ಕಡೆಯ ಸದಸ್ಯರನ್ನು ಜನ ಚುನಾಯಿಸಿ ಕಳುಹಿಸಿಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಹೇಳುವ ಹಕ್ಕು ನಿಮಗೆ ಯಾವ ರೀತಿಯಲ್ಲಿ ಜನ ಕೊಟ್ಟಿದ್ದಾರೆಯೋ ಅದೇ ರೀತಿಯಲ್ಲಿ ಕೇಳುವ ಹಕ್ಕು ಸಹ ನಮಗೆ ಕೊಟ್ಟು ಕಳುಹಿಸಿದ್ದಾರೆ. ಆ ದೃಷ್ಟಿಯಲ್ಲಿ ಮಾನ್ಯ ಮಂತ್ರಿ ವಿಚಾರ ಮಾಡಬೇಕೆಂದು ನಾನು ಹೇಳುತ್ತೇನೆ. ಪ್ರತಿಯೊಂದು ಕಾರ್ಯಕ್ರಮದಲ್ಲಿ ನಾವು ಟೀಕೆ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಏನೇನು ನಡೆದಿದೆ, ಇನ್ನು ಏನೇನು ಜನಪರಹಿತವಾದ ಕಾರ್ಯಕ್ರಮಗಳನ್ನು ನಡೆಸಬೇಕು ಎಂಬುದನ್ನು ಕೇಳುವವರು ನಾವು. ಅದನ್ನೂ ಸಹ ಮಾನ್ಯ ಮಂತ್ರಿಗಳು ಮರೆಯಬಾರದು. ಇನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾದಾಗ ಒಂದು ದಿಟ್ಟ ನಿಲುವನ್ನು ತೆಗೆದುಕೊಂಡರು. ಆ ನಿಲುವನ್ನು ಇತರೆ ರಾಜ್ಯಗಳ ಮುಖ್ಯಮಂತ್ರಿಗಳು ಕೂಡ ಸ್ವಾಗತ ಮಾಡಿದರು. ಅದೇ ರೀತಿಯಲ್ಲಿ ನಾವು ಕೂಡ ಸ್ವಾಗತ ಮಾಡಿದೆವು. ಆ ಒಂದು ದಿಟ್ಟ ನಿಲುವಾದರೂ ಏನೆಂದರೆ ಲೋಕಾಯುಕ್ತ ಮಸೂದೆ. ಈ ಲೋಕಾಯುಕ್ತ ಮಸೂದೆಯ ಬಗ್ಗೆ ನಾನು ಮೊದಲೇ ಹೇಳಿದಂತೆ ರಾಷ್ಟ್ರಪತಿಗಳ ಅಂಗಿಕಾರ ಪಡೆದು ಕಾನೂನನಾಗಿ ಸುಮಾರು 7 ತಿಂಗಳುಗಳು ಆಯಿತು. ಇದುವರೆವಿಗೂ ತಾವು ಲೋಕಾಯುಕ್ತರನ್ನು ನೇಮಕ ಮಾಡಿಲ್ಲ. ತಾವು ಏನು ಕೆಲಸ ಮಾಡುತ್ತಿದ್ದೀರಿ ? ಇ ತಪವರನ್ನೇ ನೇಮಕ ಮಾಡಿ ಎಂದು ಸಹ ನಾನು ಹೇಳುವುದಿಲ್ಲ. ಇವತ್ತು ತಮ್ಮ ಮಂತ್ರಿಮಂಡಲದಲ್ಲಿ ಅನೇಕ ಮಂತ್ರಿಗಳ ಮೇಲೆ ಲಂಚದ ಅಪಾದನೆ ಇದೆ. ಅವುಗಳನ್ನು ಹೇಳಿ ನಿಮಗೆ ತೊಂದರೆಯನ್ನು ಕೊಡಬೇಕೆನ್ನುವ ಉದ್ದೇಶ ಕೂಡ ನನಗೆ ಇಲ್ಲ. ಆದ್ದರಿಂದ ತಾವು ಆದಷ್ಟು ಜಾಗ್ರತೆ ಲೋಕಾಯುಕ್ತರನ್ನು ನೇಮಕ ಮಾಡಿ. ಕಾನೂನು ಪ್ರಕಾರ ಅವರ ಎದುರಿಗೆ ನಾವು ಇಡುತ್ತೇವೆ. ಈ ಲೋಕಾಯುಕ್ತ ಮಸೂದೆಗೆ ರಾಷ್ಟ್ರಪತಿಗಳ ಅಂಗೀಕಾರ ದೊರೆತಿದೆ. ಆದರೂ ಕೂಡ ಏತಕ್ಕೆ ತಡ ಮಾಡಿದ್ದೀರಿ. ಈ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಇನ್ನು ರಾಜ್ಯದಲ್ಲಿ ಅನೇಕ ಲ್ಯಾಂಡ್ ಅಕ್ವಿಜೆಷನ್ ಕೇಸುಗಳು ಇವೆ. ಸುಮಾರು 7-8 ವರ್ಷಗಳಿಂದ ಪೆಂಡಿಂಗ್ ಬಿದ್ದಿವೆ. ಆ ಒಂದು ಕೆಲಸವನ್ನು ಸಹ ಸರ್ಕಾರ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಎಲ್ಲಾ ಅಭಿವೃದ್ಧಿ ಕೆಲಸಕಾರ್ಯಗಳನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಬ್ಬರೆ ಮಾಡುವುದಕ್ಕೆ ಸಾಧ್ಯವಿಲ್ಲ. ತಮ್ಮ ಮಂತ್ರಿ

ಮಂಡಲದ ಎಲ್ಲಾ ಸದಸ್ಯರು ಕೂಡ ಅವರಂತೆ ಅನುಸರಿಸಬೇಕು. ಬರೀ ಒಬ್ಬರೆ ಎಲ್ಲವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ನಿಜವಾಗಿಯೂ ಕೂಡ ನ್ಯಾಯಬದ್ಧವಾದ ಕಾರ್ಯಕ್ರಮಗಳನ್ನು ಮಾಡಬೇಕು. ಅದನ್ನು ನಾವು ಈ ಕಡೆ ಕುಳಿತುಕೊಂಡು ನಿರೀಕ್ಷೆ ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಎಲ್ಲೊ ಒಂದು ಕಡೆ ಒಂದು ಶಾಲೆಗೆ ಅನಿರೀಕ್ಷಿತ ಭೇಟಿ ಕೊಟ್ಟು ಅಲ್ಲಿರತಕ್ಕಂಥ ಕುಂದು ಕೊರತೆಗಳ ನಿವಾರಣೆಗೆ ಸ್ಥಳದಲ್ಲಿಯೇ ಆಜ್ಞೆ ಮಾಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಶಾಲೆಗಳಲ್ಲಿ ಸರಿಯಾದ ಕಟ್ಟಡಗಳು ಇಲ್ಲ. ಸರಿಯಾದ ಉಪಾಧ್ಯಾಯರು ಇಲ್ಲ. ಈ ಬಗ್ಗೆ ಏನಾದರೂ ಸ್ಥಳೀಯ ಶಾಸಕರು ಸಂಬಂಧಪಟ್ಟ ಮಂತ್ರಿಗಳಿಗೆ ಉತ್ತರಕ್ಕಾಗಿ ಕಾಗದ ಬರೆದರೆ ಅವರಿಂದ ಯಾವ ಪ್ರತಿಕ್ರಿಯೆಯ ಉತ್ತರವೂ ಬರುವುದಿಲ್ಲ. ಇನ್ನು ಈ ಮನೆಯಲ್ಲಿ ಶಾಸಕರು ಏನಾದರೂ ಪ್ರಶ್ನೆ ಕೇಳಿದರೆ ಆ ಪ್ರಶ್ನೆಗಳಿಗೂ ಕೂಡ ಸರ್ಕಾರದಿಂದ ಸರಿಯಾದ ಉತ್ತರಗಳು ಸಿಗುತ್ತಿಲ್ಲ. ಈ ರೀತಿ ಉತ್ತರಗಳು ಸಿಗದೆ ಇರುವುದಕ್ಕೆ ಕಾರಣ ನನಗೆ ತಿಳಿದ ಮಟ್ಟಿಗೆ ಮಂತ್ರಿಮಂಡಲದ ಸದಸ್ಯರು ಜಾಸ್ತಿಯಾಗಿರುವುದರಿಂದಲೋ ಅಥವಾ ಮಂತ್ರಿಮಂಡಲದಲ್ಲಿ ಅನುಭವಿಗಳು ಇರುವುದರಿಂದಲೋ ಗೊತ್ತಿಲ್ಲ. ಆದ್ದರಿಂದ ಇನ್ನು ಮುಂದಾದರೂ ಸದಸ್ಯರು ಕೇಳತಕ್ಕಂಥ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡತಕ್ಕಂಥ ಪರಿಪಾಠವನ್ನು ಬೆಳಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಸ್ವಾಮಿ ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮಾಡಿದ್ದಾರೆ. ಚುನಾವಣೆಯನ್ನು ಮಾಡಿ ಎಲ್ಲೆಲ್ಲಿ ತಮಗೆ ಅಸಮಧಾನಕರವಾಗಿರುತ್ತದೆಯೋ ಅಲ್ಲಿಗೆ ಚುನಾವಣೆಯಲ್ಲಿ ಗೆದ್ದು ಬಂದಿರುವವರ ಜೊತೆಗೆ 8-9 ಜನರನ್ನು ನಾಮಕರಣ ಮಾಡುವಂತಹ ಪರಿಪಾಠವನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಮಾಡಿದರು. ಆದರೆ ಮಾನ್ಯ ರಾಮಕೃಷ್ಣ ಹೆಗಡೆಯವರು ಹಿಂದೆ ಸಹಕಾರ ಸಚಿವರಾಗಿದ್ದಾಗ ಕಾನೂನು ಪ್ರಕಾರ 3 ಜನರನ್ನು ನಾಮಕರಣ ಮಾಡುವಂತಿದ್ದರೂ ಸಹ ಒಬ್ಬರಿಗಿಂತ ಹೆಚ್ಚು ನಾಮಕರಣ ಮಾಡುವುದಿಲ್ಲ ಎನ್ನುವ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೀರಿ. ಇವತ್ತು ಆ ನೀತಿ ಎಲ್ಲಿಗೆ ಹೋಯಿತು ? ನಾನು ಹಿಂದೆ ತಮ್ಮನ್ನು ಎಸ್.ಕೆ ಡೇ ಎಂದು ಕರೆದಿದ್ದೆ. ಆದರೆ ಅದಕ್ಕೆ ವಿರುದ್ಧವಾಗಿ ಇವತ್ತು ಇದೆ. ತಮ್ಮ ಎಲ್ಲಾ ನೀತಿನಿಯಮಗಳನ್ನು ಗಾಳಿ ಗೋಪುರ ಮಾಡಿದ್ದೀರಿ. ಈ ರಾಜ್ಯದ ಹಿತದೃಷ್ಟಿಯಿಂದ ಈ ರಾಜ್ಯದ ಅಭಿವೃದ್ಧಿಯ ದಿಸೆಯಿಂದ ಇನ್ನು ಮುಂದಾದರೂ ಸತ್ಸಂಪ್ರದಾಯವನ್ನು ಪಾಲನೆ ಮಾಡಿ ಎಂದು ನಾನು ಸಲಹೆ ಮಾಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಎಷ್ಟು ಸಹಕಾರಿ ಸಂಘಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ ? ಈ ಸಹಕಾರಿ ಕ್ಷೇತ್ರಕ್ಕೆ ತಾವು ಒಂದೊಂದು ಸಾರಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಆಗ ನಾವು ನಿಮ್ಮನ್ನು ಅಭಿನಂದಿಸಲೇ ಬೇಕು ಉದಾಹರಣೆಯಾಗಿ ಹೇಳುವುದಾದರೆ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಶ್ರೀಮಾನ್ ನಜ್ಜಬಾಳ ಹೆಗಡೆಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅವರು ಒಳ್ಳೆಯ ಸಹಕಾರಿಗಳು. ಅವರು ಸಹಕಾರ ಕ್ಷೇತ್ರದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಎಲ್ಲಾ ಕೆಲಸಗಳಿಗೆ ತಾವು ಏತಕ್ಕೆ ಒಳ್ಳೆಯವರನ್ನು, ಅನುಭವ ಇರುವವರನ್ನು ನೇಮಕ ಮಾಡುವುದಿಲ್ಲ ? ಅಂಥವರು ತಮಗೆ ಸಿಗುವುದಿಲ್ಲವೇ ? ಇವತ್ತು ಇಡೀ ಭಾರತ ದೇಶವನ್ನು ತೆಗೆದುಕೊಂಡರೆ ಈ ಸಹಕಾರಿ ಚಳುವಳಿ ಹುಟ್ಟಿದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿಯೇ ಅದೂ ಮೊಟ್ಟಮೊದಲಿಗೆ ನಮ್ಮ ಗದಗ್ ತಾಲ್ಲೂಕಿನಲ್ಲಿ. ಸಹಕಾರಿ ಕ್ಷೇತ್ರದಲ್ಲಿ ಸಾರ್ವಜನಿಕರ ಹಣವನ್ನು ಇಟ್ಟಿರುತ್ತಾರೆ. ಈ ಹಣವನ್ನು ಕಾಪಾಡಿಕೊಂಡು ಬರುವಲ್ಲಿ ಒಳ್ಳೆಯ ಅಕೌಂಟ್‌ಗಳನ್ನು ಪಾಲನೆ ಮಾಡಿಕೊಂಡು ಬರಬೇಕಾಗುತ್ತದೆ. ಒಳ್ಳೆಯ ಆಡಳಿತ ವರ್ಗವಿರಬೇಕಾಗುತ್ತದೆ. ಆಗ ಮಾತ್ರ ಒಳ್ಳೆಯ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ಈಗ ಬಿಜಾಪುರ ಸ್ಪಿನ್ನಿಂಗ್ ಮಿಲ್ ಇದೆ. ಈ ಸ್ಪಿನ್ನಿಂಗ್ ಮಿಲ್‌ಗೆ ಒಬ್ಬ ಜಿಲ್ಲಾಧಿಕಾರಿಯನ್ನು ನೇಮಿಸಿದ್ದೀರಿ. ಆದರೂ ಕೂಡ ಇಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳು ನಷ್ಟವಾಗಿದೆ ಎಂದು ಕೇಳಿದ್ದೇನೆ. ಇದಕ್ಕೆ ತಾವು ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ ?

2-00 p.m.

ಶೆಡ್ಯೂಲ್‌ಕ್ಯಾಸ್ಟ್‌ನವರು ಹೆಚ್ಚು ಪ್ರಮಾಣದಲ್ಲಿ ಎಲ್ಲಿ ಇರುತ್ತಾರೋ ಅಂತಹವರಿಗೆ ಆದ್ಯತೆ ಕೊಡಬೇಕೆಂದು ಎನ್‌ಸಿಡಿಸಿ. ಸರ್ಕ್ಯುಲರ್‌ನಲ್ಲಿ ಹೇಳಿದ್ದಾರೆ. ಎನ್‌ಸಿಡಿಸಿ. ರೆಕಮೆಂಡೇಶನ್ ಮೇಲೆ ನೀವು ಮಂಜೂರು ಮಾಡಿರಬಹುದು. ಆದರೆ ಎನ್‌ಸಿಡಿಸಿ.ಯವರು ತಪ್ಪು ಮಾಡಿದರೆ ನೀವು ಅದನ್ನು ಅವರ ಗಮನಕ್ಕೆ ತರಬೇಕು. ಅದು ನಿಮ್ಮ ಕರ್ತವ್ಯ. ಕೇಂದ್ರ ಸರ್ಕಾರದವರು ಏನು ಹೇಳಿದರೂ ಅದಕ್ಕೆ ಪತ್ರ ಬರೆಯುತ್ತೀರಿ, ಇದಕ್ಕೆ ಏತಕ್ಕೆ ಬರೆಯಲಿಲ್ಲ. ಈಗ ತಾವು ಕೊಟ್ಟಿರತಕ್ಕಂಥ ಸಂಖ್ಯೆಯ ಒಳಗೆ 100ಕ್ಕೆ 5ರಷ್ಟು ಸಹ ತಮ್ಮ ಶೇರುಗಳನ್ನು ಕೊಡಿಸಲಿಕ್ಕೆ ಅಸಮರ್ಥರಾಗಿದ್ದಾರೆ. ತಾವು ಕೊಟ್ಟಿದ್ದೀರಿ, ಏತಕ್ಕೆ ಕೊಟ್ಟಿದ್ದೀರಿ ? ಯಾರ ಬಿಡೆಗೆ ಒಳಗಾಗಿ ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ನಿಮಗೆ ಯಾರೋ ಮೋಸ

ಮಾಡಿದ್ದಾರೆ ನಿಮ್ಮ ಮಂತ್ರಿಮಂಡಲದಲ್ಲಿರತಕ್ಕವರೇ ಮಾಡಿರಬಹುದು. ಮಾನ್ಯ ಸಹಕಾರ ಸಚಿವರ ಬಗ್ಗೆ ನಾನು ಹೇಳುವುದಿಲ್ಲ. ಅವರು ನಿಷ್ಪಕ್ಷಪಾತವಾಗಿದ್ದಾರೆ. ನಿಮಗೆ ಯಾರು ಮೋಸ ಮಾಡಿದ್ದಾರೆ ? ಆ ಮೋಸ ಮಾಡಿದಂಥ ಜನ ನಿಮ್ಮನ್ನು ಪೇಚಿಗೆ ಹಾಕುವ ದೃಷ್ಟಿಯಿಂದ ಈ ರೀತಿ ಮಾಡಿಸಿರುತ್ತಾರೆ. ನಾವು ಇದನ್ನು ಮಾತನಾಡಬಾರದು ಎಂದರೆ ಹೇಗೆ ಆಗುತ್ತದೆ ? ಇಂತಹ ಮಿಲ್‌ಗಳಿಗೆ ಕೊಡುವ ಬದಲು ಯೋಗ್ಯ ಇದ್ದ ಮಿಲ್‌ಗೆ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಆ ಮಿಲ್ ಪ್ರಖರವಾಗಿ ಬೆಳೆಯುತ್ತಿತ್ತು. ಒಂದೇ ವರ್ಷದಲ್ಲಿ ಮಿಲ್‌ಗಳನ್ನು ಪೂರ್ತಿಯಾಗಿ ಮಾಡಿ ಮುಗಿಸಿದಂಥ ಇತಿಹಾಸ ರಾಜ್ಯದಲ್ಲಿ ಇಲ್ಲವೇ ? ನಿಮ್ಮ ಮುಖಂಡತ್ವದಲ್ಲಿ ಮುಗಿಸಿಲ್ಲವೇ? ಉಳಿದ ಮಿಲ್‌ಗಳಿಗೆ ನೀವು ಒಂದೇ ಮಾಪನವನ್ನು ಹಾಕಿಲ್ಲ ? ಇದರಿಂದ ಒಬ್ಬರಿಗೊಂದು ಒಬ್ಬರಿಗೊಂದು ಮಾಡಿದಹಾಗೆ ಆಗುವುದಿಲ್ಲವೇ ? ನಿಮ್ಮ ಪಕ್ಷಕ್ಕೆ ನಿಮಗೆ ಇದರಿಂದ ದೋಷ ಬರುವುದಿಲ್ಲವೇ ? ಸರ್ಕಾರದ ಖರ್ಚಿನಿಂದ ಸವಲತ್ತನ್ನು ಕೊಡಿ ಎಂದು ಹೇಳಿದರೆ ಅದು ದೋಷ ಆಗುತ್ತದೆ. ಆದರೆ 16 ಪರ್ಸೆಂಟ್ ಪರಿಜನರು ಸದಸ್ಯರಾಗಿರತಕ್ಕಂಥ ಮಿಲ್‌ಗಳಿಗೂ ಸಹ ಅವಕಾಶ ಇಲ್ಲದಿರುವಂಥ ಕಾರಣಗಳನ್ನು ತಾವು ಕಂಡುಹಿಡಿಯಬೇಕು ಎಂದು ಕೇಳುತ್ತಿದ್ದೇನೆ. ಈಗಾಗಲೇ ತಡವಾಗಿದೆ. ತಡವಾದರೂ ಪರವಾಗಿಲ್ಲ, ಒಂದಕ್ಕೆ ಕೊಡುತ್ತೀರಿ, ಒಂದಕ್ಕೆ ಬಿಡುತ್ತೀರಿ, ಈ ರೀತಿ ಅವರಿಗೆ ಕೊಡುವುದು, ಉಳಿದವರಿಗೆ ಬಿಡುವುದು ಬಿಟ್ಟು ಎಲ್ಲರನ್ನೂ ಸರಿಸಮಾನವಾದ ರೀತಿಯಿಂದ ತೆಗೆದುಕೊಂಡು ಹೋಗಿ, ನೀವು ಮಾದರಿ ಮುಖ್ಯಮಂತ್ರಿಗಳಾಗಬೇಕೆಂದು ನಾನು ಆಶಯ ಮಾಡುತ್ತೇನೆ. ಸ್ವಾಮಿ ತಮ್ಮ ಸರ್ಕಾರದ ಕಾರ್ಯಕ್ರಮದಲ್ಲಿ ಬಾಯಾರಿದ ಜನರಿಗಾಗಿ ಎರಡು ವರ್ಷ ಕಾಲದಲ್ಲಿ 37,985 ಕೊಳವೆ ಬಾವಿಗಳನ್ನು ಹಾಕಿದ್ದೇವೆ ಎಂದು ಹೇಳಿದ್ದೀರಿ. ಕೊಳವೆ ಬಾವಿ ಹಾಕಿದ್ದು ಮಹತ್ವ ಅಲ್ಲ, ಏಕೆಂದರೆ ಕೊಳವೆ ಬಾವಿ ಹಾಕುವುದರ ಸಲುವಾಗಿ ಕೇಂದ್ರ ಸರ್ಕಾರದವರು 5 ವರ್ಷದಿಂದ ಹೇಳಿದ್ದಾರೆ. ಕೊಳವೆ ಬಾವಿ ಹಾಕುವ ಕಾರ್ಯ 5 ವರ್ಷದೊಳಗೆ ಪೂರ್ತಿ ಮುಗಿಯಬೇಕು ಒಂದು ಹಳ್ಳಿಯೂ ಉಳಿಯಬಾರದು, ಎಲ್ಲಾ ಹಳ್ಳಿಯಲ್ಲೂ ಕೊಳವೆ ಬಾವಿಯನ್ನು ಹಾಕಬೇಕೆಂಬ ನಿಯಮವನ್ನು ಹಾಕಿಕೊಟ್ಟಿದ್ದಾರೆ. ನಿಮಗಿಂತ ಹಿಂದೆ ಇದ್ದವರು ಎಷ್ಟು ತ್ವರೆಯಿಂದ ಮಾಡಿದರೂ ಸಹ ಮುಗಿಸಲು ಆಗಲಿಲ್ಲ, ಅವರು ನಿಮಗೆ ಕೀರ್ತಿ ಕೊಡತಕ್ಕಂಥ ಒಂದು ಉದ್ದೇಶದಿಂದ ಕೆಲವನ್ನು ಬಿಟ್ಟು ಹೋಗಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಕೀರ್ತಿ ನೀವೇ ತೆಗೆದುಕೊಳ್ಳಬಹುದಾಗಿತ್ತಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ದೇವರ ಇಚ್ಛೆ ಇಲ್ಲ. ಆದರೆ ಈ ಕೊಳವೆ ಬಾವಿಗಳನ್ನು ಹಾಕಿದರೂ ಸಹ ಎಲೆಕ್ಟ್ರಿಸಿಟಿ ಇಲ್ಲ, ಹಾಕಿದ ಬಾವಿ ಹಾಗೆಯೇ ನಿಂತಿದೆ. ಇಂಥ ಪ್ರಸಂಗವನ್ನು ನಾವು ನೋಡುತ್ತಿದ್ದೇವೆ. ಕೊಳವೆ ಬಾವಿ ತೋಡಿಸಿದ್ದೀರಿ, ಆದರೆ ಅದಕ್ಕೆ ಪಂಪ್ ಹಾಕಿಲ್ಲ ಮತ್ತೆ ಕೆಲವು ಬಾವಿಗಳು ಒಣಗಿ ನಿಂತಿವೆ. ಬಾವಿ ಹಾಕಿದವರು ಹಣ ತೆಗೆದುಕೊಂಡು ಹೋಗಿದ್ದಾರೆ. ಇವೆಲ್ಲವನ್ನೂ ಪರಿಶೀಲನೆ ಮಾಡಬೇಕು. ಈ ಕಾರ್ಯಕ್ರಮ ಚೆನ್ನಾಗಿದೆ ನಿಜ, ಮಾನ್ಯ ಅಬ್ದುಲ್ ನಜೀರ್ ಸಾಬ್ ಅವರ ಬಗ್ಗೆ ನನಗೆ ವಿಶೇಷವಾದ ಗೌರವ ಇದೆ. ಅವರು ಕಮಿಟೆಡ್ ವರ್ಕರ್.

(ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಪ್ರೀತಿ ಎಂದರೆ ತಪ್ಪೇನೂ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮ ಬಗ್ಗೆ ಹೆಚ್ಚು ಪ್ರೀತಿ ಇದೆ. ಮಾನ್ಯ ನಜೀರ್ ಸಾಹೇಬರ ಬಗ್ಗೆ ವಿಶೇಷವಾದ ಗೌರವ ಇದೆ. ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಅವರಿಗೆ ಹೆಚ್ಚು ಸೌಲಭ್ಯಗಳನ್ನು ಕೊಡಬೇಕು. ಎಲ್ಲಾ ಕಡೆ ಬಾವಿಗಳು ಆಗಿವೆ ಆ ಬಾವಿಗಳಲ್ಲಿ ನೀರು ಇಲ್ಲ. ಕೆಲವು ಕಡೆ ಸುಳ್ಳು ಹೇಳಿ ಹಣ ಹೊಡೆದಿದ್ದಾರೆ ಎಷ್ಟೋ ಜನ ಎಂಜಿನಿಯರುಗಳು ತಪ್ಪನ್ನು ಮಾಡಿದ್ದಾರೆ. ಎಲ್ಲಾ ಕಡೆಗೆ ಪಂಪ್‌ಸೆಟ್ ಕೊಟ್ಟಿಲ್ಲ. ಎಲೆಕ್ಟ್ರಿಸಿಟಿ ಇಲ್ಲ. ಎಲ್ಲಾ ಕಡೆ ಅವರ ಹುಕುಂ ಚಲಾಯಿಸುವುದಿಲ್ಲ. ತಮಗೆ ಗೊತ್ತಿದೆ. ಧಾರವಾಡ ಜಿಲ್ಲೆಯಲ್ಲಿ ನಾನು ಎಂಎಲ್‌ಎ. ಆಗುವ ಪೂರ್ವದಲ್ಲಿ ತಾವು ಈ ಸಭೆಯಲ್ಲಿದ್ದಾಗ, ತಮ್ಮನ್ನು ಬಹಳ ಜನ ವರ್ಣನೆ ಮಾಡುತ್ತಿದ್ದರು. ಮಾನ್ಯ ಬಣಕಾರ್ ಅವರು ಉತ್ತಮ ರೀತಿಯಿಂದ ಜನತೆಯ ಆಗುಹೋಗುಗಳ ಬಗ್ಗೆ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ ಎಂದು. ಆದರೆ ಇವತ್ತು ತಾವು ಆ ಪಕ್ಷದಲ್ಲಿದ್ದೀರಿ. ಅಂದು ತಾವು ಮಾಡಿದ ಕೆಲಸಗಳಿಗೆ ಜನ ತಮ್ಮನ್ನು ಅಭಿನಂದಿಸುತ್ತಿದ್ದಾರೆ. ದುರ್ದೈವದಿಂದ ತಾವು ಇವತ್ತು ಇವರು ಪುರಸ್ಕಾರ ಮಾಡುವ ಸ್ಥಾನದಲ್ಲಿ ಕುಳಿತಿದ್ದೀರಿ. ಇವತ್ತು ನೀವು ಅಲ್ಲಿ ಇಲ್ಲದಿದ್ದರೆ ನಮಗೆ ಬಹಳ ಅನಂಕೂಲ ಆಗುತ್ತಿತ್ತು. ನಾನು ಮಾನ್ಯ ಹೆಗಡೆಯವರಿಗೆ ಸವಿನಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈ ವಿಚಾರದಲ್ಲಿ ಆಗಿರುವ ತಪ್ಪುಗಳನ್ನು ಲೋಕ ಆಯುಕ್ತ ಲೋಕಪಾಲ್‌ಗೆ ಒಯ್ದರೆ ಅದು ಬಹಳ

ದಿವಸಗಳಾಗುತ್ತದೆ. ಆದಕಾರಣ ಮಾನ್ಯ ಅಬ್ದುಲ್ ನಜೀರ್‌ಸಾಬ್‌ರವರಿಗೆ ಒಂದು ವಿಚಾರಣೆ ಮಾಡುವ ಅವಕಾಶ ಕೊಡಲಿ. ಆದರ ಮುಖಾಂತರ ಎಷ್ಟು ಬಾವಿಗಳಿಗೆ ಪಂಪ್‌ಸೆಟ್ ಹಾಕಿಲ್ಲ ? ಎಷ್ಟು ಬಾವಿಗಳಲ್ಲಿ ನೀರಿಲ್ಲ ? ಎಷ್ಟು ಬಾವಿಗಳು ಹಾಗೆಯೇ ಉಳಿದಿವೆ ಎಂಬುದನ್ನು ಅವರು ನೋಡಲಿ. ಈಗ 37 ಸಾವಿರ ಕೊಳವೆ ಬಾವಿಗಳನ್ನು ತೋಡಿದ್ದೇವೆ, ಎಂದು ಹೇಳಿದ್ದೀರಿ. ನಿಜ. ಆದರೆ ಇದರಲ್ಲಿ ಎಷ್ಟು ಸರಿಯಾಗಿದೆ ? ಎಷ್ಟರಲ್ಲಿ ನೀರಿಲ್ಲ ? ಎಷ್ಟಕ್ಕೆ ಪಂಪ್‌ಸೆಟ್ ಹಾಕಿಲ್ಲ? ನೀವು ಹಾಕಿರುವ 37 ಸಾವಿರ ಕೊಳವೆ ಬಾವಿಗಳಲ್ಲಿ ನಿಜವಾಗಿ ಉಳಿದಿರುವುದು 17 ಸಾವಿರ. ಇದನ್ನು ಹೇಳುವ ಸ್ಥಿತಿಯಲ್ಲಿ ನಿಮ್ಮ ಸರ್ಕಾರ ವರದಿಯನ್ನು ಇಡುವುದಕ್ಕೆ ಅವರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ ತಮ್ಮ ಕಾರ್ಯಕ್ರಮದಲ್ಲಿ ಜನರಿಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಎರಡು ಸಾವಿರ ಜನಸಂಖ್ಯೆಗಿಂತ ಅಧಿಕವಾಗಿರುವ ಹಳ್ಳಿಗಳಿಗೆಲ್ಲಾ ಎನ್‌ಆರ್‌ಡಬ್ಲ್ಯುಎಸ್. ಸ್ಕೀಂ ಪ್ರಕಾರ ನಳಗಳ ಯೋಜನೆ ಕೊಟ್ಟಿದ್ದೀರಿ. ಇದನ್ನು ಬಜೆಟ್ ಒಳಗೆ ಮಂಡನೆ ಮಾಡಿರುತ್ತೀರಾ ಎಂದು ನೋಡಿದೆ. ನಮ್ಮ ಗದಗ್ ತಾಲ್ಲೂಕಿನಲ್ಲಿ ಒಂದೂ ಇಲ್ಲ. ಎಲ್ಲೋ ಹೆಸರಿಗೆ ಒಂದೆರಡು ಕಡೆ ತೆಗೆದುಕೊಂಡಿದ್ದೀರಿ. ಏನು ಗದಗ್‌ನಿಂದ ಕೆ.ಹೆಚ್. ಪಾಟೀಲ್ ಆರಿಸಿ ಬಂದಿದ್ದಾರೆ ಎಂದು ಬಿಟ್ಟಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಗದಗ್‌ಗೆ ಬೇಕು ಕುಡಿಯುವ ನೀರು.

ಶ್ರೀ ಕೆ. ಹೆಚ್. ಪಾಟೀಲ್.—ಗದಗ್ ಬಗ್ಗೆ ಅನೇಕ ಸಲ ಹೇಳಿದ್ದೀರಿ. ಆದರೆ ಇದರಲ್ಲಿ ಗದಗ್ ತಾಲ್ಲೂಕಿನ ಒಂದು ಹಳ್ಳಿಯನ್ನೂ ಹಾಕಿಲ್ಲ. ಅಲ್ಲಿ ರೋಡ್ ಸಹ ಹಾಕಿಲ್ಲ. ಇದು ತಮ್ಮ ನಜರಿಗೆ ಬಂದಿರಲಿಕ್ಕಿಲ್ಲ. ನನ್ನ ತಾಲ್ಲೂಕಿನಲ್ಲಿ ಮಾಡದಿದ್ದರೂ ಪರವಾಗಿಲ್ಲ, ನನ್ನ ತಾಲ್ಲೂಕಿನಲ್ಲಿ ಕೆಲಸ ಮಾಡದಿದ್ದರೂ ಕೆ. ಹೆಚ್. ಪಾಟೀಲ್ ಇರಬೇಕು ಎನ್ನತಕ್ಕಂಥ ಜನ ಇದ್ದಾರೆ. ಕೆ. ಹೆಚ್. ಪಾಟೀಲ್ ಬಂದಿದ್ದಾರೆ. ಅಲ್ಲಿ ಕೆಲಸ ಆಗಲಿಲ್ಲ ಎಂದು ಹೇಳಿದರೆ, ಅದರಿಂದ ನಿಮಗೇ ಕೆಟ್ಟ ಹೆಸರು ಬರುತ್ತದೆ. ರಾಷ್ಟ್ರದಲ್ಲಿ ಉತ್ತಮ ಕೆಲಸ ಮಾಡುವ ನೀವು, ಮನೆಯಲ್ಲಿ ಈ ರೀತಿ ಇದ್ದರೆ ಹೇಗೆ ? ನಿಮ್ಮ ಕೀರ್ತಿಗೆ ಕಳಂಕ ಬರಬಾರದು ಎಂಬ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಎರಡು ಸಾವಿರ ಹಳ್ಳಿಗಳಿಗೆ ನಳದ ಯೋಜನೆಯನ್ನು ಮಾಡುವ ವಿಚಾರವನ್ನು ತಮ್ಮ ಭಾಷಣದಲ್ಲಿ ಏತಕ್ಕೆ ಹಾಕಲಿಲ್ಲ ? ಹಣದ ಅಭಾವವೆ ? ಬೇರೆ ಯಾವುದಾದರೂ ತೊಂದರೆ ಇದೆಯೆಂದು ಬಿಟ್ಟಿದ್ದೀರಾ ? ಈಗ ಒಂದನೇ ಬಜೆಟ್ ಆಗಿದೆ, ಇದು ಎರಡನೆಯ ಬಜೆಟ್ ಮಾಡಿರುತ್ತೀರಿ. ಇನ್ನು ಮೂರನೆಯ ಬಜೆಟ್ ಮಾಡಿದರೂ ಪರವಾಗಿಲ್ಲ, ಈ ನಳದ ಯೋಜನೆ ಬಗ್ಗೆ ಒಬ್ಬರಿಗೊಂದು ಒಬ್ಬರಿಗೊಂದು ಮಾಡಬೇಡಿ. ಎರಡು ಸಾವಿರ ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಿಗೆ ನಳದ ಯೋಜನೆಯನ್ನು ಪೂರ್ತಿಯಾಗಿ ಮಾಡತಕ್ಕಂಥ ಕಾರ್ಯಕ್ರಮ ರೂಪಿಸಿಕೊಳ್ಳಿ, ಅದು ಅನುಷ್ಠಾನಕ್ಕೆ ಬರುವಂತಹ ರೀತಿಯಲ್ಲಿ ಬಜೆಟ್ ಮಾಡಿ ಎಂದು ಹೇಳುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳೇ, ತಾವು ದಯವಿಟ್ಟು ನೋಡಿ. ಇವತ್ತಿನ ದಿವಸ ಬಜೆಟ್ ಚರ್ಚೆ ಆಗುತ್ತಿದೆ. ಒಂದನೇ ಬಜೆಟ್ ಆಗಿಹೋಯಿತು. ಇದು ಎರಡನೇ ಬಜೆಟ್. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಎಷ್ಟೇ ಕೆಲಸಗಳು ಇದ್ದರೂ ಸಹ ಅದನ್ನು ಬಿಟ್ಟು ಬಹಳ ಕೂಲಂಕಷವಾಗಿ ಕೇಳುತ್ತಿದ್ದಾರೆ ಆದರೆ ಇಲ್ಲಿರುವ ಫೈನಾನ್ಸ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಅವರೇನು ಮತ್ತೊಂದು ತಾಳಿ ತೆಗೆದುಕೊಂಡು ಲಗ್ನ ಮಾಡಿಕೊಳ್ಳುವುದಕ್ಕೆ ಹೋಗಿದ್ದಾರೋ ?

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಹೇಳುವವರು ಯಾರು ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಹೆಗಡೆಯವರಿಗೆ ಗೊತ್ತಿದೆ. ಅವರೂ ಇರಬೇಕು. ಇವರೇನಾದರೂ ಮರೆತರೆ ಅವರು ಜ್ಞಾಪಿಸಬೇಕು. ಅನೇಕ ಜನ ಮಾತನಾಡುವುದಕ್ಕೆ ಬರುತ್ತಾರೆ, ನನ್ನ ಮಂತ್ರಿ ಸ್ಥಾನದ ಸ್ಥಿತಿ ಏನಾಯಿತು ಎಂದು ಮಾತನಾಡುವುದಕ್ಕೆ ಬರುತ್ತಾರೆ. ಆದಕಾರಣ ಅಧಿಕಾರಿಗಳು ಬರೆದುಕೊಳ್ಳಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನೇ ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಹೇಳುವುದು ತಪ್ಪು ಎಂದು ಅಲ್ಲ, ಅವರು ಇರಬೇಕೋ ಇರಬೇಡವೋ ? ಅನೇಕ ಸಂದರ್ಭಗಳಲ್ಲಿ ಅವರು ಇದ್ದು ತಮ್ಮ ಗಮನಕ್ಕೆ ತರಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಊಟಕ್ಕೆ ಹೋಗಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಹೇಳುವುದು ಸರಿ ಇದ್ದರೆ ಸರಿ ಎನ್ನಿ. ಸರಿ ಇಲ್ಲದೇಹೋದರೆ ಕೆ. ಹೆಚ್. ಪಾಟೀಲ್ ತಪ್ಪು ಮಾತನಾಡಿದರು ಎಂದು ತಿಳಿದುಕೊಳ್ಳಿ.

ಈ ಸೂಚನೆಯನ್ನು ಕೊಡುವುದು ನನ್ನ ಕರ್ತವ್ಯ, ಆ ದೃಷ್ಟಿಯಿಂದ ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ಅದಲ್ಲದೆ ಇಂದು ಹೇಳಿದ್ದಾರೆ, ಎರಡು ಸಾವಿರ ಜನಸಂಖ್ಯೆ ಇರುವ ಹಳ್ಳಿಗಳಿಗೆ ಎನ್‌ಆರ್‌ಡಬ್ಲ್ಯುಎಸ್. ಸ್ಕೀಂ ಮಾಡುತ್ತೇವೆಂದು ಹೇಳಿದ್ದಾರೆ. ಒಂದು ಸಾವಿರ ಜನಸಂಖ್ಯೆ ಇರುವ ಹಳ್ಳಿಗಳಿಗೂ ಸಾಮೂಹಿಕವಾಗಿ ನಳದ ಯೋಜನೆಯನ್ನು ಮಾಡಿ ಎಂದು ಹೇಳಿದ್ದೆ, ಇದರ ಬಗ್ಗೆ ಹೇಳಿಲ್ಲ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಇನ್ನೊಮ್ಮೆ ಈ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಇದಾದ ನಂತರ ಇವರ ಇನ್ನೊಂದು ಕಾರ್ಯಕ್ರಮ, ನೋಂದಾಯಿಸಿದ 15 ದಿವಸದೊಳಗಾಗಿ ಪ್ರತಿ ಹಳ್ಳಿಯ ಕೃಷಿ ಕಾರ್ಮಿಕರಿಗೆ ಕೆಲಸ. ಈ ಕೆಲಸ ನಮ್ಮ ಗದಗ್ ತಾಲ್ಲೂಕಿನಲ್ಲಿ ಒಂದೂ ಬಂದಿಲ್ಲ. ನೊಂದಾವಣೆ ನಡೆದಿಲ್ಲ. ಕೆಲಸ ಏನೂ ಇಲ್ಲ. ಬರಗಾಲದ ಕಾಮಗಾರಿ ಬಗ್ಗೆ ಒಂದೇಸಮನೆ ವಿಚಾರ ಮಾಡಿದ್ದಾರೆ. ಈ ಬರಗಾಲದ ಕಾಮಗಾರಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟು, ಎರಡು ವರ್ಷ ಚರ್ಚೆ ನಡೆದು, ಹಿಂದೆ ನಾಲ್ಕು ಲಕ್ಷ ಇದ್ದುದು ಈಗ ಮೂರು ಲಕ್ಷಕ್ಕೆ ಇಳಿದಿದೆ. ಕಾಮಗಾರಿಗಳಲ್ಲಿ ಕೆಲಸ ಮಾಡುತ್ತಿರುವವರು ಮೂರು ಲಕ್ಷ ಮಂದಿ ಎಂದು ಹೇಳಿದ್ದಾರೆ. ಅವರು ಹೇಳಿದಹಾಗೆ ಬಡತನ ರೇಖೆಯನ್ನು ಮೀರದಿರುವ ಜನ ಇವರು. ಬಡತನದ ಕೆಳಗೆ ಇರುವ ಸುಮಾರು ಎರಡೂವರೆ ಕೋಟಿ ಜನಸಂಖ್ಯೆಯಲ್ಲಿ ಕನಿಷ್ಟ 5 ಮಂದಿಗೆ ಕೆಲಸ ಕೊಟ್ಟರೂ 55 ಲಕ್ಷ ಜನರಿಗೆ ಕೊಡುವಂತೆ ವ್ಯವಸ್ಥೆ ಮಾಡಿದ್ದಾರೆ. ಈ ರೀತಿ ನೊಂದಾವಣೆ ಮಾಡುವವರು ಯಾರು ? ಇಲ್ಲಿಗೆ ಹೋಗಿ ನೊಂದಾಯಿಸಿಕೊಳ್ಳಬೇಕು ಎಂದು ಹೇಳಿಲ್ಲ. ನಮ್ಮ ಗದಗ್ ತಾಲ್ಲೂಕಿನಲ್ಲಿ ಒಂದೂ ಕಾಮಗಾರಿ ನಡೆದಿಲ್ಲ. ನಡೆದ ಎರಡು ಮೂರು ಕಾಮಗಾರಿಗಳನ್ನು ತ್ವರಿತವಾಗಿಡಿಸಿ, ಹೇಳಿಕೆ ಪ್ರಕಾರ ಬಂದ್ ಮಾಡಿದ್ದಾರೆ. ಮಾನ್ಯ ಸಭಾಧ್ಯಕ್ಷರೇ, 89 ತಾಲ್ಲೂಕಿನಲ್ಲಿ 3 ಲಕ್ಷ ಜನರಿಗೆ ಕೆಲಸ ಪ್ರಾರಂಭಿಸಿದರೆ, ಉಳಿದ ಕಡೆ ಏನು ಮಾಡುತ್ತಾರೆ ? ಈ ವಿಚಾರವಾಗಿ ಕೇಂದ್ರ ಸರ್ಕಾರದ ಎದುರಿಗೆ ಹೋಗಿ, ಅಗ್ರಿಕಲ್ಚರ್ ಮಿನಿಸ್ಟರ್ ಅವರೊಂದಿಗೆ ಮಾತನಾಡಿದ್ದೇನೆ. ಹಣ ಕೊಡುವುದಿಲ್ಲವೆಂದು ಹೇಳುತ್ತೀರಿ. ಶ್ರೀಮಾನ್ ಬೂಟಾಸಿಂಗ್‌ರವರು ನಮ್ಮ ಸರ್ಕಾರಕ್ಕೆ ಏಕೆ ಕೊಡುವುದಿಲ್ಲ. ಬರಗಾಲ ಇರುವುದು ನಿಜವಿದೆ. ನಮ್ಮ ರಾಜ್ಯ ಬರಗಾಲ ಪೀಡಿತ ಪ್ರದೇಶವಾಗಿದೆ, ಹಣ ಕೊಡಿ ಎಂದು ಅವರಿಗೆ ಹೇಳಿದೆ. ಅದಕ್ಕೆ ಅವರು ಪೂರ್ಣವಾಗಿ ಕೊಡುವುದಕ್ಕೆ ಬರುವುದಿಲ್ಲ, ಕೂಡಲೇ ಇದರ ವಿಚಾರ ಮಾಡಿ, ಎಲ್ಲೆಲ್ಲಿ ಸಹಾಯ ಮಾಡುವುದಕ್ಕೆ ಸಾಧ್ಯವಿದೆ ಅಲ್ಲಿ ಮಾಡುತ್ತೇವೆಂದರು. ಇವತ್ತಿನ ದಿವಸ ನಾವು ಕೇಂದ್ರಸರ್ಕಾರವನ್ನು ಕೇಳೋಣ. ರಚನಾತ್ಮಕವಾಗಿ ಹಣ ಪಡೆಯಬೇಕಾದರೆ ನಾವು ನಿಜವಾಗಿ ಏನಿದೆ ಅದನ್ನು ಅವರ ಎದುರಿಗೆ ಇಡಬೇಕಾಗುತ್ತದೆ. 1986ನೇ ಇಸವಿ ಜನವರಿಯಲ್ಲಿ ರಾಜ್ಯದ 27 ಸಾವಿರ ಹಳ್ಳಿಗಳಿಗೂ ಮನೆಗೊಂದು ಕೆಲಸ ಕೊಡುವ ಯೋಜನೆ ಇದೆ. 1986 ಜನವರಿ ಇನ್ನು 4 ತಿಂಗಳು ಇವೆ. 4 ತಿಂಗಳೊಳಗೆ 27 ಸಾವಿರ ಹಳ್ಳಿಗಳಿಗೆ ಈ ಯೋಜನೆಯನ್ನು ಜಾರಿಗೆ ಕೊಡುವಂತಹ ಶಕ್ತಿಯನ್ನು ಪರಮಾತ್ಮನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಕೊಡಲಿ. ತೀವ್ರವಾಗಿ ಈ ಕೆಲಸ ಪ್ರಾರಂಭವಾಗಲಿ, ಇದು ಬರಗಾಲಕ್ಕೆ ಅನುಕೂಲವಾಗುತ್ತದೆ. ಇನ್ನು ಜನತಾ ಜೀವವಿಮೆ ವ್ಯವಸ್ಥೆಮಾಡುತ್ತೇವೆಂದು ಹೇಳಿದ್ದಾರೆ. ಇದು ಯಾವಾಗ ಆಗುತ್ತದೋ, ಸತ್ತ ಮೇಲೆ ಮಾಡುತ್ತಾರೆಯೋ ಏನೋ. ನಮ್ಮಲ್ಲಿ ಯಾವ ವಿಮೆಯೂ ಇಲ್ಲ, ಈ ವಿಮೆ ಯೋಜನೆ ನಮ್ಮ ಅಧಿಕಾರಿಗಳಿಗೆ ಗೊತ್ತಿದೆಯೋ ಇಲ್ಲವೋ ಈ ಯೋಜನೆ ಸಮರ್ಪಕವಾಗಿ ಆಗಬೇಕಾದರೆ, ಅಧಿಕಾರಿಗಳು ಈ ವಿಚಾರದಲ್ಲಿ ಕೆಲಸ ಮಾಡಬೇಕಾದರೆ ಅವರಿಗೆ ತರಬೇತಿ ಬೇಕು, ಅವರಿಗೆ ಇರತಕ್ಕ ಹಿನ್ನೆಲೆ, ಅವರಿಗೆ ಇರತಕ್ಕ ರಾಜಕೀಯ ಪರಿಜ್ಞಾನ, ಜನಸೇವೆ ಮಾಡುವುದನ್ನು ತಿಳಿದಿರಬೇಕು. ಅವರಿಗೆ ಈ ವಿಚಾರದಲ್ಲಿ ಲವಲವಿಕೆ ಬರಬೇಕು. ಇಂದು ಅವರಿಗೆ ಸರ್ಕಾರ ಭತ್ಯೆ ಇತ್ಯಾದಿಗಳನ್ನು ಮಾಡಿಕೊಡುತ್ತದೆ, ಅವರಿಗೆ ಬರುವ ಹಣ ಬರುತ್ತದೆ. ಜನ ನಿಮ್ಮನ್ನು ಬಯ್ಯುತ್ತಾರೆಯೋ ಹೊರತು ಅವರನ್ನು ಬಯ್ಯುವುದಿಲ್ಲ. ಯಾವರೀತಿಯ ತಿಳುವಳಿಕೆಯನ್ನು ಪಡೆಯದ ಮುಗ್ಧ ಜೀವಿಗಳಿದ್ದಾರೆ. ಅವರ ಬಗ್ಗೆ ನಿಗಾ ವಹಿಸಬೇಕಾಗುತ್ತದೆ.

ಇನ್ನು ಹಳ್ಳಿಗಳಲ್ಲಿ ಒಳಚರಂಡಿ, ಶೌಚಾಲಯಗಳ ನಿರ್ಮಾಣ. ಇದು ಎಲ್ಲೋ ಒಂದು ಕಡೆ ಆಗಿರಬಹುದು. ಇವತ್ತು ಹೆಣ್ಣುಮಕ್ಕಳು ಮಾನ ಮರ್ಯಾದೆ ಇಲ್ಲದೆ ಶೌಚಕ್ಕೆ ಕೊಡುತ್ತಾರೆ. ಮಾನ ಮರ್ಯಾದೆಯನ್ನು ಕೊಡುವ ಸಲುವಾಗಿ ಶೌಚಾಲಯವನ್ನು ಪ್ರತಿಯೊಂದು ಹಳ್ಳಿಗೂ ಮಾಡುತ್ತೇವೆಂದು ಹೇಳಿದ್ದೀರಿ. ಇದು ನಿಜವಾಗಿಯೂ ಆಗುತ್ತದೆಯೋ ಎಂಬುದನ್ನು ತಿಳಿಸಬೇಕು. ಇದು ಬರೀ ಕಾಗದದ ಮೇಲಿನ ಕೆಲಸವಾಗಿದೆ. ಇದು ಬಜೆಟ್‌ನಲ್ಲೂ ಬಂದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಮಾಡುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಇವತ್ತು ಯಾವುದೇ ಕೆಲಸ ಆಗಿಲ್ಲ. ನೀರಾವರಿ ಕೆಲಸಗಳೂ ಆಗಿಲ್ಲ. ಇಂತಹ ಪರಿಸ್ಥಿತಿ ಬಂದಿದೆ. ಒಳಚರಂಡಿ ಯೋಜನೆ ಉಳಿದಿದೆ. ಗದಗ್ ಪ್ರದೇಶದಲ್ಲಿ ಮಾನ್ಯ ಹೆಗಡೆ

ಯವರು ವಚನ ಕೊಟ್ಟಿದ್ದಾರೆ. ತ್ವರಿತವಾಗಿ ನೀರು ಕೊಡುತ್ತೇವೆಂದು ಹೇಳಿದ್ದಾರೆ. ಎಂದು ಕೊಡುತ್ತಾರೋ ನೋಡಬೇಕು. ಒಳಚರಂಡಿ ಅಲ್ಲಿಯೂ ಇಲ್ಲ ಬೆಂಗಳೂರಿನಲ್ಲಿಯೂ ಎಲ್ಲಾ ಕಡೆ ಇಲ್ಲ. ಅನೇಕ ಕಡೆ ಕೊಳಚೆ ನಿರ್ಮಾಣ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮಾನ್ಯಸಭಾಧ್ಯಕ್ಷರೇ ಈ ಒಂದು ಪ್ರಸಂಗದಲ್ಲಿ ಒಳಚರಂಡಿ ಯೋಜನೆ ಮಾಡಬೇಕಾದರೆ ನಿಜವಾಗಿಯೂ ಇದನ್ನು ವಾರ್ ಫುಟಿಂಗ್ ಮೇಲೆ ಮಾಡಬೇಕು. ಕಲ್ಮಷವಾದ ವಾತಾವರಣ ಬದಲಾವಣೆ ಮಾಡುವುದಕ್ಕೆ ಮಾನ್ಯ ಹೆಗಡೆಯವರ ಕಾರ್ಯಕ್ರಮ ದೊಡ್ಡ ನಿಲುವಿನಿಂದ ಕೂಡಿದ್ದು ಇದರ ಬಗ್ಗೆ ಅಧಿಕಾರಿಗಳಿಗೆ ಆಜ್ಞೆ ಮಾಡಬೇಕು. ಇದನ್ನು ಪ್ರತಿ ಹಳ್ಳಿಗೂ ಶಾಲೆ ಎಂದು ಹೇಳಿದ್ದಾರೆ. ಇರುವ ಶಾಲೆಗಳಲ್ಲಿಯೇ ಮಕ್ಕಳು ಕೂಡುವುದಕ್ಕೆ ಮಾಡಿದರೆ ಸಾಕು. ಇನ್ನು ಸಮವಸ್ತ್ರ ಪುಸ್ತಕ ಕೊಡುತ್ತೇವೆಂದು ಹೇಳಿದ್ದಾರೆ, ಈ ಯೋಜನೆಯಿಂದ ಜನತೆಯ ಕಲ್ಯಾಣವಾಗುವುದಿಲ್ಲ. ಇವುಗಳನ್ನು ಸಕಾಲದಲ್ಲಿ ಕೊಡುವುದಕ್ಕಾಗುವುದಿಲ್ಲ ಇವತ್ತು ನೀವು ಈ ಯೋಜನೆಯನ್ನು ಜಾರಿಗೆ ತಂದ ಬಗ್ಗೆ ಟೀಕೆ ಮಾಡುತ್ತಿಲ್ಲ. ಈ ಪುಸ್ತಕಗಳನ್ನು ಸಾಕಾದಷ್ಟು ಕೊಡುವುದಕ್ಕಾಗುವುದಿಲ್ಲ ಬೇರೆ ಕಡೆ ಸಿಕ್ಕುವುದಿಲ್ಲ. ಹೀಗಾದಾಗ ಹುಡುಗರ ಗತಿ ಏನು? ನಾನು ಈ ಬಗ್ಗೆ ಟೀಕೆ ಮಾಡುವುದಿಲ್ಲ. ನಿಮ್ಮ ಯೋಜನೆ ಏನೋ ಸರಿ. ಪುಸ್ತಕಗಳನ್ನು ಒಂದೇ ದಿವಸದಲ್ಲಿ ಕೊಡುವುದಕ್ಕಾಗುವುದಿಲ್ಲ. ಪ್ರಿಂಟಿಂಗ್ ಪ್ರೆಸ್‌ಗೆ ಕೊಡಬೇಕು. ಅವರಿಂದ ಆದಷ್ಟುಬೇಗ ಪ್ರಿಂಟ್ ಆಗಬೇಕು. ಅದಕ್ಕಾಗಿ ಇದನ್ನು ಪರಿಶೀಲನೆ ಮಾಡಿ, ಹುಡುಗನ ಕಲ್ಯಾಣವನ್ನು ಬಯಸತಕ್ಕಂತಾದ್ದು ಇದ್ದರೆ ಶಿಕ್ಷಣ ವಿಮಾ ಯೋಜನೆಯನ್ನು ಜಾರಿಗೆ ತನ್ನಿ. ಪುಸ್ತಕ ವಿಮೆಯನ್ನು ಕಂತು ಎಂದು ಕೊಟ್ಟರೆ, ಕಾಲೇಜಿಗೆ ಹೋಗುವಾಗ ಎಷ್ಟು ಹಣ ಬರುತ್ತದೆ ಎಂಬ ಬಗ್ಗೆ ಯೋಜನೆ ಹಾಕಿಕೊಂಡರೆ ಬಡವರ ಕಲ್ಯಾಣಕ್ಕೆ ಅನುಕೂಲವಾಗುತ್ತದೆ. ನಿಮ್ಮ ಉಪಕಾರವನ್ನು ಸ್ಮರಿಸುತ್ತಾರೆ.

ನೀವು ಇದರ ಬಗ್ಗೆ ಏನು ಸಾಧನೆ ಮಾಡಬೇಕು ಎಂದು ಹೇಳುತ್ತೀರೋ ಅದು ಸಾದನೆಯಾಗುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೊನೆಗೆ ನಿಮ್ಮ ಮಕ್ಕಳನ್ನು ನೀವೇ ಪುರೆಯುವಂತೆ ಕಾಣುತ್ತದಲ್ಲಾ.

ಶ್ರೀ ಕೆ, ಹೆಚ್. ಪಾಟೀಲ್.—ಯಾವುದಕ್ಕೆ ಟೀಕೆಗಳನ್ನು ಮಾಡಬೇಕೋ ಅದನ್ನು ಮಾಡೋಣ ರಚನಾತ್ಮಕವಾದ ಕಾರ್ಯಗಳಿಗೆ ನಾನು ಟೀಕೆ ಮಾಡುವುದಿಲ್ಲ. ತಮಗೆ ಹೇಳಬೇಕಾದರೆ ನಾನು ಈ ಅಂತ್ಯೋದಯದ ಕಾರ್ಯಕ್ರಮವನ್ನು ಟೀಕೆ ಮಾಡುವುದಿಲ್ಲ. ಒಂದು ಊರಿಗೆ 10 ಜನ ಕಡು ಬಡವರು ಯಾರು ಇರುತ್ತಾರೋ ಅಥವಾ ಷೆಡ್ಯೂಲ್ಡ್ ಕ್ಯಾಸ್ಟ್ ಇರುತ್ತಾರೋ ಅವರ ಬೆಳವಣಿಗೆಗೆ ಏನು ಮಾಡಬೇಕೋ ಅದನ್ನು ಮಾಡಿರಿ, ಬೇಡ ಅನ್ನುವುದಿಲ್ಲ. ಅವರು ಉದ್ದಿಮೆಗಳನ್ನು ಮಾಡುವುದಾದರೆ ಅದಕ್ಕೆ ಪ್ರೋತ್ಸಾಹ ಗೂಡಿ, ಅದಕ್ಕೆ ನಾವು ಯಾವತ್ತೂ ಅಡ್ಡಿ ಮಾಡುವುದಿಲ್ಲ. ಶ್ರೀಮಂತರಿಗೆ ಕೋಟಿ ಕೋಟಿ ಗಟ್ಟಲೆ ಸಹಾಯ ಮಾಡಬೇಡಿ. ಚರ್ಮ ಹದ ಮಾಡುವವನಿಗೆ ಇನ್ನು ಇತರರಿಗೆ ಅನುಕೂಲವಾಗುವ ಹಾಗೆ ಕೆಲಸ ಮಾಡಿ. ಅದಕ್ಕೆ ಎಷ್ಟೋ ಅಡ್ಡಿ ಆತಂಕಗಳು ಬರಬಹುದು. ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳದೆ, ಅದನ್ನೆಲ್ಲಾ ಬಿಸಾಕಿ ಅವರ ಬೆಳವಣಿಗೆ ಏನು ಮಾಡಬೇಕೋ ಅದನ್ನು ಮಾಡಿ ಮುಂದಕ್ಕೆ ಹೋಗಿರಿ ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣ ಯೋಜನೆಯ ಕಾರ್ಯಕ್ರಮಕ್ಕೆ ಕೋಟಿಗಟ್ಟಲೆ ಹಣ ಇಟ್ಟಿದ್ದೀರಿ, ಅವರೇನೂ ನನ್ನ ಬಳಗ ಅಲ್ಲ, ನಿಮ್ಮ ಬಳಗ ಅಲ್ಲ. ಅವರ ಕಲ್ಯಾಣವನ್ನು ಮಾಡುವುದು ಬೇಡ ಅಂತ ನಾನು ಹೇಳುವುದಿಲ್ಲ. ಅವರಿಗೆ ಹೆಚ್ಚಿನ ಸಹಾಯ ಮಾಡಿರಿ. ನಾನು ಕೇಳುವುದೇನೆಂದರೆ ಕಾರವಾರ ಜಿಲ್ಲೆಯಲ್ಲಿ ಒಂದು ಹೊತ್ತಿನ ಕೂಳು ತಿನ್ನುವುದಕ್ಕೂ ಕೂಡ ಆ ಜನ ಕಷ್ಟಪಡುತ್ತಿದ್ದಾರಲ್ಲಾ ಅವರಿಗೆ ಏನು ಮಾಡಿದ್ದೀರಿ ನೀವು ? ನಾನು ಕೇಳುವುದು ಇಷ್ಟೆ.

ಇನ್ನು ದನಕರುಗಳ ಮೇವಿನ ಬಗ್ಗೆ ಮತ್ತು ಸೌದೆ ಹಂಚಿಕೆಯ ಬಗ್ಗೆ ತಾವು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಒಂದೊಂದು ಊರಿನಲ್ಲೂ ಒಂದೊಂದು ಅಂಗಡಿ ಇಡುತ್ತೇವೆಂದು ಹೇಳಿದ್ದೀರಿ, ಸಂತೋಷ. ಆದರೆ ತಾವು ಹುಲ್ಕೋಟಿ ಮಾರೆತಿದ್ದೀರಲ್ಲಾ ?

ಶ್ರೀ ರಾಮಕೃಷ್ಣ ಹೆಗಡೆ.—ಹುಲ್ಕೋಟಿಯನ್ನು ಮರೆಯುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಹೆಚ್. ಪಾಟೀಲ್,—ನಾನು ಹೇಳುವುದೇನೆಂದರೆ ಎಲ್ಲಿ ಬರಗಾಲ ಇದೆ, ಎಲ್ಲಿ ದನಕರುಗಳಿಗೆ ಮೇವು ಇಲ್ಲದೆ ಕಂಗಾಲಾಗಿದೆ ಅಲ್ಲಲ್ಲಿ ಒಂದೊಂದು ಅಂಡಿಯನ್ನು ಶೀಘ್ರಗತಿಯಲ್ಲಿ ತೆರೆದು ಮೇವುಗಳನ್ನು ಕಳುಹಿಸುವಂತೆ ಮಾಡಿ. ನಾನು ಇದ್ದಾಗ ತಮಗೂ ಗೊತ್ತಿದೆ. ಮೇವಿನ ಉಂಡೆ ಅಂತ

ಮಾಡಿದ್ದೆ. ಯಾವ ಜಿಲ್ಲೆಯಲ್ಲಿ ಹಸಿರು ಹುಲ್ಲು ಸಿಕ್ಕುತ್ತದೋ ಅದನ್ನು ತೆಗೆದುಕೊಂಡು ಉಂಡೆ ಮಾಡಿಟ್ಟು, ಯಾವಾಗ ಬರಗಾಲ ಬರುತ್ತದೆ, ಯಾವ ಜಿಲ್ಲೆಯಲ್ಲಿ ಮೇವಿನ ಅಭಾವ ಬರುತ್ತದೆ ಆವಾಗ ಅದನ್ನು ಕಳುಹಿಸಿಕೊಡುತ್ತಿದ್ದೆವು. ಅದು ಬರಗಾಲ ಇದ್ದಾಗಲೂ, ಯಾವಾಗಲೂ ಸಿಗುವ ಹಾಗೆ ಮಾಡಿದ್ದೆ. ಬೀದರ್, ಬಿಜಾಪುರ ಇಲ್ಲಿಗೆಲ್ಲಾ ಕಳುಹಿಸುತ್ತಿದ್ದೆ. ಯಾವ ಭಾಗದಲ್ಲಿ ಬರಗಾಲ ಇದೆಯೋ, ದನಕರುಗಳಿಗೆ ಮೇವಿನ ಅಭಾವ ಇದೆಯೋ ಅಲ್ಲಿ ಇಂತಹ ಪುರ್‌ವಡೆ ಮಾಡುವ ಹಾಗೆ ಅಗ್ರಿಕಲ್ಚರಲ್ ಡೈರೆಕ್ಟರ್ ಅವರ ಹತ್ತಿರ ಕೂತುಕೊಂಡು ಸಮಾಲೋಚನೆ ಮಾಡಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಾ ? ಈಗಲಾದರೂ ಕೂಡ ಅದರ ಬಗ್ಗೆ ಲಕ್ಷ್ಯ ತೆಗೆದುಕೊಳ್ಳಿ. ನಮ್ಮ ರಾಜ್ಯದಲ್ಲಿ 3 ವರ್ಷದಿಂದಲೂ ಬರಗಾಲ ಇದೆ, ಈವೊತ್ತು ನಾವು 4ನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಶ್ರೀ ಎ. ಲಕ್ಷ್ಮೀಸಾಗರ್‌ರವರು ಬ್ರಹ್ಮಚಾರಿಗಳು, ಅವರ ಮಾತಿನಲ್ಲಿ ನನಗೆ ನಂಬಿಕೆ ಇದೆಯೋ ಇಲ್ಲ. ಮಳೆ ಬರಲಿ, ಬಾರದೇ ಇರಲಿ ಮುಂದೆ ನಾವು ಆ ಭಾಗದಲ್ಲಿ ಏನು ಮಾಡಬೇಕು ಎನ್ನುವುದನ್ನು ನೋಡುವುದು ಸರ್ಕಾರದ ಕರ್ತವ್ಯ. ಮಾನ್ಯ ಮುಖ್ಯ ಮಂತ್ರಿಗಳು ಒಮ್ಮೊಮ್ಮೆ ಬಹಳ ಸಹಾನುಭೂತಿಯನ್ನು ತೋರಿಸುತ್ತಾರೆ. ನಾನು ಇದ್ದಾಗ ಈ ವ್ಯವಸಾಯದ ರೀಸರ್ಚ್ ಎಲ್ಲಾ ಯೂನಿವರ್ಸಿಟಿಯಲ್ಲೂ ಇರಬೇಕು, ಒಂದೇ ಯೂನಿವರ್ಸಿಟಿಯಲ್ಲೇ ಇರುವುದಲ್ಲ ಎಂದು ಅನೇಕ ಸಲ ಹೇಳಿದ್ದೇನೆ. ಆದರೆ ಅದನ್ನು ನಾವು ಇದ್ದಾಗ ಮಾಡಲಿಕ್ಕಾಗಲಿಲ್ಲ : ದುರ್ದೈವ. ಅದು ನನ್ನ ಕೈಯಲ್ಲಿ ಆಗಬಾರದು ಅಂತ ಇತ್ತು. ಈವೊತ್ತು ಆಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಒಣ ಬೇಸಾಯದ ಬಗ್ಗೆ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದೇನಾದರೂ ಯೋಚನೆ ಮಾಡಿದ್ದೀರಾ ? ನಾನು ಇದ್ದಾಗ ಫಾರೆಸ್ಟ್‌ನಲ್ಲಿ ಕೆಲವು ಜಮೀನನ್ನು ಸ್ಪೆಷಲ್ ಆಗಿ ಕೊಟ್ಟಿದ್ದೇನೆ. ಇದರ ಬಗ್ಗೆ ಕಾನೂನು ಆಗುವುದಕ್ಕೆ ಮೊದಲೇ ಧಾರವಾಡದಲ್ಲಿ ಕೊಟ್ಟಂಥಾ ಜಮೀನನ್ನು ಹಿಂತೆಗೆದುಕೊಂಡಿದ್ದೀರಿ. ಅದರ ಬಗ್ಗೆ ತಾವೇನು ಯೋಚನೆ ಮಾಡಿದ್ದೀರಾ ? ಆ ಕೀರ್ತಿ ಕೆ. ಹೆಚ್. ಪಾಟೀಲರಿಗೆ ಹೋಗಬಾರದು ನೀವೇ ಆ ಕೀರ್ತಿ ಪಡೆಯಿರಿ ಸಂತೋಷ.

ಶ್ರೀ ಕೆ. ಬಿ. ಮಲ್ಲಪ್ಪ.—ಹಿಂದೇ ನಿಮ್ಮದೇ ಸರ್ಕಾರ ಇತ್ತಲ್ಲ, ಇದನ್ನು ಮಾಡಬಹುದಾಗಿತ್ತಲ್ಲ ?

ಶ್ರೀ ಕೆ. ಹೆಚ್. ಪಾಟೀಲ್.—ನಾನು ತಮಗೆ ಮೊದಲೇ ಹೇಳಿದೆನಲ್ಲಾ, ಆ ಕೀರ್ತಿ ಕೆ. ಹೆಚ್. ಪಾಟೀಲರಿಗೆ ಹೋಗಬಾರದು, ಶ್ರೀ ರಾಮಕೃಷ್ಣ ಹೆಗಡೆಯವರೇ ಆ ಕೀರ್ತಿ ಪಡೆಯಲಿ ಎಂದು. ನಾನು ಎಷ್ಟೋ ಸಲ ಈ ರೀಸರ್ಚ್ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಈ ಜಮೀನನ್ನು ಅಕ್ವೈರ್ ಮಾಡಿಕೊಂಡು ಒಂದು ವರ್ಷವಾಗಿದ್ದರೂ ಕೂಡ ಅದರ ಬಗ್ಗೆ ನಿಯಮ ಇತ್ಯಾದಿ ಏನೂ ಮಾಡಿಲ್ಲ. ನಾವು ಇದಕ್ಕೆ ಅಡ್ಡಿ ಬರುವುದಿಲ್ಲ. ಕೇಳಿದರೆ ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹಾರ ಮಾಡುವುದಲ್ಲೇ ನಾವು ಇದ್ದೇವೆ, ನೀವು ಇದ್ದಾಗ ಏತಕ್ಕೆ ಮಾಡಲಿಲ್ಲ ಎಂದು ಹೇಳುತ್ತೀರಿ. ಈಗಲಾದರೂ ಈ ರೀಸರ್ಚ್ ಬಗ್ಗೆ ಮತ್ತು ಒಣ ಬೇಸಾಯದ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಈ ಮಹಿಳೆಯರ ಬಗ್ಗೆ ತಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಕೇಂದ್ರ ಸರ್ಕಾರದವರು ಇದಕ್ಕೆ ಕೋಟಿಗಟ್ಟಲೆ ಹಣ ಏನು ಕೊಡುತ್ತಾರೆ ಅದನ್ನು ತಾವು ಲ್ಯಾಪ್ಸ್ ಮಾಡುತ್ತಿದ್ದೀರಿ. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರನ್ನಾದರೂ ಸೇರಿಸಿಕೊಂಡರೆ ಈ ಮಹಿಳೆಯರ ಕಾರ್ಯಕ್ರಮ ತೀವ್ರಗತಿಯಲ್ಲಿ ನಡೆಯುತ್ತದೆಂದು ಹೇಳಬಯಸುತ್ತೇನೆ,

ಈಗ ತಾವು ಹೊಗೆರಹಿತ ಒಲೆ ಕೊಡುತ್ತೇವೆಂದು ಹೇಳುತ್ತೀರಿ. ಅದು ಎಲ್ಲೂ ಇಲ್ಲವೇ ಇಲ್ಲ, ಅದರ ಬದಲು ಹೊಗೆ ಸಹಿತ ಇರುವ ಕಾರುಗಳನ್ನು ಎಂ.ಎಲ್.ಎ.ಗಳಿಗೆ ಕೊಡುತ್ತೇವೆಂದು ಹೇಳಿದ್ದೀರಲ್ಲಾ ಇದು ಎಷ್ಟರಮಟ್ಟಿಗೆ ಬಡವರ ಕಲ್ಯಾಣವಾಗುತ್ತದೆ ಎನ್ನುಚಿ ಯೋಚನೆ ನಿಮಗೆ ಬಿಟ್ಟಿದ್ದು.

2-30 p.m.

ನಿಮ್ಮ ಅಂತ್ಯೋದಯದ ಯೋಜನೆಯಲ್ಲಿ 16 ಸಾವಿರ ಕುಟುಂಬಗಳನ್ನು ಗುರುತಿಸಿದ್ದೇವೆಂದು ಹೇಳುತ್ತೀರಿ. ಇದರಲ್ಲಿ ಎಷ್ಟು ಜನ ಲಾಭ ಪಡೆದಿದ್ದಾರೋ ? ಇದರಲ್ಲಿ ಮಧ್ಯದಲ್ಲಿರುವ ದಳ್ಳಾಳಿಗಳು ಈ ಹಣವನ್ನು ಏನು ಸುಲಿದಿದ್ದಾರೆ ಅದನ್ನು ವಿಚಾರ ಮಾಡುವುದು ಆವಶ್ಯಕ. ನಾನು ಯಾವ ಯೋಜನೆಗಳನ್ನೂ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಒಳಹೊಕ್ಕು ವಿಚಾರಣೆ ಮಾಡುವುದು ಅವಶ್ಯಕ. ದನಗಳ ಮೇವಿನ ಬಗ್ಗೆ ಕೆಲವು ಯೋಜನೆಗಳ ಹಿನ್ನೆಲೆಯನ್ನು ನಾನು ಹೇಳಿದ್ದೇನೆ, ಅದರ ಬಗ್ಗೆ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಸ್ವಾಮಿ, ವಾಸಿಸಲು ಮನೆ ಇಲ್ಲವರಿಗೆ ಆದ್ಯತೆ ಮೇಲೆ ಮನೆಗಳನ್ನು ಕೊಡುತ್ತೇವೆ ಎಂದು ಹೇಳಿದಿರಿ. ಆದರೆ ಇವತ್ತಿನದಿವಸ ಸೈಟುಗಳನ್ನು

ಕೊಡುವುದನ್ನು ನಿಲ್ಲಿಸಿದ್ದೀರಿ. ಮನೆಗಳ ಬಗ್ಗೆ ಬಜೆಟ್‌ನಲ್ಲಿ ಒಂದು ಮಾತೂ ಇಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಮಂಡಿಸಿದ ಬಜೆಟ್ಟಿನ ಕನ್ನಡ ಪ್ರತಿಯನ್ನೂ ಓದಿದೆ, ಇಂಗ್ಲೀಷ್ ಪ್ರತಿಯನ್ನೂ ಓದಿದೆ. ಒಂದು ಅಕ್ಷರ ಸಹಿತ ಮನೆಗಳ ನಿರ್ಮಾಣಕ್ಕೆ ಖರ್ಚು ಮಾಡುತ್ತೇವೆ ಎಂದು ಹೇಳಿಲ್ಲ. ಇವತ್ತಾದರೂ ಸಹಿತ ಗೃಹಗಳ ನಿರ್ಮಾಣಕ್ಕೆ ಅತ್ಯಂತ ತೀವ್ರವಾದಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಇರಲಿಕ್ಕೆ ಒಂದು ಮನೆ ಬೇಕು ಎಂದು ಇದೆ. ನೀವು ತಾಳಿ ಕೊಟ್ಟರೆ ಮನೆ ಇಲ್ಲದೇ ಹೋದರೆ ಏನು ಪ್ರಯೋಜನ ? ತಾಳಿ ಕಟ್ಟಿಕೊಂಡು ಎಲ್ಲಿ ಇರುವುದು ? ಧರ್ಮಶಾಲೆಗಳಲ್ಲಿ ಇರುವುದಕ್ಕಾಗುತ್ತದೆಯೇ ? ಈಗ ಧರ್ಮಶಾಲೆಗಳೂ ಇಲ್ಲ, ಬಿದ್ದು ಹೋಗಿವೆ, ಧರ್ಮಶಾಲೆಗಳನ್ನು ರಿಪೇರಿ ಮಾಡಲಿಕ್ಕೆ ನಿಮಗೆ ಆಸಕ್ತಿ ಇಲ್ಲ. ಹುಡ್ಕೊ ಸ್ಕೀಮಿನಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಬೇಕಾದರೂ ಕೊಡುವುದಕ್ಕೆ ತಯಾರಿದ್ದಾರೆ ಕೇಂದ್ರ ಸರ್ಕಾರದವರು ಹಣ ಕೊಡುವುದಿಲ್ಲ ಎಂದು ಹೇಳಿದರೂ ಹುಡ್ಕೋ ಸ್ಕೀಮಿನಲ್ಲಿ ಕೊಡುವುದಕ್ಕೆ ತಯಾರಿದ್ದಾರೆ. ಊರೂರಿಗೆ ಈ ಸ್ಕೀಮುಗಳನ್ನು ಮಾಡಿ. ಈ ಯೋಜನೆಗಳನ್ನು ರೂಪಿಸಿಕೊಂಡು, ಯೋಜನೆಗಳ ಅಡಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡುವಂಥ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಚಲೋ ಕೆಲಸ ಮಾಡಿದವರಿಗೆ ಇಲ್ಲ ಎನ್ನುವಹಾಗಿಲ್ಲ. ಹುಡ್ಕೋ ಸ್ಕೀಮಿನಲ್ಲಿ ಎಲ್ಲೋ ಒಂದಿಷ್ಟು ಮನೆಗಳನ್ನು ಕಟ್ಟುವುದು, ಕೊನೇ ಮನೆ ಕಟ್ಟುವುದರೊಳಗೆ ಮೊದಲನೇ ಮನೆ ಬಿದ್ದು ಹೋಗಿರುತ್ತದೆ. ಹುಡ್ಕೋ ಮನೆಗಳನ್ನು ಪರಿಶೀಲನೆ ಮಾಡಿದಾಗ ಎಲ್ಲೋ ಒಬ್ಬರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ನಾನು ಅದನ್ನು ಪರೀಕ್ಷೆ ಮಾಡಲಿಕ್ಕೆ ಹೋಗಲಿಲ್ಲ. ಎಂ.ಎಲ್.ಎ. ಎಂದು ನಾನು ನೋಡಲಿಕ್ಕೆ ಹೋಗಲಿಲ್ಲ. ನಮ್ಮ ಊರಿನಲ್ಲಿ ಹುಡ್ಕೋ ಮನೆಗಳನ್ನು ಯಾವರೀತಿಯಾಗಿ ಕಟ್ಟಿದ್ದಾರೆ ಎಂದು ನೋಡಲಿಕ್ಕೆ ಹೋದೆ. ಸಿಮೆಂಟ್‌ಗಿಂತ ಹೆಚ್ಚು ಮಣ್ಣು ಅದರಲ್ಲಿತ್ತು. ಸರ್ಕಾರ ಕಟ್ಟಿದ ಮನೆಗಳು ಹಾಳಾಗುತ್ತಿವೆ. ತಡೆಯಲಾರದೆ ಸೂಪರ್‌ವೈಸರ್ ಎಲ್ಲಿ ಎಂದು ಕೇಳಿದಾಗ ಯಾರೂ ಸೂಪರ್‌ವೈಸರ್ ಇರಲಿಲ್ಲ, ಇಂಜನಿಯರ್ ಯಾರೂ ಇಲ್ಲ, ನೂರಾರು ಮನೆಗಳನ್ನು ಕಟ್ಟಿದರೂ ಯಾರೂ ಇಲ್ಲ. ಕಂಟ್ರಾಕ್ಟರ್ ಬಂದು ನಿಜವಾಗಿ ಒಳ್ಳೆಯ ಬಂದೋಬಸ್ತ್ ಇದೆ ಎಂದು ಹೇಳಿದ. ನಾನು ಕೆರೆದು ಕೆರೆದು ತೋರಿಸಿದೆ, ಝುಳ ಝುಳ ಎಂದು ಬೀಳುತ್ತಿತ್ತು ಈ ರೀರಿ ಹುಡ್ಕೋ ಸ್ಕೀಮಿನಲ್ಲಿ ಮನೆಗಳನ್ನು ಕಟ್ಟಿದ್ದಾರೆ, ಮಳೆ ಹನಿ ಬಿದ್ದರೂ ಮನೆಗಳು ಬಿದ್ದು ಹೋಗುತ್ತವೆ. ಆದ್ದರಿಂದ ನಿಮ್ಮ ಜನತಾ ಮನೆಗಳು ಬಂದೋಬಸ್ತಾಗಿ ಇವೆಯೋ ಎಂದು ಕೇಳಬೇಕಾಗಿದೆ. ನಾವು ಯಾವ ಕಡೆಯೇ ಇರಲಿ ಎಲ್ಲರೂ ರಚನಾತ್ಮಕವಾದ ಕಾರ್ಯಗಳನ್ನು ಮಾಡೋಣ. ತಮ್ಮಿಂದ ತಪ್ಪಾದರೆ ಅದನ್ನು ತಿದ್ದಿಕೊಂಡು ಮಾಡುವುದು ತಮ್ಮ ಕರ್ತವ್ಯ. ಈ ದೃಷ್ಟಿಯಿಂದ ಮನೆಗಳನ್ನು ಕಟ್ಟುವಾಗಲೂ ಸಹಿತ ದುರ್ವ್ಯವಹಾರಗಳಿಗೆ ತಡೆಹಾಕಿ. ಲಂಚರುಷುವತ್ತುಗಳಿಂದ ಮೀರಿದ್ದಾರೆ ಎಂದು ಹೇಳುತ್ತೀರಿ, ಲಂಚರುಷುವತ್ತುಗಳಿಂದ ಮೀರಿ ಜೀವನ ಸಾಗಿಸುವುದು ಸಾಧ್ಯವೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಮಂತ್ರಿಗಳು ಪ್ರವಾಸ ಹೋದಾಗ, ಎಷ್ಟು ಜನ ಮಂತ್ರಿಗಳು ಅವರು ಇಳಿದುಕೊಂಡ ಜಾಗದಲ್ಲಿ ಖರ್ಚನ್ನು ಕೊಟ್ಟು ಬರುತ್ತಾ ಇದ್ದಾರೆ ? ನಾನು ಮಂತ್ರಿಯಾಗಿದ್ದಾಗ ಗುಲ್ಬರ್ಗಕ್ಕೆ ಹೋದ, ಶ್ರೀಮಾನ್ ದೇವರಾಜ ಅರಸ್‌ರು ನನ್ನನ್ನು ಕಳಿಸಿದ್ದರು. ನಾನು ಹಣ ಕೊಟ್ಟೆ, ಟ್ರಾವಲರ್ಸ್ ಬಂಗಲೋನಲ್ಲಿ, ಉಳಿದವರದೂ ಬಿಲ್ ತಂದಿಟ್ಟ. ಇದು ನಮ್ಮದಲ್ಲ ಅವರದು ಅವರವರಿಗೆ ಕೊಡಿ ಎಂದು ಹೇಳಿದೆ ಸಾಮಾನ್ಯವಾಗಿ ಕೊಡದೇ ಹೋಗುವಂಥ ವಹಿವಾಟು ಇದೆ. ನಿಮಗೆ ದೇವರು ಸಾಕಷ್ಟು ಕೊಟ್ಟಿದ್ದಾನೆ ನಾವು ಆ ವಾತವರಣದಲ್ಲಿ ಬೆಳೆದವರು. ನನ್ನ ನಜರಿಗೆ ಬಂದಿದೆ. ಹಿಂದೆ ಬೇಕಾದರೆ ತೆಗೆಸಿನೋಡಿ. ಟ್ರಾವಲರ್ಸ್ ಬಂಗಲೋನಲ್ಲಿ ಯಾವ ಅಧಿಕಾರಿಗಳಿಂದಲೂ ಖರ್ಚು ಮಾಡಿಸಬಾರದು ಹಣ ಕೊಟ್ಟು ಬರಬೇಕು ಎಂದು ಹೇಳಿದ್ದೇನೆ. ಕೆಲವರು ಬಂದಾಗ ಕೋಳಿ ಸಹಿತ ಸಾಲುವುದಿಲ್ಲ. ನಮ್ಮ ಕಾಲದ್ದನ್ನು ನಾನು ಹೇಳುತ್ತಾ ಇದ್ದೇನೆ.

ಶ್ರೀ ಬಿ. ರಾಚಯ್ಯ.—ನಾನು ಕೊಟ್ಟು ಬರುತ್ತಾ ಇದ್ದೇನೆ. ಊಟ ಮಾಡಿದವರಿಗೆಲ್ಲಾ ಕೊಡವುದಕ್ಕಾಗುವುದಿಲ್ಲ, ನಮ್ಮ ಖರ್ಚು ಕೊಟ್ಟು ಬರುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಯಾರೋ ಒಬ್ಬೊಬ್ಬರು ಕೊಡುತ್ತಾರೆ, ಅವರಿಗೆ ನಮಸ್ಕಾರ ಮಾಡೋಣ. ಕೊಡದೇ ಇರುವವರು ಬಹಳ ಇದ್ದಾರೆ. ಆಮೇಲೆ ಜಿಲ್ಲೆಗೆ ಒಂದರಂತೆ ಹರಿಜನ-ಗಿರಿಜನರ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿದಿರಿ. ಮಹಾತ್ಮಾ ಗಾಂಧೀಜಿಯವರು ಹರಿಜನರ ಉದ್ಧಾರವಾಗಬೇಕು ಎಂದು ಹೇಳಿದರು, ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದಾರೆ, ಶ್ರೀಮಾನ್ ರಾಜೀವ್‌ಗಾಂಧಿಯವರೂ ಹೇಳುತ್ತಾರೆ. ಶ್ರೀಮತಿ ಮರಗತಂ ಚಂದ್ರಶೇಖರ್‌ರವರನ್ನು ಇದಕ್ಕಾಗಿ ಮಿನಿಸ್ಟರ್ ಮಾಡಿದ್ದಾರೆ. ಅದೇ ಕೆಲಸ ಇವರು ಮಾಡುತ್ತಾರೆ ಅಂದರೆ ನಮಗೆಲ್ಲಾ ಸಂತೋಷ. ಶ್ರೀಮಾನ್ ಹೆಗಡೆಯವರ ಕಾಲದಲ್ಲಿ ಇದು ಇನ್ನೂ ಹೆಚ್ಚು ನಡೆಯಬೇಕು ಎನ್ನುವುದು ನಮ್ಮ ಇಚ್ಛೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಬಸವಲಿಂಗಪ್ಪನವರು ಹರಿಜನ-ಗಿರಿಜನರು ಎನ್ನುವುದಕ್ಕೆ ಬದಲಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಎಂದು ಕರೆಯಿರಿ ಎಂದು ಹೇಳುತ್ತಾರೆ.

ಶ್ರೀ ಕೆ. ಎಚ್. ಪಾಟೀಲ್.—ಮಹಾತ್ಮಗಾಂಧಿಯವರು ಹೇಳಿದ ಶಬ್ದವನ್ನು ನಾನು ಹೇಳಿದೆ. ಅನುಸೂಚಿತ ವರ್ಗದವರ ಉದ್ಧಾರಕ್ಕಾಗಿ ಇನ್ನೂ ಹೆಚ್ಚು ಹೆಚ್ಚು ಕೆಲಸ ನಡೆಯಬೇಕು. ಇತ್ತೀಚೆಗೆ ಬ್ಯಾಕವರ್ಡ್ ಕ್ಲಾಸ್ ಡೈರಕ್ಟರ್ ರವರು ಹೇಳಿರುವುದು ಮಾನ್ಯ ಮಂತ್ರಿಗಳವರ ಗಮನಕ್ಕೆ ಬಂದಿತೋ, ಇಲ್ಲವೋ ಗೊತ್ತಿಲ್ಲ. ಸ್ಟಾಪ್ ಆಫ್ ದಿ ಆಕ್ಟಿವಿಟೀಸ್ ಎಂದು ಸರ್ಕ್ಯುಲರ್ ಕೊಟ್ಟಿದ್ದಾರೆ. ಯಾತರ ಸಲುವಾಗಿ ಕೊಟ್ಟರೋ ಗೊತ್ತಿಲ್ಲ ? ಕೊಟ್ಟಿದ್ದು ತಪ್ಪೋ ಒಪ್ಪೋ ಗೊತ್ತಿಲ್ಲ. ತಪ್ಪು ಕೊಟ್ಟಿದ್ದಾರೆ ಎಂದು ಹೇಳೋಣ. ನಿಮ್ಮ ಈ ಆಫೀಸರನ್ನು ಏಕೆ ಇರಲಿಕ್ಕೆ ಕೊಟ್ಟಿರಿ. ನಾನು ಇದ್ದಿದ್ದರೆ ಆವತ್ತೇ ಸಸ್ಪೆಂಡ್ ಮಾಡುತ್ತಿದ್ದೆ. ಎಲ್ಲಾ ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟೆಲುಗಳನ್ನು ಬಂದ್ ಮಾಡಿರಿ ಎಂದು ಕೊಟ್ಟಿದ್ದಾರೆ. ಇದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಅಭಿಪ್ರಾಯ ಯಾವ ರೀತಿ ಆಗುತ್ತದೆ ; ವಿಚಾರ ಮಾಡಿರಿ. ವಿರೋಧಪಕ್ಷದಲ್ಲಿದ್ದು ವಿರೋಧ ಮಾಡಿದರು ಎಂದು ನಮ್ಮ ಕೀರ್ತಿಗೆ ಕಳಂಕ ಬಂದಾಗ ನಾವು ಹೇಳುವುದಕ್ಕೆ ಹಿಂಜರಿಯುವುದಿಲ್ಲ. ಆಂಧ್ರಪ್ರದೇಶದ ಮುಖ್ಯ ಮಂತ್ರಿ ಎನ್. ಟಿ. ರಾಮರಾವ್‌ರವರು ನಮ್ಮ ಸದನದ ಒಬ್ಬ ಸದಸ್ಯರಿಗೆ ಬೇಜವಾಬ್ದಾರಿ ಎಂದು ಹೇಳಿದಾಗ ನಾನು ಪ್ರಿವಿಲೇಜ್ ಮೋಷನ್ ಎತ್ತಿದೆ. ಮುಖ್ಯ ಮಂತ್ರಿಗಳು ಹಾಗೆ ಹೇಳಬಾರದು. ಸದನದಲ್ಲಿರುವವರು ಮುಖ್ಯಮಂತ್ರಿಗಳ ಅಡಿಯಲ್ಲಿ ಕೆಲಸಮಾಡುವಾಗ ಮಂತ್ರಿಗಳೂ ಸಹಿತ ಮನೆಗೆ ಹೋಗುವತನಕ ಗೌರವಾನ್ವಿತರೇ. ಒಬ್ಬ ಅಧಿಕಾರಿ ನಿಮ್ಮನ್ನು ಹೇಳದೇ ಕೇಳದೆ ಬ್ಯಾಕವರ್ಡ್‌ಕ್ಲಾಸ್ ಹಾಸ್ಟೆಲ್ ಬಂದ್ ಮಾಡಿರಿ ಎಂದು ಹೇಳಿ ನಿಮ್ಮ ವಿರುದ್ಧವಾದ ಕೆಲಸ ಮಾಡಿದ್ದಾರೆ. ನಾನು ವಿಶೇಷವಾಗಿ ಅಂಕಿಸಂಖ್ಯೆಗಳನ್ನು ತಮ್ಮ ಗಮನಕ್ಕೆ ತಂದು ತಮ್ಮ ಮನಸ್ಸನ್ನು ವ್ಯಾಕುಲಗೊಳಿಸಲಿಕ್ಕೆ ಇಚ್ಛೆಪಡುವುದಿಲ್ಲ. ಆದರೆ ಕೆಲವು ಸೇಲಿಯಂಟ್ ಫ್ಯೂಚರ್ಸ್ ಹೇಳದೇ ಗತ್ಯಂತರವಿಲ್ಲ. ಇವತ್ತಿನದಿವಸ ಸ್ಟೇಟ್ ಗವರ್ನಮೆಂಟ್‌ನಲ್ಲಿ ಫೆಬ್ರುವರಿವರೆಗೆ 45 ಕೋಟಿ 16 ಲಕ್ಷ ರೂಪಾಯಿಗಳನ್ನು ಎನ್.ಆರ್.ಇ.ಪಿ.ಯಲ್ಲಿ ಖರ್ಚು ಮಾಡಿದ್ದಾರೆ. ಆಮೇಲೆ 1985ರಲ್ಲಿ 19 ಕೋಟಿ 74 ಲಕ್ಷ ಇದೆ. ಕೇಂದ್ರಸರ್ಕಾರ ಏನಾದರೂ ಕಡಿಮೆ ಹಣ ಕೊಟ್ಟಿತ್ತೇ ಪುನಃ 1984–85ರಲ್ಲಿ ಮತ್ತೆ 30 ಕೋಟಿ ರೂಪಾಯಿ ಹಣವನ್ನು ವಿತರಣೆ ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಆರಿಸಿಬಂದು ನಮ್ಮನ್ನು ಮೂಲೆಗೆ ಕೂರಿಸಿದ ಮೇಲೆ ಕೊಟ್ಟಿದ್ದಾರೆ. ಇದರ ಬಗ್ಗೆ ಕಾಳಜಿ ಬೇಡವೇ ? ಇನ್ನು ಅಧ್ಯಕ್ಷರೆ, ತಾವೇ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ಅಧ್ಯಕ್ಷರಾಗಿದ್ದಾಗ ಫುಡ್‌ಗ್ರೈನ್ ವಿಚಾರದಲ್ಲಿ ಬರೆದಿದ್ದೀರಿ. ಮಾನ್ಯ ಹೆಗಡೆಯವರು ಅವನ್ನು ಓದಿದರೆ ನಾಳೆ ಮುಂಜಾನೆಯೇ ಆ್ಯಕ್ಷನ್ ಚಾಲೂ ಆಗುತ್ತದೆಂದು ಕಾಣುತ್ತದೆ. ಅಲ್ಲಿರ ತಕ್ಕಂಥ ಅಧಿಕಾರಿಗಳು ನಿಜವಾಗಿಯೂ ಬಹಳ ಅಯೋಗ್ಯ ರೀತಿಯ ಕೆಲಸಗಳನ್ನು ಮಾಡಿದ್ದಾರೆಂದು ತಾವು ಸ್ಪಷ್ಟವಾಗಿ ಬರೆದಿದ್ದೀರಿ. ಮಿಸ್‌ಅಪ್ರೋಪ್ರಿಯೇಷನ್ ಆಗಿದ್ದು ಬರೆದಿದ್ದೀರಿ. ಇದು ಹೆಗಡೆಯವರ ಕಾಲದಲ್ಲಿ ಆದದ್ದು ಅಲ್ಲ. ಹಿಂದಿನಿಂದಲೂ ಬಂದದ್ದು. ಅದು ಇವರ ಕಾಲಕ್ಕೂ ಕಂಟಿನ್ಯೂ ಆಗಿದೆ. ಸರ್ಕಾರದ ಗಮನಕ್ಕೆ ಬಂದದ್ದು ತಮ್ಮ ಕಾಲದಲ್ಲಿ, ತಾವೇ ತಂದಿದ್ದೀರಿ. ಮಾನ್ಯ ಹೆಗಡೆಯವರು ಅಂತಹವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಶಿವಮೊಗ್ಗದ ಮಿಲ್ ಮಾಲೀಕರಿಂದ ಕೋಟ್ಯಾಂತರ ರೂಪಾಯಿ ಹಣ ವಸೂಲಿ ಮಾಡಿಲ್ಲವೇ ? ಇದರಲ್ಲಿ ಏನಾದರೂ ಅಂಡರ್ ಹ್ಯಾಂಡ್ ಡೀಲಿಂಗ್ ಇದೆಯೇ ? ನೌಕರದಾರರು ತೊಂದರೆಗೆ ಈಡುಮಾಡಿದರೂ ಅವರನ್ನು ಬಿಟ್ಟುಬಿಡುತ್ತೀರಾ ? ಅದೇ ಒಬ್ಬ ಅಧಿಕಾರೇತರ ಮನುಷ್ಯ ತಪ್ಪು ಮಾಡಿದರೆ, ಹತ್ತು ರೂಪಾಯಿ ಮಿಸ್ ಅಪ್ರೋಪ್ರಿಯೇಷನ್ ಮಾಡಿದರೆ ಅವನನ್ನು ಶೂಲೆಗೆ ಹಾಕಬೇಕೆಂದು ಮಾಡುತ್ತೀರಾ, ಸಹಕಾರ ಸಂಘದಲ್ಲಿ ಏನಾದರೂ ತಪ್ಪು ಮಾಡಿದರೆ ಅವನನ್ನು ಅಲ್ಲಿಂದು ತೆಗೆದು ಹಾಕಲಿಕ್ಕೆ ಮಾಡುತ್ತೀರಾ. ಅದೇ ಘನವಾದ ಅಧಿಕಾರಿಗಳು, ಡೆಪ್ಯುಟಿ ಕಮಿಷನರ್‌ಗಳು, ಅಂತಹವರು ಏನು ಮಾಡಿದರೂ ಮಾಫ್ ಮಾಡುತ್ತೀರಿ. ಐಎಎಸ್ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದರೆ ಅದು ಕೇಂದ್ರಕ್ಕೆ ಹೋಗಬೇಕೆಂದು ನಿಮಗೆ ಏನಾದರೂ ಭಯ ಇದೆ ಏನು ? ಅಥವಾ ನಾವು ಅವರಿಗೆ ಏನಾದರೂ ಮಾಡಿದರೆ ಅನಂತರ ಅವರು ನಾವು ಹೇಳಿದಂತೆ ಕೇಳುತ್ತಾರೋ, ಇಲ್ಲವೋ ಎನ್ನುವ ಭಯ ಇದೆಯೇ ? ಫುಡ್‌ಗ್ರೈನ್ ವಿಚಾರದಲ್ಲಿ ಲೆವಿ ಸಿಸ್ಟಮ್ ಸಂಪೂರ್ಣವಾಗಿ ಕೈಬಿಟ್ಟರು. ಇದನ್ನು ಬಿಟ್ಟಮೇಲೆ ವಸೂಲು ಮಾಡತಕ್ಕ ಮಾರ್ಗ ವ್ಯಾಪಾರಸ್ಥರಿಂದ ಎಂಬುದು ತಮಗೆ ಗೊತ್ತಿದೆ ಮುಖ್ಯ ಮಂತ್ರಿಗಳಿಗೆ ಆ ಬಗ್ಗೆ ಹೇಳಬೇಕಾಗಿಲ್ಲ. ನಾವು ವ್ಯಾಪಾರಸ್ಥರಿಂದ ವಸೂಲು ಮಾಡಲಿಕ್ಕೆ ಹೊರಟರೆ, ಅದನ್ನು ಅವರು ಯಾರಕಡೆಯಿಂದ ಪಡೆಯುತ್ತಾರೆಂದರೆ ಅಜ್ಞಾನಿ ಪಶು ರೈತರಿಂದ ಪಡೆಯುತ್ತಾರೆ. ಅವನಿಂದ ಲಾಭ ಪಡೆದು ಉಪಯೋಗ ಮಾಡಿಕೊಳ್ಳುತ್ತಾರೆ. ರೈತರ ಕಡೆಯಿಂದ ಲೆವಿ ವಸೂಲಿ ಮಾಡಲಿಕ್ಕೆ ಹೇಳಿದ ತಕ್ಷಣವೇ ಅವರು ಒಳಗಿಂದೊಳಗೆ ಮಾಡಿ ಹೆಚ್ಚು ಧಾನ್ಯ ಸಂಗ್ರಹಣೆ ಮಾಡಿ ಲಾಭ ಪಡೆದು ರೈತರಿಗೂ ಅನುಕೂಲ ಆಗದಂತೆ, ಸರ್ಕಾರಕ್ಕೂ

ಅನುಕೂಲ ಆಗದಂತೆ ಮಾಡಿದ್ದಾರೆ. ರೈತರಿಂದಲೇ ನೇರವಾಗಿ ಪಡೆದುಕೊಂಡಿದ್ದರೆ ಅನುಕೂಲ ವಾಗುತ್ತಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಗವರ್ನ್ಮೆಂಟ್ ಆಫ್ ಇಂಡಿಯಾದವರು ರೈತರಿಂದ ಲೆವಿ ವಸೂಲಿ ಮಾಡಕೂಡದೆಂದು ಹೇಳಿ ತೀರ್ಮಾನ ಮಾಡಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಹೇಳಿದ ಎಷ್ಟು ಆಜ್ಞೆಗಳನ್ನು ನೀವು ಪಾಲನೆ ಮಾಡಿದ್ದೀರಾ ? ನಮ್ಮ ರಾಜ್ಯದಲ್ಲಿ ಇದು ಬೇಕೇ ಬೇಕು, ನೀವು ಮಾಡುವ ಮಾರ್ಗ ತಪ್ಪು ನಾವು ಯೋಗ್ಯ ಮಾರ್ಗವನ್ನು ಅನುಸರಿಸುತ್ತೇವೆಂದು ಹೇಳುವ ಧೈರ್ಯ ಇರಬೇಕು ನಾವು, ನೀವು ಬೇಕಾದರೆ ಕೇಂದ್ರ ಸರ್ಕಾರಕ್ಕೆ ಹೋಗಿ ಹೇಳೋಣ. ರೈತರನ್ನು ಕಂಗಾಲಾಗಿ ಮಾಡಿ ಎಂದು ನಾನು ಹೇಳುವುದಿಲ್ಲ. ಪ್ರಧಾನಿ ರಾಜೀವ್ ಗಾಂಧಿಯವರು ರೈತರ ಕಲ್ಯಾಣಕ್ಕಾಗಿ ಹೊಸದಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಹೇಳಿದ್ದಾರೆ. 21ನೇ ಶತಮಾನಕ್ಕೆ ಹೋಗಬೇಕೆಂದು ಹೇಳಿದ್ದರ ಬಗ್ಗೆ ಹೆಗಡೆಯವರು ತಮ್ಮ ಭಾಷಣದಲ್ಲಿ ಇದೊಂದು ಕಂಪ್ಯೂಟರ್ ಯುಗದಲ್ಲಿದ್ದೇವೆಂದು ಹೇಳಿದ್ದಾರೆ, ಕಂಪ್ಯೂಟರ್ ಯುಗ ಅಂದರೆ ವೀಡಿಯೋ, ಮತ್ತು ಟಿವಿ. ನೋಡುವುದು ಅಲ್ಲ. ಇವೊತ್ತು ಕಂಪ್ಯೂಟರ್ ಇಟ್ಟಿದ್ದರೆ, ಫುಡ್‌ಗ್ರೈನ್ಸ್‌ನಲ್ಲಿ ಇಂಥಾದ್ದು ಅವ್ಯವಸ್ಥೆ ಬರುತ್ತಾ ಇರಲಿಲ್ಲ. ನಿಮಗೆ ಸರಿಯಾದಂಥ ಅಂಕಿಅಂಶಗಳು ಗೊತ್ತಿಲ್ಲ. ಅದೆಲ್ಲಾ ವ್ಯಾಪಾರಸ್ಥರ ಕೈಯಲ್ಲಿದೆ. ಗೋಡೌನ್‌ಗಳು ಪ್ರತ್ಯೇಕವಾಗಿ ಇಲ್ಲ. ಇಂತಹ ದುರ್ಬರ ಪ್ರಸಂಗದಲ್ಲಿದ್ದೇವೆ. ಇನ್ನುಮೇಲಾದರೂ ಸರ್ಕಾರದವರು ತಮ್ಮ ರೂಪರೇಷೆಗಳನ್ನು ಬದಲಾವಣೆ ಮಾಡಿಕೊಂಡು ಲೆವಿ ಸಿಸ್ಟಂನಲ್ಲಿ ಕೇಂದ್ರ ಸರ್ಕಾರದ ಅನುಮತಿ ಅವಶ್ಯಕತೆ ಇದ್ದರೆ, ಅದನ್ನು ಪಡೆದು ಹೊಸ ವ್ಯವಸ್ಥೆ ಜಾರಿಗೆ ತರಬೇಕು. ಓಪನ್ ಮಾರ್ಕೆಟ್ಟಿನಲ್ಲಿ ಖರೀದಿ ಮಾಡಲಿಕ್ಕೆ ಕೇಂದ್ರದವರು ಬೇಡ ಎಂದು ಹೇಳಿಲ್ಲ. ನೀವು ಕೇಂದ್ರಕ್ಕೆ ಬರೆದು ಇನ್ನಷ್ಟು ಕೊಡಿ ಎಂದು ಏತಕ್ಕೆ ಬೇಡಬೇಕು. ಇನ್ನೊಬ್ಬ ಮಂತ್ರಿಗಳು ಕೇಂದ್ರದಲ್ಲಿ ಕೇಳತಕ್ಕದ್ದು ನಮ್ಮ ಹಕ್ಕು ಎಂದು ಹೇಳಿದ್ದಾರೆ. ಕೇಂದ್ರದಲ್ಲಿ ನಮಗೆ ಎಷ್ಟು ಸಂಬಂಧ ಇದೆಯೋ, ಹೆಗಡೆಯವರಿಗೂ ಅಷ್ಟೇ ಸಂಬಂಧ ಇದೆ. ಕೇಂದ್ರ ಸರ್ಕಾರ ತಾಯಿ. ಅದು ಪೋಷಣೆ ಮಾಡಬೇಕು. ಅದರ ಜೊತೆಗೆ ಮಕ್ಕಳು ತನ್ನದನ್ನು ತಾನು ನೋಡಿಕೊಳ್ಳಬೇಕು. ದೊಡ್ಡವರಾದ ಮೇಲೆ ತಾಯಿ ಮೊಲೆ ಹಾಲು ಪಡೆಯಲಿಕ್ಕೆ ಆಗುತ್ತದೆಯೇ ? ಓಪನ್ ಮಾರ್ಕೆಟ್ ದಾವಣಗೆರೆಯಲ್ಲಿ ರಾಗಿ ಸಿಕ್ಕುತ್ತದೆ, ಹಿರೆಕೇರೂರ್‌ನಲ್ಲಿ ಅಕ್ಕಿ ಸಿಕ್ಕುತ್ತದೆ ಶಿವಮೊಗ್ಗದಲ್ಲಿ ಭತ್ತದ ಧಾರಣೆ ಇಳಿದಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ, ದವಸ ಧಾನ್ಯಗಳನ್ನು ಕೆಲವಾರು ಸಂಘಸಂಸ್ಥೆಗಳಿಂದಾಗಲಿ ಅಥವಾ ಸರ್ಕಾರವೇ ಮುಂದೆಹೋಗಿ ಖರೀದಿ ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ಇದನ್ನು ಏತಕ್ಕೆ ಮಾಡಲಿಲ್ಲ. ಎರಡು ರೂಪಾಯಿಗೆ ಒಂದು ಕೆಜಿ ಅಕ್ಕಿಯನ್ನು ಎಲ್ಲಿ ಕೊಡುತ್ತೀರಾ ? ನಿಮ್ಮ ಹಿಂದೆ ಇರತಕ್ಕವರು ಹುಬ್ಬಳ್ಳಿಯಲ್ಲಿ ಅನೌನ್ಸ್ ಮಾಡಿದರು. ಆದರೆ ನೀವು ಮಾತ್ರ ಬಹಳ ಬುದ್ಧಿವಂತರು ಇದ್ದೀರಿ. ಇದರ ಬಗ್ಗೆ ಬಹಳ ವಿಚಾರಮಾಡಿ ನವೆಂಬರ್ 1ನೇ ತಾರೀಖಿನಿಂದ ಎಂದು ಹೇಳಿದ್ದೀರಿ. ಮೂರು ತಿಂಗಳು ಕೊಟ್ಟು ಈ ವರ್ಷ ಆಗಿಹೋಯ್ತು ಎಂದು ಹೇಳುತ್ತೀರಿ. ನಾವೇನಾದರೂ ಮಾರ್ಚಿ 31ನೇ ತಾರೀಖು ಎಂದು ಹೇಳಿದ್ದರೆ ಏಪ್ರಿಲ್ ಒಂದನೇ ತಾರೀಖಿನಿಂದಲೇ ಕೊಡುತ್ತಿದ್ದೆವು. ಆದುದರಿಂದ ನವೆಂಬರ್‌ನಿಂದಲಾದರೂ ಪ್ರಾರಂಭಮಾಡಿ. ಕೇಂದ್ರ ಸರ್ಕಾರದವರು ಒಂದು ಕೆಜಿ. ಅಕ್ಕಿಗೆ 65 ಪೈಸೆ ಸಬ್ಸಿಡಿ ಕೊಡುವುದಿಲ್ಲವೇನು ? ಆ ವಿಚಾರವನ್ನು ಏತಕ್ಕೆ ಜನತೆಗೆ ಹೇಳುವುದಿಲ್ಲ. ನೀವು 20 ಪೈಸೆ ಕೊಟ್ಟು ಬಡವರಿಗೆ ನಾವು ಬಹಳ ಕಲ್ಯಾಣ ಮಾಡುತ್ತಿದ್ದೇವೆಂದು ಹೇಳುವವರು, ನಾವು ಇಬ್ಬರೂ ಸೇರಿ ಕೊಡುತ್ತಿದ್ದೇವೆಂದು ಹೇಳಿದ್ದರೆ ಎಷ್ಟು ಸಂತೋಷವಾಗುತ್ತಿತ್ತು. ನೀವು ನಾವು ಕೊಡುವುದು ಹೇಳಿಲ್ಲ. ಆದ್ದರಿಂದ ನಾವು ನೀವು ಕೊಡುವುದನ್ನು ಹೇಳಲ್ಲ ಎಂದು ಹೇಳಬಹುದು. ತಾವು ಮೌಲ್ಯಾಧಾರಿತ ರಾಜಕಾರಣ ಮಾಡುವವರು ಎಂದು ನಾನು ಕೇಳುತ್ತಿದ್ದೇನೆ. ಇವೊತ್ತಿನ ದಿವಸ ರಾಜ್ಯದಲ್ಲಿ ಡಿಪಿಎಪಿ, ಎನ್‌ಆರ್‌ಪಿ. ಮುಂತಾದ ಅನೇಕ ಯೋಜನೆಗಳು ಇವೆ. ಈ ಯೋಜನೆಗಳು ಎಷ್ಟೋ ಮಂತ್ರಿವರ್ಯರಿಗೆ ಗೊತ್ತಿಲ್ಲ. ಒಂದುಸಾರಿ ನಮ್ಮ ಕಾಂಗ್ರೆಸ್‌ನಲ್ಲಿಯೇ 20 ಅಂಶಗಳು ಯಾವುವು ಎಂದು ಒಬ್ಬರು ಸೀನಿಯರ್ ಮಂತ್ರಿಗಳಿಗೆ ಕೇಳಿದ್ದಕ್ಕೆ ಹೇಳಲಿಲ್ಲ. ಆ ರೀತಿಯಲ್ಲಿ ತಮ್ಮಲ್ಲೂ ಆಗಬಾರದು ಎಂದು ಹೇಳುತ್ತಿದ್ದೇನೆ. ನಾವು ಹಾಕಿಕೊಳ್ಳತಕ್ಕ ಕಾರ್ಯಕ್ರಮಗಳ ಬಗ್ಗೆ ನಮ್ಮ ಪಕ್ಷದಿಂದ ಒತ್ತಾಯ ಬರುತ್ತದೆ. ಆ ಕ್ರಮ ತಮ್ಮಲ್ಲಿ ಇಲ್ಲ. ಮಾನ್ಯ ತಿಮ್ಮೇಗೌಡರು ಬಹಳ ಪ್ರಾಮಾಣಿಕರು, ಅನುಭವಿಗಳು, ಎಳ್ಳಷ್ಟೂ ಸಂಶಯ ಇಲ್ಲ. ಒನ್‌ಥರ್ಡ್ ಕೇಂದ್ರ ಸರ್ಕಾರದಿಂದ ಸಹಾಯ ಬರುವ ಒಂದು ಸ್ಕೀಂ ಇದೆ, ಅದು ಎಷ್ಟು ಜನರಿಗೆ ಗೊತ್ತಿದೆ ? ಪ್ರಾಮಾಣಿಕತನ ಯಾವುದರ ಮೇಲೆ ಗೊತ್ತಾಗುತ್ತದೆ ? ಆ ಸ್ಥಾನದಲ್ಲಿರುವವರು ಸರಿಯಾದಂಥ ಕಾರ್ಯಕ್ರಮಗಳನ್ನು ನೀತಿನಿಯಮಗಳಿಗೆ ಅನುಸಾರವಾಗಿ ಮಾಡಿದರೆ ಪ್ರಾಮಾಣಿಕತನ ದಕ್ಷತೆ ಕಂಡುಬರುತ್ತದೆ. ನಾನು ಯಾರ ಕಡೆಯಿಂದ ದುಡು

ತೆಗೆದುಕೊಂಡಿಲ್ಲ ಎಂದು ಸುಮ್ಮನೆ ಹೇಳಿದರೆ ಆಗುವುದಿಲ್ಲ. ಅಥವಾ ಏನೂ ಕೆಲಸ ಮಾಡಲಿಲ್ಲ ಎಂದರೂ ಸರಿಹೋಗುವುದಿಲ್ಲ. 1/3 ಭಾಗ ಕೇಂದ್ರದ ಸಹಾಯ ಬರತಕ್ಕ ಸ್ಕೀಮಿನಿಂದ ಪ್ರತಿಯೊಂದು ಹಳ್ಳಿಗೂ ದವಾಖಾನೆ ಕೊಡುವುದಕ್ಕೆ ಸಾಧ್ಯವಿದೆ. ಮೂರು ವರ್ಷಗಳ ಹಿಂದೆ ಆ ಸ್ಕೀಮನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟು ಆದರ ಬಗ್ಗೆ ವಿಚಾರಮಾಡಿ ಎಂದು ಹೇಳಿದೆ. ಆದರೂ ಪ್ರಯೋಜನವಾಗಲಿಲ್ಲ. ಹಣಕಾಸಿನ ಇಲಾಖೆಯವರು ಇಂಥದ್ದಕ್ಕೆ ಅಡಚಣೆ ಮಾಡುತ್ತಾರೆ. ಸಾಮಾನ್ಯವಾಗಿ ಹಣಕಾಸಿನ ಇಲಾಖೆಯವರು ಜನರಿಗೆ ಕಲ್ಯಾಣವಾಗುವಂಥ ಯೋಜನೆಗಳಿಗೆ ಅಡ್ಡ ಬರುತ್ತಾರೆ. ಯಾವುದು ಜನರಿಗೆ ಕಲ್ಯಾಣವಾಗುವು ದಿಲ್ಲವೋ ಅಂಥ ಯೋಜನೆಗಳಿಗೆ ಬಹಳ ಕುಶಲತೆಯಿಂದ ಸಹಾಯ ಮಾಡುತ್ತಾರೆ. ಮೊನ್ನೆ ಲಕ್ಷ್ಮೀ ಶ್ವರದ ಟೆಕ್ಸ್‌ಟೈಲ್ ಮಿಲ್‌ನವರಿಗೆ ಹಣ ಕೊಟ್ಟಿದ್ದಾರೆ. ಅದಕ್ಕೆ ನಿಯಮ ಅಡ್ಡಿ ಬರಲಿಲ್ಲವೆ ? 1/3 ಭಾಗ ಸಹಾಯ ಬರುವ ಯೋಜನೆಯಲ್ಲಿ ದವಾಖಾನೆ ಮಾಡುವ ಬಗ್ಗೆ ಏತಕ್ಕೆ ಯೋಚನೆ ಮಾಡಬಾರದು ? 1/3 ನೇ ಭಾಗ ಸಹಾಯ ಮಾಡುವ ಯೋಜನೆ ಎಂದರೆ ಮೂರನೇ ಒಂದು ಭಾಗವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ, ಇನ್ನು ಮೂರನೇ ಒಂದು ಭಾಗವನ್ನು ರಾಜ್ಯ ಸರ್ಕಾರದವರು ಕೊಡುತ್ತಾರೆ, ಮತ್ತೊಂದು ಮೂರನೇ ಒಂದು ಭಾಗವನ್ನು ಜನರು ಕೊಡಬೇಕಾಗುತ್ತದೆ. ಈ ಎಲ್ಲ ಹಣದಿಂದ ಕೆಲಸ ಮಾಡಬೇಕು. ನಾಳೆ ತಿಮ್ಮೇಗೌಡರು ಹೇಳಬಹುದು ಜನರು ಯಾರೂ ಮುಂದೆ ಬರುವುದಿಲ್ಲ ಎಂದು. ಜನ ಹೇಗೆ ಮುಂದೆ ಬರುತ್ತಾರೆ ? ಯಾರಿಗೆ ಗೊತ್ತು ಈ ಯೋಜನೆ ಇದೆ ಎಂದು ? ಡಿಪಿಪಿ ಎಂದರೆ ಏನು ಏಂದು ನಾನು ಎಂಎಲ್‌ಎ. ಆಗುವ ಮೊದಲು ನನಗೆ ಗೊತ್ತೇ ಇರಲಿಲ್ಲ. ಎಸ್‌ಆರ್ ಇಪಿ. ಎಂದರೆ ಏನು ಎಂದು ಗೊತ್ತಿರಲಿಲ್ಲ. ಏನೋ ಸೆಂಟ್ರಲ್‌ನವರು ಹಣ ಕೊಡುತ್ತಾರೆ ಎಂದು ಅಷ್ಟೇ ಗೊತ್ತಿತ್ತು. ಆದ್ದರಿಂದ ಜನರಿಗೆ ಕೆಲವು ವಿಚಾರಗಳು ಗೊತ್ತಿಲ್ಲದಿರುವುದರಿಂದ ಮುಂದೆ ಬರುವುದಿಲ್ಲ. ಆರೋಗ್ಯ ಇಲಾಖೆಯಲ್ಲಿ ಸಂಶೋಧನೆ ಆಗಬೇಕು. ಎಂಎಲ್‌ಎ.ಗಳಿಗೆ ಬರೀ ವಿಟಮಿನ್ ಟ್ಯಾಬ್ಲೆಟ್ಸ್ ಕೊಟ್ಟರೆ ಸಾಕಾಗುವುದಿಲ್ಲ. ಮೊನ್ನೆ ಮುಖ್ಯಮಂತ್ರಿಗಳು ಅನಾರೋಗ್ಯರಾದಾಗ ಅಮೆರಿಕಾಕ್ಕೆ ಹೋಗಿದ್ದರು. ತಾವೂ ಕೂಡ ಸ್ಪೀಕರ್ ಆಗಿರುವುದರಿಂದ ತಾವೂ ಹೋಗುವುದಕ್ಕೆ ಅವಕಾಶ ಇದೆ. ಆದರೆ ನಮ್ಮಂಥವರಿಗೆ ಎಲ್ಲಿ ಅವಕಾಶವಿದೆ ? ನಾವು ದವಾಖಾನೆಗೆ ಹೋಗಬೇಕು, ಅಲ್ಲಿ ಹೋಗಿ ಬದುಕಿ ಬಂದರೆ ಬರಬಹುದು. ಇಲ್ಲದಿದ್ದರೆ ಸಾಯಬೇಕು. ಮೊನ್ನೆ ನಮ್ಮ ಎದುರಿನಲ್ಲೇ ಒಬ್ಬರು ಸದಸ್ಯರು ಸತ್ತರು. ಅವರು ಸತ್ತ ಮೇಲೆ ಪರೀಕ್ಷೆ ಮಾಡತಕ್ಕ ಪ್ರಸಂಗ ಬಂತು. ಆದರೆ ಜೀವ ಹೋದರೂ ಬದುಕಿಸುವಂಥ ಕೆಲಸವನ್ನು ಅಮೇರಿಕಾದವರು ಮಾಡುತ್ತಾರೆ. ಏಕೆಂದರೆ ಅವರು ರಿಸರ್ಚ್ ಮಾಡುವುದಕ್ಕೆ ಹಣ ಖರ್ಚು ಮಾಡಿದ್ದಾರೆ. ನಾವು ರಿಸರ್ಚ್ ಮಾಡುವುದಕ್ಕೆ ಗಮನ ಕೊಡುವುದಿಲ್ಲ, ಆದ್ದರಿಂದ ನಮಗೆ ಆಗುವುದಿಲ್ಲ. ಅಪೊಲೋ ಆಸ್ಪತ್ರೆಯಂಥ ಆಸ್ಪತ್ರೆ ಬೆಂಗಳೂರಿನಲ್ಲಿ ತೆರೆಯಬೇಕು. ಬದರೀನಾಥ್ ಎಂದು ಒಬ್ಬರು ಉತ್ತಮ ಸರ್ಜನ್ ಅವರು ಈಗ ಮದ್ರಾಸಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಏಕೆಂದರೆ ನಮ್ಮಲ್ಲಿ ಅವರಿಗೆ ಅವಕಾಶ ಮಾಡಿಕೊಡಲಿಲ್ಲ. ಅಲ್ಲಿ ಎಲ್ಲಾ ರೀತಿಯ ಸಹಾಯ ಕೊಟ್ಟಿರುವುದರಿಂದ ಅವರು ಅಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಂಥ ಕೆಲಸಗಳನ್ನು ನೀವು ಮಾಡುವುದಿಲ್ಲ. ಬೆಲ್ಲದ ನೈವೇದ್ಯ ಮಾಡಿ ಫಲ ಪಡೆಯಿರಿ ಎಂದು ಹೇಳಿದರೂ ಕೇಳದಿದ್ದರೆ ಬಿಡಿ. ನಮ್ಮ ರಾಜ್ಯದಲ್ಲಿ ಹತ್ತಿ ಬೆಳೆಯುತಕ್ಕವರ ಸಮಸ್ಯೆ ಏನು ಎಂಬುದು ಮಾನ್ಯ ಅಧ್ಯಕ್ಷರಾದ ತಮಗೆ ಗೊತ್ತಿದೆ. ತಾವು ಸಣ್ಣವರಿದ್ದಾಗಲೇ ಹತ್ತಿ ಸಹಕಾರ ಸಂಘಕ್ಕೆ ಚೇರ್ಮನ್ನರಾಗಿ ಕೆಲಸ ಮಾಡಿದ್ದೀರಿ. ಸಂಕೇಶ್ವರಕ್ಕೆ ಹೋದಾಗ ಹೆಗಡೆಯವರಿಗೆ ಹೇಳಿದಾಗ ಹತ್ತಿ ಖರೀದಿ ಮಾಡುತ್ತೇವೆ ಎಂದು ಹೇಳಿದರು. ಹತ್ತಿ ಖರೀದಿ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ರೈತನಿಗೆ ಪೂರ್ಣ ಲಾಭ ಸಿಗಬೇಕಾದರೆ ಟೆಕ್ಸ್‌ಟೈಲ್ ಮಿಲ್‌ಗಳು ಬೆಳೆಯಬೇಕು, ಇದಕ್ಕೆ ಸರ್ಕಾರದವರು ಗಮನ ಕೊಡಬೇಕು. ಅರಸೀಕೆರೆಯಲ್ಲಿರತಕ್ಕ ಜಿನ್ನಿಂಗ್ ಫ್ಯಾಕ್ಟರಿಯನ್ನು ಸರ್ಕಾರದವರ ಕೈಯಲ್ಲಿ ನಡೆಸುವುದಕ್ಕಾಗಲಿಲ್ಲ. It is not a waste of Government funds? Is it not a national wealth ? ಎರಡನೆಯವರಿಗಾದರೂ ಕೊಟ್ಟು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ಬುದ್ಧಿ ಬೇಡವೆ ? ಇವತ್ತು ರಚನಾತ್ಮಕ ಕಾರ್ಯದಲ್ಲಿ ಮುಂದುವರೆಯುವಂಥ ಕಾಲ ಬಂದಿದೆ. ಇದಕ್ಕಾಗಿ ಕಂಪ್ಯೂಟರ್ ಬೇಕು, ರಿಸರ್ಚ್‌ಗಾಗಿ ಕಂಪ್ಯೂಟರ್ ಬೇಕು. ಕಂಪ್ಯೂಟರ್‌ನಲ್ಲಿ ಪ್ರಬಲವಾದ ಶಕ್ತಿ ಇದೆ. ಒಂದು ಉದಾಹರಣೆ ಕೊಡಬೇಕೆಂದರೆ ಮೊನ್ನೆ ಕುಶನೂರ್ ಅವರ ಅಳಿಯ ಪಾಟೀಲರ ಹತ್ತಿರ ನನ್ನ ಕನ್ನಡಕದ ನಂಬರ್ ಜಾಸ್ತಿಯಾಗಿದೆಯೋ ಕಡಿಮೆಯಾಗಿದೆಯೋ ಎಂದು ಕೇಳುವುದಕ್ಕೆ ಹೋದಾಗ ಅವರು ಅದನ್ನು ಹೇಳುವುದಕ್ಕೆ ಅರ್ಧ ತಾಸು ತೆಗೆದುಕೊಂಡರು. ಆದರೆ ಅದನ್ನು ಕೇವಲ ಎರಡು ನಿಮಿಷದಲ್ಲಿ ಹೇಳುವಂಥ ಕಂಪ್ಯೂಟರ್ ಬಂದಿದೆ. ಆದರಿಂದ ಸುಧಾರಣೆ ಸಾಧ್ಯವಿಲ್ಲವೆ ?

ಶ್ರೀ ಬಿ. ರಾಚಯ್ಯ.—ನಿರುದ್ಯೋಗಿಗಳಿಗೆ ಎಲ್ಲಿ ಕೆಲಸ ಕೊಡುವುದು ?

ಶ್ರೀ ಕೆ. ಹೆಚ್. ಪಾಟೀಲ್.—ನೀವು ಹೋಂ ಮಿನಿಸ್ಟರ್ ಆಗಿ ಸಬ್‌ಇನ್‌ಸ್ಪೆಕ್ಟರ್‌ಗಳನ್ನು

ನೇಮಿಸಿದರೆ ಎಲ್ಲ ಕೆಲಸ ಆಗುವುದಿಲ್ಲ. ನೀವು ಹಳ್ಳಿಗೆ ಹೋಗಬೇಕು. ಜನರನ್ನು ಕೇಳಬೇಕು. ಸಿಂಗ್ ಎಂದು ಒಬ್ಬರು ಅಸಿಸ್ಟೆಂಟ್ ಕಮಿಷನರ್ ಕಾರವಾರ ಜಿಲ್ಲೆಯಲ್ಲಿದ್ದರು. ಅವರ ಮೇಲೆ ಕೆಲವು ಜನರು ನಾನು ಫಾರೆಸ್ಟ್ ಮಿನಿಸ್ಟರ್ ಆಗಿದ್ದಾಗ ಕಂಪ್ಲೇಂಟ್ ಮಾಡಿದ್ದರು. ಆದರೆ ಅವನು ಮಾಡಿದ ಕಾರ್ಯ ನೋಡಿ ಸಂತೋಷಪಟ್ಟೆ. ಅಷ್ಟು ಚೆನ್ನಾಗಿ ಕೆಲಸ ಮಾಡಿದ್ದ. ಕೆಲವು ನಿಯಮಗಳನ್ನು ಮೀರಿದ್ದರೂ ಕೆಲಸ ಚೆನ್ನಾಗಿ ಮಾಡುತ್ತಿದ್ದ. ಮರೀಗೌಡರು ಡೈರೆಕ್ಟರ್ ಆಗಿದ್ದಾಗ ಅವರ ಬಗ್ಗೆ ಕೆಲವು ಐಎಎಸ್. ಅಧಿಕಾರಿಗಳು ಅವರನ್ನು ಜೈಲಿಗೆ ಹಾಕಬೇಕು ಎಂದು ಬರೆದಿದ್ದರು. ಅವರು ಕಾನೂನಿಗೆ ವಿರುದ್ಧವಾಗಿ ನಡೆದಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದರು. ಆಗ ನಾನು ಫೈಲ್ ಮೇಲೆ ಈ ರೀತಿ ಬರೆದಿದ್ದೆ. "Marigowd knows the language of trees and animals but he may not know the language of the law" ಆ ದೃಷ್ಟಿಯಿಂದ ತಾವು ವಿಚಾರ ಮಾಡಬೇಕು. ಜನತೆಯ ಕಲ್ಯಾಣಕ್ಕೆ ಅವಶ್ಯಕವಾದ ಕೆಲಸವನ್ನು ಮಾಡೋಣ. ಇವತ್ತು ಕಂಪ್ಯೂಟರ್‌ಗಳು ಯಾವುದಕ್ಕೆ ಬೇಕು ? ಅಕೌಂಟ್ಸ್ ಮಾಡುವುದಕ್ಕೆ ಬೇಕು ಶಿಕ್ಷಣದಲ್ಲಿ ಕಂಪ್ಯೂಟರ್ ಬೇಕು. ಇವತ್ತು ಅಂಗಿ ಕೊಡುವುದು ಬಿಟ್ಟು ಶಾಲೆಗೆ ಒಂದು ಕಂಪ್ಯೂಟರ್ ಕೊಡಿ. ಟಿವಿ. ಕೊಡಿ. ಅದರ ಮುಖಾಂತರ ನಿಮ್ಮ ಕಾರ್ಯಕ್ರಮ ನಡೆಯಲಿ. ಬರೀ ಭಾಷಣಗಳನ್ನು ಮಾಡುವುದನ್ನು ಬಿಟ್ಟು ಕೆಲಸ ಮಾಡಿ. ನಿಮ್ಮ ಭಾಷಣಗಳನ್ನು ಟಿವಿ.ಯಲ್ಲಿ ಕೇಳಿದಾಗ ನಮ್ಮ ಮನಸ್ಸು ನೋಯುತ್ತದೆ. ಟಿ.ವಿ.ಯವರೂ ಸಹ ಸುಳ್ಳು ಹೇಳುತ್ತಾರಾ ಎಂದು ಅನ್ನಿಸುತ್ತದೆ ಆದರೆ ಅದು ಅವರು ಹೇಳಿದ್ದಲ್ಲ. ನೀವು ಹೇಳಿಸಿದ್ದು. ಈ ರೀತಿ ಮಾಡಬೇಡಿ, ರಷ್ಯ, ಅಮೆರಿಕಾದಲ್ಲಿರುವಂತೆ ರಿಸರ್ಚ್ ಆಕ್ಟಿವಿಟೀಸ್ ಮಾಡಿ ಅದನ್ನು ತೋರಿಸಿ.

ಅಧ್ಯಕ್ಷರು.—ತಾವು ಬೇಗ ಮುಗಿಸಿ.

ಶ್ರೀ ಕೆ, ಹೆಚ್. ಪಾಟೀಲ್.—ತಮ್ಮನ್ನು ಅತಿಕ್ರಮಣ ಮಾಡುವುದು ವಿಹಿತವಲ್ಲ, ಆದರೆ ಕೆಲವಾರು ಮಹತ್ವದ ಅಂಶಗಳನ್ನು ಹೇಳಬೇಕಾಗಿರುವುದರಿಂದ ಮಾತನಾಡಲೇಬೇಕಾಗಿದೆ. ಹೆಗಡೆಯವರು ಇನ್ನು ಮುಂದಾದರೂ ತಿದ್ದಿಕೊಳ್ಳುತ್ತಾರೆಂದು ಭಾವಿಸಿ ಅವರ ಬಗ್ಗೆ ಇನ್ನು ಹೆಚ್ಚಿಗೆ ಹೇಳುವುದನ್ನು ಬಿಟ್ಟು ಇನ್ನು ಗೃಹಮಂತ್ರಿಗಳ ಬಗ್ಗೆ ಕೆಲವು ಮಾತುಗಳನ್ನಾಡುತ್ತೇನೆ. ನನಗೆ ಅವರ ಬಗ್ಗೆ ಬಹಳ ಗೌರವವಿದೆ. ಅವರು ಯಾವುದೇ ಪಕ್ಷದಲ್ಲಿರಲಿ ಮಹಾತ್ಮ ಗಾಂಧಿಯವರ ತತ್ವದಲ್ಲಿ ನಂಬಿಕೆಯುಳ್ಳವರು ಅವರ ಅನುಯಾಯಿಗಳು. ಪ್ರಾಮಾಣಿಕ ವ್ಯಕ್ತಿಗಳು. ಅವರು ಗೂಂಡಾ ಆಕ್ಟ್ ಮಾಡಿದಾಗ ಜೋಕೆ ಎಂದು ಹೇಳಿದ್ದೆ. ನಮ್ಮೆಲ್ಲರನ್ನೂ ಮೀರಿ ಹಣ ಹೊಡೆಯುವ ಖದೀಮರು ಇರುತ್ತಾರೆ, ಹುಷಾರಾಗಿರಿ ಎಂದು ಹೇಳಿದ್ದೆ. ಯಾರಿಗೂ ಅನ್ಯಾಯ ಮಾಡುವುದಿಲ್ಲ ಎಂದು ಅವರು ಹೇಳಿದ್ದರು. ಆದರೆ ಇವತ್ತು ಆಗುತ್ತಿರುವುದೇನು ? ಬೆಂಗಳೂರಿನಲ್ಲಿ ಎಷ್ಟೋ ಖದೀಮರು ಓಡಾಡುತ್ತಿದ್ದರೂ ಅವರನ್ನು ಹಿಡಿಯುವ ಧೈರ್ಯ ಮಾಡುತ್ತಿಲ್ಲ. ಆದರೆ ಹಳ್ಳಿಗಳಲ್ಲಿ ಆರೋಪಗಳಿಂದ ಮುಕ್ತರಾಗಿ ಬಿಡುಗಡೆಯಾಗಿರುವವರನ್ನು ದುಡ್ಡು ತೆಗೆದುಕೊಳ್ಳುವುದಕ್ಕಾಗಿ ಅರೆಸ್ಟ್ ಮಾಡುತ್ತಿದ್ದಾರೆ. ನಾನು ಈ ಬಗ್ಗೆ ಪ್ರಶ್ನೆ ಕಳುಹಿಸಿದ್ದೆ. ನನ್ನ ಅನೇಕ ಮಹತ್ವದ ಪ್ರಶ್ನೆಗಳನ್ನು ಅನ್‌ಸ್ಟಾರ್ಡ್ ಮಾಡಿಬಿಡುತ್ತೀರಿ. ಅದು ತಮಗೆ ಬಿಟ್ಟ ವಿಚಾರ ಅದರ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ನನ್ನ ಪ್ರಶ್ನೆಗೆ ರಾಚಯ್ಯನವರು ಬಹಳ ಜಾಣತನದಿಂದ ಉತ್ತರ ಕೊಟ್ಟಿದ್ದಾರೆ. ಒಬ್ಬನನ್ನು ಗೂಂಡಾ ಆಕ್ಟ್ ಪ್ರಕಾರ ಅರೆಸ್ಟ್ ಮಾಡಿದೆ, ಆತ ಮುನಿಸಿಪಲ್ ಕೌನ್ಸಿಲರ್ ಎಂದು ಹೇಳುತ್ತಾರೆ. ಗದಗ್‌ನಲ್ಲಿ ಇದು ನಡೆದಿರುವುದು. It is reported that he is a Municipal Councillor but he has been elected independently, ಎಂದು ಹೇಳಿದ್ದಾರೆ. ಕಾಂಗ್ರೆಸ್‌ನವ ಎಂದು ಹೇಳಲಿಲ್ಲ. ಹೇಳುವುದರಲ್ಲಿ ಏನು ತಪ್ಪಿದೆ? ಕೆ. ಎಚ್. ಪಾಟೀಲ ಕಾಂಗ್ರೆಸ್ಸಿಗ ಎಂದರೆ ತಪ್ಪೆ ? ಅದನ್ನು ಹೇಳಿದ್ದರೆ ನಿಮಗೂ ಕೀರ್ತಿ ಬರುತ್ತಿತ್ತು. ಕಾಂಗ್ರೆಸ್ಸಿನ ಗೂಂಡಾ ಒಬ್ಬರನ್ನು ಹಿಡಿದೆವು ಎಂದು ಹೇಳಬಹುದಾಗಿತ್ತು. ಅದನ್ನು ಬಿಟ್ಟಿರಿ. ಮಾನ್ಯ ರಾಚಯ್ಯನವರ ನಜರಿಗೆ ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರ ನಜರಿಗೆ ಬಂದಮೇಲೆ ಅವರನ್ನು ಬಿಟ್ಟರು. ಏಕೆಂದರೆ ಅವರಿಗೆ ಗೊತ್ತಾಯಿತು ನಮ್ಮ ಜೊತೆ ಹೊಡೆದಾಡಿದವನು ಎಂದು ಅವನನ್ನು ಬಿಟ್ಟೆ. ಆದರೆ ಹೊಡೆಸಿಕೊಂಡವನ ಗತಿ ಏನು ? 10 ವರ್ಷ ಜೈಲಿಗೆ ಹಾಕಬೇಕಾಗಿತ್ತು. ಇಂತಹವೆಷ್ಟೋ ಇವೆ. ಆ ತತ್ವವನ್ನು ನೀವು ಏಕೆ ಲಾಗು ಮಾಡ್ತಿಲ್ಲ ? ನಿಮ್ಮ ಸರ್ಕಾರದವರು ಈ ಕ್ರಿಯೆಯಲ್ಲಿ ಏನು ಮಾಡಿದ್ದಾರೆ ನೋಡೋಣ ಅಂತ ಇದನ್ನು ಹೇಳಿದ್ದೇನೆ. ಮುಂದೆಯೂ ಕೂಡ ಎಷ್ಟೋ ಇಂತಹ ಘಟನೆಗಳು ಬರಬಹುದು. ಜನಗಳು ಕೂಡ ಆಗಾಗ ಬಂದು ಇಂತಹ ವಿಚಾರಗಳನ್ನು ಹೇಳುತ್ತಿರುತ್ತಾರೆ. ನಿನ್ನೆ ತಮಗೊಂದು ಅರ್ಜಿಯನ್ನು ಕಳುಹಿಸಿದ್ದೇನೆ. ಅನೇಕ ಜನರು ದುಡ್ಡಿದ್ದವರು, ನನ್ನಂತವರು ನಿಮ್ಮಂತಹವರು ಮಾಡುವ ಕಾರ್ಯಗಳಿಗೆ ಜನ ದಂಡವನ್ನು ತರುತ್ತಿದ್ದಾರೆ. ನನಗೂ ಕೂಡ ಮಾಹಿತಿ ಬರುತ್ತಿರುತ್ತವೆ. ಆತ ಮೊದಲಿನಿಂದಲೂ ಕಾಂಗ್ರೆಸ್‌ಗನಲ್ಲ. ಈಗ ಕಾಂಗ್ರೆಸ್‌ಗೆ ಬಂದಿದ್ದಾನೆ. ಇಂತಹವರು ಎಷ್ಟೋ ಜನ ಇದ್ದಾರೆ. ಅದನ್ನು ಹೇಳಬೇಕಾದರೆ ಸಮಯ ಬೇಕಾಗುತ್ತದೆ.

3-00 p.m.

ಶ್ರೀ ಬಿ. ರಾಚಯ್ಯ.—ಎಲ್ಲ ಜಿಲ್ಲಾಧಿಕಾರಿಗಳಿಗೂ ಆ ಒಂದು ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಆ ಜಿಲ್ಲಾಧಿಕಾರಿಗಳನ್ನೆಲ್ಲಾ ಮನೆಗೆ ಕಳುಹಿಸಿ.

ಶ್ರೀ ಬಿ. ರಾಚಯ್ಯ.—ಕಾನೂನನ್ನು ಸರಿಯಾಗಿ ಜಾರಿಗೊಳಿಸಬೇಕೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ತಿಳಿಸಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಕಾನೂನನ್ನು ಸರಿಯಾಗಿ ಅಧಿಕಾರಿಗಳು ಅರ್ಥಮಾಡಿಕೊಂಡು ಕ್ರಮ ತೆಗೆದುಕೊಂಡಿಲ್ಲವೆಂದರೆ ನಾಳೆ ನನ್ನಂತಹ ಒಬ್ಬ ನಿರಪರಾಧಿಯನ್ನು ಜೈಲಿಗೆ ಹಾಕಿದರೆ ಹೇಗೆ ? ನನ್ನನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡು ಇಂತಹ ವಿಷಯಕ್ಕಾಗಿ ನನ್ನನ್ನು ಜೈಲಿಗೆ ಹಾಕಿದರೆ ನನ್ನ ಮನಸ್ಸು ಮರುಗುವುದಿಲ್ಲವೋ ? ಆ ಪಾಪ ನಿಮಗೆ ಹತ್ತುವುದಿಲ್ಲವೇ ? ತಿಳಿದೂ ತಿಳಿದು ಇಂತಹ ಹೀನಾಯವಾದ ಕೆಲಸವನ್ನು ಮಾಡುವುದು ಬೇಡ. ಶ್ರೀಮಾನ್ ಹೆಗಡೇಜಿಯವರು ಇಂತಹ ಕೆಲಸವನ್ನು ಮಾಡಿದರೆ ಹೇಗೆ ?

ಶ್ರೀ ಬಿ. ರಾಚಯ್ಯ.—ಆ ಸೆಕ್ಷನನ್ನು ಸರಿಯಾದ ರೀತಿಯಲ್ಲಿ ನೋಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಅಂತಹ ದೌರ್ಭಾಗ್ಯ ನಮಗೆ ಒದಗಿಸುವುದಿಲ್ಲ ಅಂತ ನಾನು ತಿಳಿದಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಕ್ರಮ ತೆಗೆದುಕೊಳ್ಳಿ. ನಾನು ಬೇಡ ಅಂತ ಹೇಳುವುದಿಲ್ಲ. ಆದರೆ ಆ ರೀತಿಯ ಕ್ರಮವನ್ನು ತೆಗೆದುಕೊಳ್ಳುವಾಗ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಆದರೆ ಅದೇ ರೀತಿಯಲ್ಲಿ ನಿರಪರಾಧಿಗಳಿಗೆ ಶಿಕ್ಷೆಯಾಗಬಾರದು. ಇನ್ನು ಅನೇಕ ವಿಚಾರಗಳಲ್ಲಿ ಹೇಳಬಹುದು. ಅನೇಕ ಕಾರ್ಯಕ್ರಮಗಳಲ್ಲಿ ಈ ರೀತಿಯಾಗುತ್ತಿದೆ. ನಮ್ಮ ಅವಿವಾಹಿತರಾದ ಶ್ರೀಮಾನ್ ರಘುಪತಿಯವರ ಖಾತೆಗೆ ಬರೋಣ. ಅವರಿಗೆ ಸಂಪೂರ್ಣವಾಗಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಆಶೀರ್ವಾದ ಇವೆ. ಬಹಳ ದಿಟ್ಟತನದಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಬಹಳ ಒಳ್ಳೆಯ ನಿರ್ಣಯವನ್ನು ರಿಮೂವಲ್ ಆಫ್ ಕ್ಯಾಪಿಟೇಷನ್ ಫೀ ಬಗ್ಗೆ ತೆಗೆದುಕೊಂಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆದರ ಜೊತೆಗೆ ಲಗ್ನವಾಗದಿದ್ದ ಶ್ರೀಮಾನ್ ರಘುಪತಿಯವರು ಹಾಗೂ ಶ್ರೀಮಾನ್ ಲಕ್ಷ್ಮೀಸಾಗರ್‌ರವರೂ ಕೂಡ ಒಂದೊಂದು ಸಾರಿ ಆ ರೀತಿ ತಪ್ಪು ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ. ಶಾಲೆಗಳೂ ನಡೆಯಬೇಕು. ಅದೇರೀತಿ ಕಾಲೇಜುಗಳೂ ಕೂಡ ನಡೆಯಬೇಕು. ಶಾಲೆಗಳನ್ನು ನಡಸುವುದಕ್ಕೆ ಎಷ್ಟು ಹಣ ಒಂದು ವರ್ಷಕ್ಕೆ ಬೇಕು ? ಅದೇರೀತಿ ಕಾಲೇಜುಗಳನ್ನು ನಡೆಸುವುದಕ್ಕೆ ಎಷ್ಟು ಹಣ ಒಂದು ವರ್ಷಕ್ಕೆ ಬೇಕೆಂಬುದರ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಿಸತಕ್ಕ ಅಧಿಕಾರ ಅವರಿಗಿದೆ. ಆ ಹಣ ಎಲ್ಲಿಂದ ಅವರಿಗೆ ಬರಬೇಕು ? ಕ್ಯಾಪಿಟೇಷನ್‌ನಿಂದ ಅವರಿಗೆ ಹಣ ಬರಬೇಕು. ಅಥವಾ ಸಾಮೂಹಿಕವಾಗಿ ವಿದ್ಯಾರ್ಥಿಗಳ ಮೇಲೆ ದಂಡವನ್ನು ಹಾಕಿ ತರಬೇಕೊ ಇಲ್ಲ ಜಾದೂಮಾಡಿ ತರಬೇಕೋ. ಯಾವರೀತಿ ಶಾಲಾ ಕಾಲೇಜುಗಳನ್ನು ನಡೆಸಬೇಕೆಂಬುದನ್ನು ಮೊದಲು ತಿಳಿಸಬೇಕಲ್ಲ. ಇಲ್ಲವೇ ಫೀಯನ್ನು ಹೆಚ್ಚು ಮಾಡಬೇಕೋ ? ಇದನ್ನು ತಿಳಿಸಬೇಕು. ಅಗತ್ಯವಾಗಿ ಎಷ್ಟು ಖರ್ಚು ಬೇಕಾಗುತ್ತವೆಂಬುದನ್ನು ತಿಳಿದುಕೊಂಡು ಅದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕಲ್ಲ. ನಾನು ಎಲ್ಲರೂ ಅಂತ ಹೇಳುವುದಿಲ್ಲ. ಕೆಲವರು ನ್ಯಾಯವಾಗಿ ಕಾಲೇಜುಗಳನ್ನು ನಡೆಸುವವರೂ ಇದ್ದಾರೆ. ನನಗೂ ವಿಚಾರ ಗೊತ್ತಿದೆ. ಕಾಲೇಜುಗಳನ್ನು ನಡೆಸತಕ್ಕಂಥಹವರು ಎಷ್ಟು ದೂರಕ್ಕೆ ಹೋಗಿದ್ದಾರೆಂದರೆ, ಒಂದೊಂದು ಕ್ಲಾಸಿಗೂ 100 ರೂ.ಗಳನ್ನು ತೆಗೆದುಕೊಂಡು ನಡೆಸುವವರಿದ್ದಾರೆ. ಇನ್ನೂ ಕೆಲವರು ಎಷ್ಟು ದೂರ ಹೋಗಿದ್ದಾರೆಂದರೆ, ಎರಡೂವರೆ ಕೋಟಿ ರೂಪಾಯಿಗಳವರೆಗೆ ವರಮಾನ ತೆರಿಗೆಯ ಜಾಲದಲ್ಲಿ ಸಿಕ್ಕುವವರಿದ್ದಾರೆ ಇಂತಹವರ ಬಗ್ಗೆ ಮಾನ್ಯ ಶ್ರೀ ರಘುಪತಿಯವರು ಏನು ಕ್ರಮ ತೆಗೆದುಕೊಂಡಿದ್ದಾರೆ ? ಅವರಿಗೂ ನಮಗೂ ಒಂದೇ ಮಾಡುತ್ತೀರಾ ? ಕೆಲವು ಕಾಲೇಜುಗಳವರು ನಿಮ್ಮ ತತ್ವಕ್ಕೆ ಸಿದ್ಧರಿದ್ದಾರೆ. ಕೆಲವರು 10 ಪರ್ಸೆಂಟ್‌ನಿಂದ 60 ಪರ್ಸೆಂಟ್‌ವರೆಗೆ ಮ್ಯಾನೇಜ್‌ಮೆಂಟ್‌ಗೆ ಬಿಟ್ಟುಬಿಡಿ. ಅದರಿಂದ ಕ್ಯಾಪಿಟೇಷನ್‌ನ್ನು ವಸೂಲಿ ಮಾಡಿಕೊಂಡು ಕಾಲೇಜುಗಳನ್ನು ನಡೆಸುತ್ತೇವೆಂದು ಹೇಳುವವರೂ ಇದ್ದಾರೆ. ನಾನು ಮಾನ್ಯ ಹೆಗಡೇಜಿಯವರ ಹತ್ತಿರ ಕೇಳುವುದೇನೆಂದರೆ, ನೀವು ಪೂರ್ತಿಯಾಗಿ ನಮ್ಮ ಕಾಲೇಜುಗಳನ್ನು ತೆಗೆದುಕೊಂಡು ಬಿಡಿ. ಇಲ್ಲ ಪೂರ್ತಿಯಾಗಿ ಅನುದಾನ ಕೊಡುವಂತಹ ವ್ಯವಸ್ಥೆಯನ್ನಾದರೂ ಮಾಡಿ. ಕೆಲವರು 20 ಪರ್ಸೆಂಟ್ ಮ್ಯಾನೇಜ್‌ಮೆಂಟ್‌ಗೆ ಬಿಡಿ ಅಂತ ಹೇಳುತ್ತಾರೆ. ಆದರ ಬದಲು ಶೇಕಡ 90 ರಷ್ಟು ಗ್ರ್ಯಾಂಟ್ ಕೊಡಿ. ಇನ್ನುಳಿದ, 10 ಪರ್ಸೆಂಟ್‌ನ್ನು ತಿರುಪೆಮಾಡಿ ತೆಂದುಹಾಕುತ್ತೇವೆ. ಕೇಂದ್ರ ಸರ್ಕಾರದವರು ಕೂಡ 45 ಪರ್ಸೆಂಟ

ವರೆಗೆ ಆಯಾ ಕಾಲೇಜುಗಳಿಗೆ ಗ್ರಾಂಟನ್ನು ಕೊಡುತ್ತಿದ್ದಾರೆ. ಆದರೆ ಇಲ್ಲಿಯತನಕ ತಾವು ಬಡ್ಜೆಟ್‌ನಲ್ಲಿ ಸೇರಿಸಿ ಅದನ್ನು ಕ್ಲೈಂ ಮಾಡುವುದಕ್ಕಾಗಲಿಲ್ಲ. ಇದು ನಿಮ್ಮ ನೀತಿಯೇ ? ನಿಮ್ಮ ಧರ್ಮವೇ ? ಇದು ನಿಮ್ಮ ನ್ಯಾಯವೇ ? ಎಂದು ನಿಮ್ಮನ್ನು ಪ್ರಶ್ನೆಮಾಡಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಮೆಡಿಕಲ್ ಕಾಲೇಜುಗಳ ಬಗ್ಗೆ ಹೊಸದಾಗಿ ಅಧಿಕಾರಕ್ಕೆ ಬಂದಿದ್ದಾಗ ಮಾನ್ಯ ಹೆಗಡೇಜಿಯವರು ಒಂದು ದಿಟ್ಟ ನಿಲುವನ್ನು ತಾಳಿದ್ದರು. ಏನೆಂದರೆ ನಾವು ಯಾವುದೇ ಮೆಡಿಕಲ್ ಕಾಲೇಜುಗಳನ್ನು ಹೊಸದಾಗಿ ಕೊಡುವುದಿಲ್ಲ ಅಂತ. ಆಗ ರೂರಲ್ ಮಾಡಲ್ ಸರ್ವೀಸ್ ಸೊಸೈಟಿಯವರು ಒಂದು ಮೆಡಿಕಲ್ ಕಾಲೇಜನ್ನು ಪ್ರಾರಂಭಮಾಡುವ ಸಲುವಾಗಿ ಅರ್ಜಿಯನ್ನು ಸಲ್ಲಿಸಿದ್ದರು. ಆದರೆ ಹೊಸದಾಗಿ ಮೆಡಿಕಲ್ ಕಾಲೇಜುಗಳನ್ನು ಮಂಜೂರು ಮಾಡುವಾಗ ಆ ಸೊಸೈಟಿಯವರು ಕೊಟ್ಟಂತಹ ಅರ್ಜಿಯು ಮಾತ್ರ ಕ್ಲಿಯರ್ ಆಗಲಿಲ್ಲ. ಅದನ್ನು ಬಿಟ್ಟು ಇನ್ನುಳಿದವುಗಳಿಗೆ ಮಂಜೂರು ಮಾಡಿದಿರಿ. ಏತರ ಸಲುವಾಗಿ ? ಇದರಲ್ಲಿ ನಿಮ್ಮ ಪೊಲಿಟಿಕಲ್ ಪ್ರಿಡಾಮಿನೆನ್ಸ್ ಇಲ್ಲವೇ ? ಆಮೇಲೆ ಅದನ್ನು ಕೇಳಿದರೆ ನೀವು ಹಿಂದೆ ಮಂಜೂರು ಮಾಡಿದ್ದೀರಲ್ಲ ಅಂತ ಹೇಳುತ್ತೀರಿ. ನಾವು ಮಾಡಿದ್ದನ್ನೇ ನೀವು ಮಾಡುವುದಾದರೆ, ನೀವೂ ಏಕೆ ಅಲ್ಲಿ ಅಧಿಕಾರದಲ್ಲಿರಬೇಕು ? ಜನ ನಿಮ್ಮನ್ನು ಏಕೆ ಅಧಿಕಾರಕ್ಕೆ ತಂದು ಕೂಡಿಸಿದ್ದಾರೆ ? ಇಡೀ ಹಿಂದೂಸ್ಥಾನಕ್ಕೇ ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ ನಾವೇ ಖಾಯಂ ಆಗಿ ಅಧಿಕಾರದಲ್ಲಿರಬೇಕಾಗಿತ್ತು. ಆದ್ದರಿಂದ ತ್ಯಾಗ, ನೀತಿ, ಧರ್ಮ ಇಂತಹವುಗಳನ್ನು ನೋಡಿ ಮಾಡುವಂತಹ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕು. ಅಡ್ಮಿಷನ್ ವಿಷಯದಲ್ಲೂ ಕೂಡ ಅಷ್ಟೇ. ಯಾವುದೇ ರೂಲ್ಸನ್ನು ತಡವಾಗಿ ಮಾಡುವುದರಿಂದ ಬಹಳಷ್ಟು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಅಂತಹ ನಿಯಮಗಳ ಬಗ್ಗೆ ವಿಶೇಷವಾಗಿ ಗಮನಹರಿಸಿ ಆ ಬಗ್ಗೆ ವಿಶೇಷವಾದ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳುವುದು ಅತಿ ಅವಶ್ಯಕತೆ ಇದೆ. ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಮಹಲುಗಳನ್ನು ಕಟ್ಟುವ ಸಲುವಾಗಿ ನನ್ನ ಕಿವಿಗೆ ಬಹಳ ಬಹಳ ಕೆಟ್ಟ ಮಾತುಗಳು ಬರುತ್ತಿವೆ, ಇದರೊಳಗೆ ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರ ನಡೆಯುತ್ತಿದೆ ಅಂತ ಹೇಳುತ್ತಿದ್ದಾರೆ, ಏನು ನಡೆಯುತ್ತಿದೆ ಎಂಬುದನ್ನು ತಾವೇ ಹೇಳಬೇಕು. ಕೆಲವರಿಗೆ ಪರ್ಮಿಷನ್ ಕೊಟ್ಟರೆ ಕೆಲವರಿಗೆ ಕೊಡುವುದಿಲ್ಲ ಅಂತ ಹೇಳುತ್ತಿದ್ದಾರೆ. ಕೊಡುವುದಿದ್ದರೆ ಕಡ್ಡಾಯ ಎಲ್ಲರಿಗೂ ಕೊಡಿ ಕೊಡುವುದಿಲ್ಲ ಅಂತ ಹೇಳುವುದಾದರೆ, ನಿರ್ದಿಷ್ಟವಾಗಿ ಹೇಳಿಬಿಡಿ. ನಾವು ಯಾರಿಗೂ ಪರ್ಮಿಷನ್ ಕೊಡುವುದಿಲ್ಲ ಅಂತ. ಇಲ್ಲದಿದ್ದರೆ ಇಷ್ಟು ಅಂತಸ್ತುಗಳ ಮೇಲೆ ಕೊಡುವುದಿಲ್ಲ ಅಂತಲಾದರೂ ಹೇಳಿಬಿಡಿ. ಈ ರೀತಿ ಮಾಡುವುದರಿಂದ ಕೆಲವು ಅಧಿಕಾರಿಗಳು ಮಜಾ ಮಾಡುತ್ತಿದ್ದಾರೆ. ಇದಕ್ಕೆ ನಾವೂ ನೀವೂ ತುತ್ತಾಗಬೇಕಾಗುತ್ತದೆ, ಎನ್ನುವ ಇನ್ನೊಂದು ಅಂಶವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ತಾವು ಇಷ್ಟು ಸೌಜನ್ಯದಿಂದ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ನನ್ನಲ್ಲಿ ಈಗಿರುವ ಮಾಹಿತಿಯನ್ನು ಸಂಪೂರ್ಣವಾಗಿ ಹೇಳಬೇಕಾಗಿದ್ದರೆ ಇನ್ನು 2–3 ಗಂಟೆಗಳು ಮಾತನಾಡುವಂತಹ ಅವಕಾಶ ಬೇಕಾಗಿತ್ತು. ಆದರೆ ಆ ರೀತಿ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ತಾವು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಿಮ್ಮ ಮೇಲೆ ಒಬ್ಬರಿಗೊಂದು ಇನ್ನೊಬ್ಬರಿಗೊಂದು ಎನ್ನುವ ಅಪಾದನೆಯನ್ನು ಹೊರಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ. ಮಾನ್ಯ ಹೆಗಡೇಜಿಯವರು ಸರ್ಕಾರವನ್ನು ನಡೆಸುತ್ತಿದ್ದಾರೆ ತಮ್ಮ ಮುಖಾಂತರ ಅವರಿಗೆ ಒಂದು ಸಲಹೆ ಮಾಡಬಯಸುವುದೇನೆಂದರೆ, ಅವರು ಕೇಂದ್ರ ಹಾಗೂ ರಾಜ್ಯ ಇವೆರಡರ ಮಧ್ಯ ಏನೊಂದು ವಾದ ವಿವಾದವನ್ನು ಎಬ್ಬಿಸಿದ್ದಾರೆ. ಅದನ್ನೇ ಇನ್ನೂ ಹೆಚ್ಚಿಗೆ ಮಾಡಿಕೊಂಡು ಹೋಗದೆ, ಕೇಂದ್ರದಿಂದ ಬರತಕ್ಕ ಸಹಾಯ ಧನ ಹಾಗೂ ಇತರೆ ಎಲ್ಲ ಸೌಕರ್ಯಗಳನ್ನು ಸಂಪೂರ್ಣವಾಗಿ ತೆಗೆದುಕೊಂಡು ನಮ್ಮಲ್ಲಿ ಬರತಕ್ಕ ಇಂಡಸ್ಟ್ರೀಸ್. ನಮ್ಮಲ್ಲಿ ಬರತಕ್ಕ ಸಂಘಸಂಸ್ಥೆಗಳು, ನಮ್ಮಲ್ಲಿ ವಿಶ್ವವಿದ್ಯಾನಿಲಯ, ನಮ್ಮಲ್ಲಿ. ಕೃಷಿ ವಿಜ್ಞಾನ ಕೇಂದ್ರ, ಅಗ್ರಿಕಲ್ಚರಲ್ ಯೂನಿವರ್ಸಿಟಿ ಇವು ಇನ್ನು ಹೆಚ್ಚಾಗಿ ಕರ್ನಾಟಕದಲ್ಲಿ ಆಗಬೇಕು. ಕೆಲವು ಕಾಲದಲ್ಲಿ ಕರ್ನಾಟಕ ರಾಜ್ಯ ಸಂಪದ್ಭರಿತ ರಾಜ್ಯವಾಗಿತ್ತು. ಅದು ಮತ್ತೆ ಬರುವಂತಹ ಅವಕಾಶ ಬರುವಂತಾಗಲಿ ಎಂದು ಹಾರೈಸುತ್ತೇನೆ. ನಮ್ಮ ರಾಜ್ಯವೂ ಕೂಡ ಶ್ರೀಮಾನ್ ರಾಜೀವ್ ಗಾಂಧಿಯವರು ಅನುಸರಿಸಿರುವ ಮಾರ್ಗದಲ್ಲಿ ಕಂಪ್ಯೂಟರ್‌ನ್ನು ಜಾರಿಗೆ ತರುವುದಕ್ಕೆ ಪ್ರಯತ್ನಮಾಡಬೇಕು. ಮುಂದಿನ ವರ್ಷದಲ್ಲಾದರೂ ಬರಲಿ. ಮತ್ತೊಂದು ವರ್ಷಕ್ಕಾದರೂ ಬರಲಿ. ಇದು ಪ್ರಗತಿದಾಯಕವಾದ ರಾಜ್ಯ ಅಂತ ಆಗಬೇಕು ಎಂಬ ಮಾತನ್ನು ಹೇಳುತ್ತೇನೆ. ಇಂಡಸ್ಟ್ರೀಸ್‌ನೊಳಗೆ ಅನೇಕ ಸೌಲಭ್ಯಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದರು. ಸಂಬಂಧಪಟ್ಟ ಮಂತ್ರಿಗಳಾದ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರು ಇಲ್ಲಿ ಇಲ್ಲ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇಂಡಸ್ಟ್ರೀಸ್‌ನಲ್ಲಿ ಮಾನ್ಯ ಬೊಮ್ಮಾಯಿಯವರು ಒಂದು ಸಾವಿರಾನೋ ಇಲ್ಲ 100 ಇಂಡಸ್ಟ್ರೀಸ್‌ಗಳನ್ನೋ ಮಾಡುತ್ತೇವೆಂದು ಹೇಳಿದ್ದರು. ಈಗ ಸ್ವಲ್ಪ ಸ್ವಲ್ಪವಾಗಿ ಅಂದರೆ ತಿಂಗಳಿಗೆ 600 ಇಂಡಸ್ಟ್ರೀಸ್‌ಗಳನ್ನಾದರೂ ಮಾಡುತ್ತೇವೆಂದು ವಚನಕೊ

ಟ್ಟಿದ್ದಾರೆ. ಆ ವಚನವನ್ನು ಪಾಲನೆ ಮಾಡುವುದು ನಿಮ್ಮ ಅಧಿಕಾರಿಗಳಿಗೆ ಆಗುವುದಿಲ್ಲ. ಯಾರ್ಯಾರು ಇಂಡಸ್ಟ್ರೀಸ್‌ಗಳನ್ನು ಮಾಡುವುದಕ್ಕೆ ಮುಂದೆ ಬರುತ್ತಾರೆ ಅವರಿಗೆ ಸಹಾಯವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇಷ್ಟು ಸೇಲ್ಸ್ ಟ್ಯಾಕ್ಸ್‌ಗೆ ವಿನಾಯಿತಿಯನ್ನು ಕೊಟ್ಟರೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅಲ್ಲಿ ಹೋಗಿ ಅಧಿಕಾರಿಗಳನ್ನು ಕೇಳಿದಾಗ ಅವರು ವಿಚಾರ ಮಾಡುತ್ತೇವೆ, ಕೊಡುತ್ತೇವೆಂದು ಹೇಳುತ್ತಾರೆ. "ಅಂದರ್ ಕೀ ಬಾತ್ ರಾಂ ಜಾನೆ" ಎಂದಾಗೆ ಆಯಿತು. ಆಮೇಲೆ ಮಾಡುತ್ತೇವೆ ಅಂದರೆ ಏನು ಅರ್ಥ ? ಮಾನ್ಯ ಹೆಗಡೆಯವರು ಕೂಡ ಪರಂಪರೆಯನ್ನು ಇಟ್ಟುಕೊಂಡಿರುವವರು ಎಂದು ತಿಳಿದುಕೊಂಡಿದ್ದೇನೆ. ಯಾವುದೇ ಇಲಾಖೆಯ ಆಡಳಿತದ ಬಗ್ಗೆ ನಾವೇನಾದರೂ ಪತ್ರವನ್ನು ಕೊಟ್ಟರೆ ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸುತ್ತಾರೆ. ಆದರೆ ಶಮ್ಮ ಸಂಪುಟದಲ್ಲಿರುವ ಕೆಲವು ಸಚಿವರು ಮತ್ತೊಬ್ಬ ಮಂತ್ರಿಯ ಕೈಕೆಳಗೆ ಕೆಲಸ ಮಾಡುವಂತಹ ಅಧಿಕಾರಿಗಳಿಗೆ ಪತ್ರ ಬರೆದು ಇಂತಹ ಕೆಲಸವನ್ನು ಮಾಡಬಾರದು ಅಂತ ತಿಳಿಸುತ್ತಿದ್ದಾರೆ. ಅಂತಹವುಗಳನ್ನು ಇಲ್ಲಿಯೇ ಹಾಜರುಮಾಡಬಹುದು. ಆ ರೀತಿ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಯಾವ್ಯಾವುದಕ್ಕೆ ಆ ರೀತಿ ಮಾಡಿದ್ದಾರೆ, ಅಂತಹ 5ನ್ನು ಕೋರ್ಟಿನಲ್ಲಿ ಹಾಜರುಮಾಡಿದ್ದಾರೆ. ತಾವು ನಿಜವಾಗಿಯೂ ಇದನ್ನು ಪರಿಶೀಲನೆ ಮಾಡಿಲ್ಲ. ಪರಿಶೀಲನೆಯನ್ನಾದರೂ ಮಾಡಿ. ಅಥವಾ ಜಾಗ್ರತೆಯಾಗಿ ಲೋಕಾಯುಕ್ತಕ್ಕೆ ಹೋಗುವುದಕ್ಕೆ ನನಗಾದರೂ ಅವಕಾಶ ಕೊಡಿ. ಖಾತರಿಯಾದರೆ ಅವರು ಹೋಗುತ್ತಾರೆ. ಇಲ್ಲದಿದ್ದರೆ ನಾನು ಹೋಗುತ್ತೇನೆ. ಈ ದೃಷ್ಟಿಯಿಂದ ಅವರ ಗಮನ ಸೆಳೆದು, ತಾವು ಇಷ್ಟು ಕಾಲ ಮಾತನಾಡಲು ನನಗೆ ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀ ಪಾಟೀಲರು ಪೋಲೀಸ್ ಇಲಾಖೆಯ ದಕ್ಷತೆ ಬಗ್ಗೆ ಹೇಳಿದರು. ಆದ್ದರಿಂದ ಸಭೆಯ ಗಮನಕ್ಕೆ ಈ ಕೆಳಗಿನ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಪೋಲೀಸರು 81ರಿಂದ 85ರವರೆಗೆ ಗೋಲಿಬಾರು ಮಾಡಿದ್ದು ಮತ್ತು ಅದರಿಂದ ಎಷ್ಟು ಜನ ಸತ್ತರು ಅಥವಾ ಗಾಯಗೊಂಡರು ಎಂಬುದರ ಬಗ್ಗೆ ಮಾಹಿತಿ ಇದೆ.

Year	No. of firings	No. of rounds fired	No. of Civilians Killed/Injured		No of Policemen Killed/Injured	
1981	16	145	19	76	1	418
1982	30	268	23	94	–	218
1983	11	198	14	60	–	44
1984	30	298	18	50	–	2
1985	12	—	3	3	–	–

ಅಧ್ಯಕ್ಷರು.—ನೀವು ಏನು ಹೇಳುತ್ತಿದೀರಿ ? ಈ ತರಹ ಮಧ್ಯೆ ಮಾತನಾಡಿದರೆ ಹೇಗೆ ?

ಶ್ರೀ ವೇದಾಂತ ಹೆಮ್ಮಿಗೆ.—ಪೋಲೀಸ್ ಇಲಾಖೆಯ ಕಾರ್ಯದಕ್ಷತೆಯ ಬಗ್ಗೆ ಹೇಳುತ್ತಿದ್ದೇನೆ.

* ಶ್ರೀ ಕಡಪಟ್ಟಿ ಎಸ್. ಎಸ್. (ಹುನಗುಂದ).—1985-86ನೇ ಸಾಲಿಗಾಗಿ ಮಾಡಿಸಿರತಕ್ಕಂಥ ಬಡ್ಜೆಟ್ ಏನಿದೆ ಇದು ಈಗಿನ ಪರಿಸ್ಥಿತಿಗೆ ಅತ್ಯಂತ ಸೂಕ್ತವಾದ ಬಡ್ಜೆಟ್ ಎಂದು ಸ್ವಾಗತಿಸಿ ಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಆಯವ್ಯಯದಿಂದ ಹಣದುಬ್ಬರ ಜಾಸ್ತಿಯಾಗುತ್ತದೆಂಬ ಆಕ್ಷೇಪಣೆ ವ್ಯಕ್ತ ಮಾಡಿದರು. ಕೇಂದ್ರ ಸರ್ಕಾರದ ಆಯವ್ಯಯ ಪತ್ರದಿಂದ ಹಣದುಬ್ಬರದ ಪ್ರಮಾಣ ಬಹಳಷ್ಟು ಜಾಸ್ತಿಯಾಗುತ್ತದೆಂಬುದು ಬಹಳಷ್ಟು ಜನರಿಗೆ ಗೊತ್ತಿರಬಹುದು. ಈಗಿನ ನಮ್ಮ ಅರ್ಥ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರದ ಆಯವ್ಯಯದಿಂದ ಹಣದುಬ್ಬರದ ಪರಿಣಾಮ ಬಹಳಷ್ಟು ಕಡಿಮೆ ಎಂಬುದು ಅವರಿಗೆ ಗೊತ್ತಿದ್ದೂ ಏತಕ್ಕೆ ಆ ರೀತಿ ಮಾತನಾಡಿದರೆಂದು ಅರ್ಥವಾಗಲಿಲ್ಲ. ಪ್ರೊಡಕ್ಟಿವ್ ಎಕ್ಸ್‌ಪೆಂಡಿಚರ್ ಮಾಡಬೇಕೆಂದು ಅನೇಕ ಬಾರಿ ಹೇಳಿದರು. ಕೆಲವು ಬಾಬುಗಳಿಗೆ ಇಟ್ಟಿಂತಹ ಹಣದ ಬಗ್ಗೆ ವಿರೋಧ ಪಕ್ಷದ ನಾಯಕರು ವಿರೋಧ ವ್ಯಕ್ತ ಮಾಡಬಾರದಾಗಿತ್ತು ; ಅದರೂ ಮಾಡಿದ್ದಾರೆ. ಸಾಮಾಜಿಕ ಕಾರ್ಯಕ್ರಮಗಳ ಅವಶ್ಯಕತೆ 20 ಅಂಶದ ಕಾರ್ಯಕ್ರಮಗಳಲ್ಲಿ ಇದ್ದದ್ದು ಅವರಿಗೆ ಗೊತ್ತಿದ್ದೂ ಕೂಡ ಏತಕ್ಕೆ ಈ ರೀತಿ ಹೇಳಿದರೆಂದು ನನಗೆ ಅರ್ಥವಾಗಲಿಲ್ಲ. ಪ್ರೊಡಕ್ಟಿವ್ ಎಕ್ಸ್‌ಪೆಂಡಿಚರ್ ಬಗ್ಗೆ ಕೂಡ ಅನೇಕ ಬಾರಿ ಹೇಳುತ್ತಿದ್ದರು. 1983ರಿಂದ ಈ ರಾಜ್ಯದಲ್ಲಿ ನೀರಾವರಿಗಾಗಿ

ಕೊಟ್ಟಂತಹ ಹಣ ಎಷ್ಟೆಂಬುದನ್ನು ಗಣನೆಗೆ ತೆಗೆದುಕೊಂಡದ್ದೇ ಆದರೆ ಪ್ರೊಡಕ್ಟಿವ್ ಎಕ್ಸ್‌ಪೆಂಡಿಚರ್ ಅನ್ನು ಕರ್ನಾಟಕದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಾಡಿದೆಯೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ಅದಕ್ಕೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಕಾವೇರಿ ಬೇಸಿನ್‌ನಲ್ಲಿ ಮೊದಲು 25-30 ಕೋಟಿ ರೂಪಾಯಿಗಳನ್ನು ಕೊಟ್ಟುಕೊಂಡು ಬಂದಿದ್ದು ಈಗ 65 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಕೇಂದ್ರದ ಜೊತೆ ಕದನ ಮಾಡುತ್ತಿದ್ದಾರೆಂದು ಅನೇಕ ಸಾರಿ ಹೇಳಿದರು. ಕೇಂದ್ರದಿಂದ ನಮಗೆ ನ್ಯಾಯವಾಗಿ ಸಿಗಬೇಕಾದುದನ್ನು ಕೇಳಿದರೆ ಅದನ್ನು ಕದನವೆಂದು ಭಾವಿಸುವುದಾದರೆ ಅದು ತಪ್ಪು ಎಂದು ಹೇಳುತ್ತೇನೆ. ನಮ್ಮ ಹಕ್ಕುಗಳನ್ನು ನ್ಯಾಯವಾದ ರೀತಿಯಲ್ಲಿ ಕೇಳಿದರೆ ಅದನ್ನು ಯಾರೂ ಕದನವೆಂದು ಭಾವಿಸಬಾರದು. ದಕ್ಷಿಣದ ರಾಜ್ಯಗಳಲ್ಲಿ ಸತತವಾಗಿ ಬರಗಾಲಕ್ಕೆ ತುತ್ತಾಗುವಂತಹ ಅನೇಕ ಪ್ರದೇಶಗಳು ಕರ್ನಾಟಕ ರಾಜ್ಯದಲ್ಲಿವೆ. ಈ ಬಗ್ಗೆ ಕೇಂದ್ರದಲ್ಲಿ ಅಂಕಿ ಸಂಖ್ಯೆಗಳು ಇವೆ ಎಂದು ನನ್ನ ಭಾವನೆ ಉದಾಹರಣೆಗೆ ನೀರಾವರಿ ಪ್ರದೇಶಗಳು ಕರ್ನಾಟಕದಲ್ಲಿ ಕಡಿಮೆ ಇವೆ. ಆಂಧ್ರ, ದ.ಕ. ತಮಿಳ್ನಾಡು ಮುಂತಾದ ದಕ್ಷಿಣದ ರಾಜ್ಯಗಳಿಗೆ ಹೋಲಿಸಿದರೆ ತೊಂದರೆ ಇರತಕ್ಕ ಪ್ರದೇಶವೆಂದರೆ ಕರ್ನಾಟಕ. ಈ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಜಾಸ್ತಿಯಾಗಬೇಕು. ಆ ಕಾರಣದಿಂದ ಕೇಂದ್ರ ಸರ್ಕಾರ ನಮಗೆ ಜಾಸ್ತಿ ಹಣಕಾಸಿನ ನೆರವು ನೀಡಬೇಕಾದುದು ಅಗತ್ಯವಾಗಿದೆ: ಮತ್ತು ಅದು ಅದರ ಕರ್ತವ್ಯವಾಗಿದೆ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಕರ್ನಾಟಕ ರಾಜ್ಯಕ್ಕೆ ಬಂದಾಗ ಮಲಪ್ರಭಾ ಮತ್ತು ಘಟಪ್ರಭ ಯೋಜನೆಗಳನ್ನು 1985ರೊಳಗೆ ಮುಗಿಸಬೇಕೆಂದು ಆದೇಶ ಕೊಟ್ಟು ಹೋಗಿದ್ದರು. 1972ರಿಂದ 1983ರವರೆಗೆ ಕುಂಟಿಕೊಂಡು ಬಂದದ್ದಕ್ಕೆ ಈಗ ತುರ್ತು ಗತಿಯಲ್ಲಿ ಸ್ವಲ್ಪ ಹೆಚ್ಚು ಹಣ ಒದಗಿಸಿ ಕಾರ್ಯಪ್ರವೃತ್ತವಾಗಿದೆ ಮೊದಲೇ ಜಾಸ್ತಿ ಹಣ ಕೊಟ್ಟಿದ್ದರೆ ತೀವ್ರವಾಗಿ ಮುಗಿಸುವುದಕ್ಕೆ ಸಾಧ್ಯವಾಗುತ್ತಿತ್ತು. ನಮ್ಮ ರಾಜ್ಯದ ಸಂಪನ್ಮೂಲಗಳಿಗೆ ಇತಿಮಿತಿ ಇದೆಎಂದು ನಾನಾದರೂ ಭಾವಿಸುತ್ತೇನೆ. ಹಣಕಾಸಿಗಾಗಿ ಹೋರಾಟ ಮಾಡಿ ತಾರತಮ್ಯ ಮಾಡಿದ್ದನ್ನು ತೋರಿಸಿಕೊಟ್ಟರೆ ಅದನ್ನು ಕದನವೆಂದು ಭಾವಿಸಿ ಮಾತನಾಡುತ್ತಾರೆ.

ವಿಜಯನಗರ ಉಕ್ಕು ಕಾರ್ಖಾನೆಗೆ 1972ರಲ್ಲಿ ಅಡಿಗಲ್ಲು ಹಾಕಿದ್ದು ಇದುವರೆಗೆ ಕಾರ್ಯಗತವಾಗಿಲ್ಲ. ಕರ್ನಾಟಕದಲ್ಲಿ ವಿದ್ಯುತ್ತಿನ ತೊಂದರೆ ಇದೆ ಎಂಬುದು ಗೊತ್ತಿದ್ದರೂ, ಈಗ ನೀವು ವಿದ್ಯುತ್ ಒದಗಿಸಿ ಕೊಡುವುದಾದರೆ ನಾವು ನಿಮಗೆ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿಕೊಡುತ್ತೇವೆಂದು ಹೇಳುತ್ತಾರ. ಇಂಥ ಮಾತನ್ನು ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಮಾತನಾಡಬಾರದು. ತಮ್ಮ ಜವಾಬ್ದಾರಿಯನ್ನು ಅರಿತು ಮಾತನಾಡಿದರೆ ಒಳ್ಳೆಯದಾಗುತ್ತದೆ. ಸುಮ್ಮನೆ ಮಾತು ಬೆಳೆಸುವುದು ಆಗಬಾರದು. ಅದನ್ನು ಕಾರ್ಯರೂಪದಲ್ಲಿ ತರುವ ವಿಚಾರ ಮಾಡಬೇಕು. 1972-73ರಲ್ಲೇ ವಿಜಯನಗರ ಉಕ್ಕು ಕಾರ್ಖಾನೆಯನ್ನು ಕೊಟ್ಟಿದ್ದರೆ ಆಗ ನಮ್ಮಲ್ಲಿ ವಿದ್ಯುತ್ ಉತ್ಪಾದನೆ ಸಾಕಷ್ಟು ಇತ್ತು ಮತ್ತು ಕೊಡಲಿಕ್ಕೂ ಶಕ್ಯವಿತ್ತು. ಈಗಾಗಲೇ ಕೇಂದ್ರ ಸರ್ಕಾರವು ವಿದ್ಯುಚ್ಛಕ್ತಿ ಬಗ್ಗೆ ಕರ್ನಾಟಕಕ್ಕೆ ಎಷ್ಟು ಖರ್ಚುಮಾಡಿದೆ ಮತ್ತು ಇನ್ನಿತರ ರಾಜ್ಯಗಳಲ್ಲಿ ಎಷ್ಟು ಖರ್ಚುಮಾಡಿದೆ ಎಂಬುದನ್ನು ನೋಡಿದಾಗ ಆ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಟೆಲ್ಕೋ ಬಗ್ಗೆ ಪ್ರಸ್ತಾಪ ಬಂದಾಗ ವಿರೋಧ ಪಕ್ಷದ ನಾಯಕರು ಕೆಪಾಸಿಟಿ ಕನ್‌ಸ್ಟ್ರೈಂಟ್ ಆಗಿದೆ ಎಂದು ಹೇಳಿದರು, ಅದು ಕರ್ನಾಟಕಕ್ಕೆ ಮಾತ್ರ ಬರುತ್ತದೋ ಅಥವಾ ಹಿಂದುಸ್ಥಾನದ ರಾಜ್ಯಗಳಿಗೆ ಬರುತ್ತದೋ ಗೊತ್ತಿಲ್ಲ. ಉತ್ತರ ಹಿಂದೂಸ್ಥಾನದಲ್ಲಿ ಬರಲಿಲ್ಲವೆಂದು ಹೇಳುತ್ತಾರೆ. ರೈಲ್ವೆ ವಿಚಾರವನ್ನು ತೆಗೆದುಕೊಂಡರೆ, ಈ ಇಲಾಖೆಯಿಂದ ಕರ್ನಾಟಕ ರಾಜ್ಯಕ್ಕೆ ಆದಷ್ಟು ಅನ್ಯಾಯ ಇಡೀ ದೇಶದಲ್ಲಿ ಬೇರೆ ಯಾವ ರಾಜ್ಯಗಳಲ್ಲೂ ಆಗಿಲ್ಲವೆಂದು ಅನ್ನಿಸುತ್ತದೆ. ರೈಲ್ವೆ ಸ್ಲೀಪರ್ಸ್ ಕೊಟ್ಟರೆ ಮಾತ್ರ ನಾವು ರೈಲ್ವೆ ಲೈನ್ ಹಾಕುತ್ತೇವೆಂದು ಬೇರೆ ರಾಜ್ಯಗಳಿಗೆ ಹೇಳಿದ್ದಾರೆಯೆ ? ಆದರೆ ಕರ್ನಾಟಕಕ್ಕೆ ಮಾತ್ರ ಏಕೆ ಹಾಗೆ ಹೇಳಬೇಕು ? ಆ ದೃಷ್ಟಿಯಿಂದ ಇನ್ನಾದರೂ ಈ ತಾರತಮ್ಯ ಹೋಗಬೇಕೆಂದು ಹೇಳುತ್ತೇನೆ. ಕರ್ನಾಟಕ ರಾಜ್ಯ ಅಭಿವೃದ್ಧಿ ಆದರೆ ಭಾರತ ದೇಶ ಅಭಿವೃದ್ಧಿಯಾಗುತ್ತದೆ. ಆ ದೃಷ್ಟಿಯಿಂದ ಎಲ್ಲ ಮಾನ್ಯ ವಿರೋಧ ಪಕ್ಷದ ನಾಯಕರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ, ಕರ್ನಾಟಕದ ಅಭಿವೃದ್ಧಿ ಕಾರ್ಯಗಳಿಗೆ ಹಣ ಕೊಡುವಾಗ ತಾರತಮ್ಯವಾದರೆ ಅಥವಾ ಹಣಕಾಸಿಗೆ ನಷ್ಟ ಬಂದಂತಹ ಸಂದರ್ಭದಲ್ಲಿ ನಮ್ಮ ಪರಿಸ್ಥಿತಿ ಏನಿದೆ ಎಂಬುದನ್ನು ದಯವಿಟ್ಟು ಅವರಿಗೆ ತಿಳಿಸಿ ಕರ್ನಾಟಕಕ್ಕೆ ನ್ಯಾಯವಾಗಿ ಸಿಗಬೇಕಾದ ಸೌಲಭ್ಯವನ್ನು ದೊರಕಿಸಿಕೊಳ್ಳುವುದಕ್ಕೆ ಎಲ್ಲರೂ ಒಮ್ಮನಸ್ಸಿನಿಂದ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಯಾವುದೇ ಪಕ್ಷದ ಬಗ್ಗೆ ಅಭಿಪ್ರಾಯ ಭೇದ ಮಾಡುವುದು ಸರಿಯಲ್ಲ.

ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ, ಎಲ್ಲಾ ತರಹದ ವಾಹನಗಳ ಮೇಲೆ ನಮ್ಮ ರಾಜ್ಯದಲ್ಲಿ ಕರ ಕಡಿಮೆಯಾದರೆ ಅದರ ವಿಕ್ರಯ ಜಾಸ್ತಿಯಾಗುತ್ತದೆ. ಇಲ್ಲದಿದ್ದರೆ ರಾಜ್ಯಕ್ಕೆ ಬರುವ ಆದಾಯ ಕಡಿಮೆಯಾಗುತ್ತದೆ. ನೂಲಿನ ಮೇಲಿನ ಕರ 4 ರೂಪಾಯಿ ಇದೆ, ಅದನ್ನು 2 ರೂಪಾಯಿ ಮಾಡಿದರೆ ಕಳ್ಳತನ ವ್ಯಾಪಾರ ಕಡಿಮೆಯಾಗುತ್ತದೆ, ಅಲ್ಲದೆ ನೇಕಾರರಿಗೆ ಹೆಚ್ಚು ಅನುಕೂಲವಾಗುತ್ತದೆ. ಕನ್‌ಸೈನ್‌ಮೆಂಟ್ ಸೇಲ್ ಬಗ್ಗೆ ಸರ್ಕಾರ ನಿಗಾ ಇಟ್ಟು ಕೆಲಸ ಮಾಡಬೇಕೆಂದು ಹೇಳುತ್ತೇನೆ. ಪವರ್ ಗಾಣಕ್ಕೆ ಯಾವ

ರೀತಿ ಟ್ಯಾಕ್ಸ್ ಎಕ್ಸ್‌ಮಷನ್ ಇದೆ ಅದೇ ರೀತಿ ಎತ್ತಿನ ಗಾಣದಿಂದ ಎಣ್ಣೆ ಮತ್ತು ಹಿಂಡಿ ಉತ್ಪಾದನೆ ಮಾಡತಕ್ಕ ಚಿಕ್ಕ ಗ್ರಾಮೋದ್ಯೋಗಕ್ಕೂ ಸಹಾಯ ಮಾಡಬೇಕು. ಪವರ್ ಗಾಣದ ಪ್ರಕಾರ ಟ್ಯಾಕ್ಸ್ ಎಕ್ಸ್‌ಮ್ಟ್ ಮಾಡಬೇಕು. ಏಕೆಂದರೆ ಅವರಿಗೆ ಟ್ಯಾಕ್ಸ್ ಹಾಕಿ ವಸೂಲ್ಮಾಡಿದ್ದಾರೆ. 2-3 ವರ್ಷಗಳ ಹಿಂದಿನಿಂದ ಬಂದ್ ಮಾಡಿದ್ದಾರೆ. ಟ್ರಾಕ್ಟರ್ ತೆರಿಗೆಯನ್ನು 100 ರೂ. ವರೆಗೆ ಹಾಕಿದ್ದೀರಿ. ರೈತರ ಟ್ರಾಕ್ಟರ್ ಕಡಿಮೆ ಮಾಡಿ. ಬಾಡಿಗೆ ಹೊಡೆಯುವ ಟ್ರಾಕ್ಟರ್‌ಗೆ ಹಾಗೂ ಟ್ರ್ಯಾಲಿಗಳಿಗೆ ತಿಂಗಳಿಗೆ 100 ರೂ.ಗಳನ್ನು ಸರ್ಕಾರ ಹಾಕಿದರೂ ಪರವಾಗಿಲ್ಲ, ಆದರೆ ಇದರಿಂದ ರೈತರಿಗೆ ತೊಂದರೆಯಾಗಬಹುದು. ಅದೇ ರೀತಿ ಎಂಟ್ರಿ ಟ್ಯಾಕ್ಸ್ ಬೇರೆ ಎಲ್ಲಾ ಕಮಾಡಿಟೀಸ್‌ಮೇಲೆ ಹಾಕಿದ್ದೀರಿ. ಬೀಡಿಯೊಂದನ್ನು ಬಿಟ್ಟು ಇತರೆ ಎಲ್ಲ ವಸ್ತುಗಳ ಮೇಲೂ ಹಾಕಬೇಕೆಂಬುದು ನನ್ನ ಸಲಹೆ ಹೋಟೆಲ್ ಟ್ಯಾಕ್ಸ್ ಲಗ್ಸುರೀಸ್ ಅಂದರೆ ಟಿ.ವಿ. ಸೆಟ್ಟುಗಳ ಮೇಲೆ, ಎಲೆಕ್ಟ್ರಿಸಿಟಿ ಫಿಟ್ಟಿಂಗ್ಸ್ ಮೇಲೆ ಇನ್ನೂ ಹೆಚ್ಚು ಹಾಕಬಹುದು. ಅನೇಕ ಕಂಟ್ರಾಕ್ಟರ್ಸ್ ಮತ್ತಿತರ ಕೆಲವು ವಿಷಯಗಳಲ್ಲಿ ಯಾವ ಯಾವುದನ್ನು ತೆಗೆದುಕೊಂಡರು ಎಂಬುದಕ್ಕೆ ಒಂದು ಸರಿಯಾದ ಕಾನೂನನ್ನು ತರುತ್ತೇವೆಂದು ಹೇಳಿದ್ದಾರೆ. ಇದರಲ್ಲಿ ಜಾಸ್ತಿ ಸರ್ಕಾರಕ್ಕೆ ಆದಾಯ ಬರುವ ರೀತಿಯಲ್ಲಿ ಮಾಡಬೇಕು. ಎಕ್ಸೈಸ್ ಡ್ಯೂಟಿ ಮೇಲೆ excise duty particularly on Indian Made Foreign Liquorಗೆ 5.25 ರೂ. ಇದ್ದುದನ್ನು 6ರೂ. ಎಂದು ಮಾಡಿದ್ದಾರೆ. ಇದನ್ನು ಇನ್ನೂ ಜಾಸ್ತಿ ಮಾಡಬೇಕು. ಇದರಲ್ಲಿ ಆಗುವಂತಹ ಸೋರಿಕೆಯನ್ನು ತಪ್ಪಿಸತಕ್ಕಂತಹದ್ದು ಅಷ್ಟೇ ಮುಖ್ಯವಾದುದು. ಅದೇ ರೀತಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಇನ್‌ಕ್ಲೂಡಿಂಗ್ ಕೆ.ಎಸ್.ಆರ್.ಟಿ.ಸಿ.ಯಲ್ಲಿ 3 ತಿಂಗಳು ಇದ್ದಂತಹ ಒಬ್ಬ ಅಧಿಕಾರಿಯನ್ನು ನಾಲ್ಕನೆ ತಿಂಗಳಿನಲ್ಲಿಯೇ ಅಲ್ಲಿಂದ, ಬೇರೆ ಕಡೆಗೆ ಹಾಕುವ ವ್ಯವಸ್ಥೆ ನಮ್ಮಲ್ಲಿದೆ. ಆ ರೀತಿ ಮಾಡದೆ ಇದರಲ್ಲಿ ಪರಿಣತೆಯನ್ನು ಹೊಂದಿರತಕ್ಕಂಥ ಒಬ್ಬ ಸರಿಯಾದ ತಜ್ಞರನ್ನೇ ಆ ಜಾಗಕ್ಕೆ ಹಾಕಿ, ಅವರ ಮೇಲೆ ಜವಾಬ್ದಾರಿಯನ್ನು ಹೇರಿಸಿ ನಷ್ಟ ಇಲ್ಲದ ರೀತಿಯಲ್ಲಿ ನಮ್ಮ ಸರ್ಕಾರದ ಎಲ್ಲ ಉದ್ದಿಮೆಗಳು ನಡೆಯುವ ಹಾಗೆ ಮಾಡಿ. ಸರ್ಕಾರಕ್ಕೆ ಅಥವಾ ರಾಜ್ಯಕ್ಕೆ ಹಾನಿಯಾಗದ ರೀತಿಯಲ್ಲಿ ಅವುಗಳು ತನ್ನ ಕಾರ್ಯವನ್ನು ನಿರ್ವಹಣೆ ಮಾಡಬೇಕು. ಇಂಥವುಗಳಿಗೆಲ್ಲಾ, ಮೆರಿಟ್ ಆಧಾರದ ಮೇಲೆ ನೇಮಕವನ್ನು ಮಾಡಬೇಕು. ಅವರಿಗೆ ಸಂಪೂರ್ಣವಾದ ಜವಾಬ್ದಾರಿಯನ್ನು ವಹಿಸಿ ಅವರಿಂದ ಸರ್ಕಾರ ಜಾಸ್ತಿ ಕೆಲಸವನ್ನು ತೆಗೆಯಬೇಕು. ಅದೇ ರೀತಿ ಪೋಸ್ಟ್‌ಗಳು ಇನ್ನೂ ಜಾಸ್ತಿಯಾಗಬೇಕು. ಚೆಕ್ ಪೋಸ್ಟ್‌ಗಳನ್ನು ಜಾಸ್ತಿ ಮಾಡುವುದರ ಜೊತೆಗೆ ಅಲ್ಲಿರತಕ್ಕಂತಹ ಸಿಬ್ಬಂದಿಯನ್ನು ಸಹ ಖಾಯಂ ಆಗಿ ಅಲ್ಲಿ ಇಡುವುದರ ಬದಲು ಮೊದಲಿಂದ ಮೇಲೆ ಅವರು ಜನರಿಗೆ ಪರಿಚಯವಾಗುವ ಪೂರ್ಣದಲ್ಲೆ ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿ. ಅವರು ಶಕ್ತಿ ಮೀರಿ ಕೆಲಸವನ್ನು ಮಾಡುವಂತೆ ಮಾಡಬೇಕು. ಆ ದಿಸೆಯಲ್ಲಿ ಯಾವ ರೀತಿ ಮಾಡಬೇಕೆಂಬುದನ್ನು ವಿಚಾರ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ, ಇದಕ್ಕಾಗಿ ತೆಗೆದಿಟ್ಟಿರತಕ್ಕಂಥ ಹಣ ಬಹಳ ಕಡಿಮೆ ಕನಿಷ್ಟ ಪಕ್ಷ ನಮ್ಮ ರಾಜ್ಯದಲ್ಲಿ ಆಗಬೇಕಾದ ನೀರಾವರಿ ವ್ಯವಸ್ಥೆ ಏನಿದೆ, ಈಗ 6ನೇ ಯೋಜನೆಯಲ್ಲಿ ನಾವು ಏನು 56 ಲಕ್ಷ ಎಕರೆಯನ್ನು ನೀರಾವರಿಯನ್ನಾಗಿ ಮಾಡುತ್ತೇವೆಂದು ಹೇಳಿದ್ದೇವೆ ಆದರೆ ಇನ್ನೂ ನಾವು ಆ ಗುರಿಯನ್ನು ಮುಟ್ಟಿಲ್ಲ. 80 ಲಕ್ಷ ನೀರಾವರಿ ಪ್ರದೇಶವನ್ನಾಗಿ ಮಾಡಬೇಕಾಗಿದೆ. ಈ ದೃಷ್ಟಿಯಲ್ಲಿ ಕನಿಷ್ಟ ಪಕ್ಷ ರಾಜ್ಯದಲ್ಲಿರುವ ಎಲ್ಲಾ ನೀರಾವರಿ ಯೋಜನೆಗಳು ಅಂದರೆ ಚಿಕ್ಕ ನೀರಾವರಿ, ಮಧ್ಯಮ ನೀರಾವರಿ ಹಾಗೂ ದೊಡ್ಡ ನೀರಾವರಿಗೆ ಸೇರಿದಂತೆ ಕನಿಷ್ಟ 350 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕು. ಕೃಷ್ಣಾ ಕಣಿವೆಯ ಎಲ್ಲ ಜಲಾಂಶವನ್ನು ಕೊನೆಯ ಪಕ್ಷ ಇನ್ನು 10 ವರ್ಷದೊಳಗಾಗಿ ಮುಗಿಸಬೇಕು. ಅಂದರೆ ಮೊನ್ನೆ ಬಂದಂತಹ ತೆಲುಗು ಗಂಗಾ ಯೋಜನೆಯಂಥಗಳಿಗೆ ಅವಕಾಶ ಇರಬಾರದು. ನಾವು ಮೇಲ್ಗಡೆ ಇದ್ದೇವೆ. ಇನ್ನುಳಿದ 10 ವರ್ಷಗಳಲ್ಲಿ ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡು. ಮುಂದೆ ಕೃಷ್ಣಾ ಕಣಿವೆಯ ಹೆಚ್ಚುವರಿ ನೀರನ್ನು ಹಂಚಿಕೆ ಮಾಡಿಕೊಳ್ಳುವುದಕ್ಕೆ, ಏನು ಪಂಚಾಯಿತಿ ಸೇರುತ್ತದೆ ಆವಾಗ ಹೆಚ್ಚುವರಿ ನೀರನ್ನು ಉಪಯೋಗ ಮಾಡಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ನಾವು ಇರಬೇಕು. ಅದೇ ರೀತಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ. ಅದನ್ನೂ ಕೂಡ ಜಾಸ್ತಿ ಮಾಡಬೇಕು. ವಿದ್ಯುತ್ ಉತ್ಪಾದನೆಗೆ ಹಣದ ತೊಂದರೆ ಬಾರದ ರೀತಿಯಲ್ಲಿ ವಿದ್ಯುಚ್ಛಕ್ತಿ ಯೋಜನೆಗಳನ್ನು ಇನ್ನೂ ಹೆಚ್ಚು ಮಾಡಬೇಕು. ಕೆಲವು ಟ್ಯಾಕ್ಸ್‌ನ್ನು ಜಾಸ್ತಿ ಮಾಡುವುದಕ್ಕೆ ಅವಕಾಶ ಇದೆ. ಅವುಗಳನ್ನು ಜಾಸ್ತಿ ಮಾಡಿ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬೇಕು. ನೀರಾವರಿ ಹಾಗೂ ವಿದ್ಯುಚ್ಛಕ್ತಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಮೊದಲು ಹೇಳುತ್ತಿದ್ದರು "I shall give Priority for irrigation and electricity" ಎಂಬು ಆ ಮಾತಿನ ಪ್ರಕಾರ ನಡೆಯಬೇಕಲ್ಲ. ಆ ದಿಸೆಯಲ್ಲಿ ಮಾಡಬೇಕು.

ಇನ್ನು ನಮ್ಮ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ರಾಮತಾಳ ಏತ ನೀರಾವರಿ ಯೋಜನೆಯನ್ನು ಬಜೆಟ್ಟಿನಲ್ಲಿ ಸೇರಿಸಿ ಒಂದು ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಇಟ್ಟಿದ್ದಾರೆ, 45 ಕೋಟಿ ರೂಪಾಯಿ

ಗಳ ಯೋಜನೆ ಇದು. ಶ್ರೀಮಾನ್ ದೇವೇಗೌಡರು ಆ ಭಾಗಕ್ಕೆ ಬಂದಿದ್ದಾಗ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೊಟ್ಟು ಅದನ್ನು ಬೇಗ ಮುಗಿಸುತ್ತೇವೆಂದು ಹೇಳಿದ್ದರು. ಅದರಂತೆ ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ನೀಡಿ ಆ ಯೋಜನೆ ಎರಡು ವರ್ಷಗಳಲ್ಲಿಯೇ ಮುಗಿಯುವಂತೆ ಸರ್ವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯಪಡಿಸುತ್ತಿದ್ದೇನೆ. ಇನ್ನು ಕೆಲವು ಸೇಲ್ಸ್ ಟ್ಯಾಕ್ಸ್, ಎಂಟ್ರಿ ಟ್ಯಾಕ್ಸ್, ಎಕ್ಸೈಜ್ ಡ್ಯೂಟಿ ವಸೂಲಿಮಾಡುವವರು ಸರಿಯಾಗಿ ಕಾರ್ಯ ನಿರ್ವಹಣೆ ಮಾಡಿದ್ದೇ ಆದರೆ, ಸರ್ಕಾರಕ್ಕೆ ಕನಿಷ್ಟ 200 ಕೋಟಿ ರೂ.ಗಳು ಆದಾಯ ಬರಬಹುದು. 73.86ಲಕ್ಷ ರೂಪಾಯಿಗಳ ಕೊರತೆ ಏನು ಇದೆ ಅದನ್ನು ಹೋಗಲಾಡಿಸಿ ಹೆಚ್ಚಿಗೆ ಉತ್ಪಾದನೆ ಮಾಡುವಂತಹ ಬಾಬುಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಖರ್ಚು ಮಾಡುವ ರೀತಿಯಲ್ಲಿ ವ್ಯವಸ್ಥೆಯಾಗಬೇಕು. ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಮಾತನಾಡುವಾಗ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡಬೇಕೆಂಬ ಅತ್ಯುತ್ತಮವಾದ ಸಲಹೆಯನ್ನು ಮಾಡಿದ್ದಾರೆ. ಬಹಳ ವರ್ಷಗಳಿಂದ ಇರುವಂತಹ ಬೇಡಿಕೆ ಇದು. ಹೈದರಾಬಾದ್‌ನಲ್ಲಿ ಯಾವ ರೀತಿಯಾಗಿ ಒಣ ಬೇಸಾಯದ ಅಭಿವೃದ್ಧಿಯ ಬಗ್ಗೆ ಸಂಶೋಧನೆ ನಡೆದಿದೆ, ಅದೇ ರೀತಿ ಅಥವಾ ಅದಕ್ಕಿಂತ ಚೆನ್ನಾಗಿ ಉತ್ತರ ಕರ್ನಾಟಕದ ಧಾರವಾಡದಲ್ಲಿ ಒಕ್ಕಲುತನದ ಕಾಲೇಜು ಈಗಾಗಲೇ ಇದ್ದು ಅಲ್ಲಿ ಒಕ್ಕಲುತನ ವಿಶ್ವವಿದ್ಯಾನಿಲಯವನ್ನು ಕೂಡಲೇ ಸ್ಥಾಪನೆ ಮಾಡಬೇಕು. ಈ ದಿಸೆಯಲ್ಲಿ ನಮ್ಮ ಒಕ್ಕಲುತನದ ಮಂತ್ರಿಗಳು ಆಸಕ್ತಿ ವಹಿಸಿ ಕೆಲಸ ಮಾಡುತ್ತಾರೆ ಎಂದು ಭಾವಿಸಿದ್ದೇನೆ ಮತ್ತು ಈ ಅಧಿವೇಶನದೊಳಗೆ ಬಹು ದಿನದ ನಮ್ಮ ಬೇಡಿಕೆಯನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಕಳೆದ ಬಜೆಟ್ ಅಧಿವೇಶನದಲ್ಲಿ, ಅಂದರೆ ಹೋದ ವರ್ಷ ಶ್ರೀಮಾನ್ ಬೊಮ್ಮಾಯಿಯವರು ಕರ್ನಾಟಕದಲ್ಲಿ ಸೇಲಂನಲ್ಲಿರುವ ರೀತಿಯಲ್ಲಿ ಹ್ಯಾಂಡಲೂಮ್ ಟ್ರೈನಿಂಗ್ ಇನ್ಸ್ಟಿಟ್ಯೂಟ್‌ನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ನಂತರ ಅವರು ನಮ್ಮ ಭಾಗಕ್ಕೆ ಪ್ರವಾಸ ಬಂದಿದ್ದಂತಹ ಸಂದರ್ಭದಲ್ಲಿ ಅದನ್ನು ಬಿಜಾಪುರ ಜಿಲ್ಲೆಯ, ಹುನಗುಂದ ತಾಲ್ಲೂಕಿನಲ್ಲಿರುವ ಇಲಕಲ್‌ನಲ್ಲೇ ಮಾಡುತ್ತೇವೆಂದು ಸನ್ಮಾನ್ಯ ಮಂತ್ರಿಗಳು ಬಹಿರಂಗವಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ [illegible] ಇದುವರೆವಿಗೂ ಕಾರ್ಯಗತ ಆಗಿಲ್ಲ. ಕೈಮಗ್ಗದಲ್ಲಿ ನೇಯುವ ದಿಸೆಯಲ್ಲಿ ಯಾವುದಾದರೂ ತರಬೇತಿ ಬೇಕವು ಅಂದರೆ ಅವರು ಹೊರನಾಡಿಗೆ ಹೋಗಬೇಕು. ಆ ಉದ್ದೇಶದಿಂದ ಆ ಒಂದು ತರಬೇತಿ ಸಂಸ್ಥೆಯನ್ನು ಕೂಡಲೇ ಇಲ್ಲಿಯೂ ಸ್ಥಾಪನೆ ಮಾಡಬೇಕು. ನೀರಾವರಿ ಹಾಗೂ ವಿದ್ಯುಚ್ಛಕ್ತಿಗೆ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕು. ಹಿಂದಿನಿಂದಲೂ ಯಾವುದೇ ಇಂಡಸ್ಟ್ರೀಸ್ ನಮ್ಮ ರಾಜ್ಯದಲ್ಲಿ ಬರಲಿಲ್ಲ ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವಂತಹ ಪರಿಸ್ಥಿತಿಯಲ್ಲಿ ನಾವು ಇಲ್ಲ. ಆ ಒಂದು ಪರಿಸ್ಥಿತಿ ನಿವಾರಣೆಯಾಗುವ ರೀತಿಯಲ್ಲಿ ಮತ್ತು ನಮ್ಮ ಬಜೆಟ್‌ನಲ್ಲಿ ಸೂಚಿಸಿದಂತೆ ಕಾರ್ಯ ಪ್ರವೃತ್ತವಾಗುವ ರೀತಿಯಲ್ಲಿ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರು ನನಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ, ಈ ವರ್ಷದ ಅಂದರೆ 1985-86ರ ಈ ಆಯವ್ಯಯ ಪತ್ರದ ಬಗ್ಗೆ ಅನೇಕ ರೀತಿಯಲ್ಲಿ ಮಾನ್ಯ ಸದಸ್ಯರು ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಇದನ್ನು ಬಹಳ ಒಳ್ಳೆಯ ಮುಂಗಡಪತ್ರ, ಮತ್ತು ಬಹಳ ಚೆನ್ನಾಗಿದೆ, ಎಲ್ಲರೂ ಒಪ್ಪಿಕೊಳ್ಳುವಂಥಾದ್ದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಕೆಲವರು ಏನೂ ಇಲ್ಲ ಇದರಲ್ಲಿ ಸಿಹಿಯೂ ಇಲ್ಲ. ಏನೂ ಇಲ್ಲ, ಇಂತಹ ಪ್ರಯೋಜನ ಇಲ್ಲದ, ಮತ್ತೆ ಜನಗಳ ಮೇಲೆ ಹೊರೆಯನ್ನು ಹೊರಿಸುವಂತಹದ್ದು ಎನ್ನುವ ಅಭಿಪ್ರಾಯವನ್ನು ಕೂಡ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಬಡ್ಜೆಟ್ಟಿನಲ್ಲಿ ಯುಗಾದಿ ಬಂದಾಗ ಬೇವು ಬೆಲ್ಲ ಇದ್ದ ಹಾಗೆ ಇದೆ. ಕಹಿಯೂ ಇದೆ, ಸಿಹಿಯೂ ಇದೆ. ಕಹಿ ಜಾಸ್ತಿನೋ, ಸಿಹಿ ಜಾಸ್ತಿನೋ, ಎನ್ನುವ ಪ್ರಶ್ನೆ ಬಂದಾಗ ಕಹಿ ಜಾಸ್ತಿ. ಸಿಹಿ ಸ್ವಲ್ಪ ಕಡಿಮೆ. ಇನ್ನೊಬ್ಬ ಶಾಸಕ ಮಿತ್ರರು ಮಾತನಾಡುವಾಗ ಇದನ್ನು ಬೇವು ಬೆಲ್ಲ ಅಂತ ಕರೆಯಬೇಡಿ, ಅದರ ಬದಲು ಕಾಕ್‌ಟೈಲ್ ಅಂತ ಕರೆಯಿರಿ ಅಂತ ಹೇಳಿದರು. ಕಾಕ್‌ಟೈಲ್ ಅಂದರೆ ಅದರಲ್ಲಿ ಎಲ್ಲವನ್ನೂ ಸೇರಿಸಿಬಿಡುತ್ತಾರೆ ಅಂತ ಕಾಣುತ್ತದೆ. ವಿಸ್ಕಿ, ಬ್ರಾಂದಿ, ಇತರೆ ಎಲ್ಲ ಮದ್ಯವನ್ನೂ ಬೆರೆಸುತ್ತಾರೆ ಅಂತ ಕಾಣುತ್ತದೆ. ಕಾಕ್‌ಟೈಲ್ ಆದರೆ ಕಿಕ್ ಜಾಸ್ತಿ ಕೊಡುತ್ತದೆ ಅಂತ ಹೇಳುತ್ತಾರೆ. ನನಗೂ ಗೊತ್ತಿಲ್ಲ. ಇದು ಕಿಕ್ ಕೊಡುವ ಬಡ್ಜೆಟ್ಟೂ ಕೂಡ ಅಲ್ಲ. ಅಂತಹ ಒಂದು ಕಿಕ್ ಕೂಡ ಯಾರ ಪರವಾಗಿ, ಯಾರ ವಿರುದ್ಧವಾಗಿ ಇದೆ ಎಂಬುದನ್ನು ನೋಡಬೇಕಾಗಿದೆ. ಇದು ಕೆಲವರೇ ಜನರ ಪರವಾಗಿ, ಸರ್ವರ ವಿರುದ್ಧವಾಗಿದೆ, ಅಂದರೆ ಶ್ರೀಮಂತರ ವಿರುದ್ಧವಾಗಿ, ಬಡವರ ಪರವಾಗಿ ಇರುವುದಾದರೂ ಅದಕ್ಕೆ ಸಾಕಷ್ಟು

ಬೆಲೆ ಇರುತ್ತದೆ. ಆ ತರಹದ ಪರಿಸ್ಥಿತಿಯ ಬಜೆಟ್ ಅಂತ ಹೇಳುವುದಕ್ಕೂ ಇಷ್ಟಪಡುವುದಿಲ್ಲ. ವಿಷಯ ವನ್ನು ಹೇಳಬೇಕಾದರೂ ಬೇವು ಬೆಲ್ಲದ ಬಜೆಟ್ ಅಂತ ಹೇಳಿದರೆ ತಪ್ಪಾಗುವುದಿಲ್ಲ ಅಂತ ನಾನು ತಿಳಿದು ಕೊಂಡಿದ್ದೇನೆ.

3-30 p.m.

ಮಾನ್ಯ ಅಧ್ಯಕ್ಷರೇ, ಈ ಆಯವ್ಯಯದ ಮುಖ್ಯವಾದ ಅಂಶಗಳನ್ನು ನಾವು ತಿಳಿದುಕೊಳ್ಳುದಕ್ಕಿಂತಲೂ ಮುಂಚೆ ಒಂದು ಸ್ಪಷ್ಟ ಏನೆಂದರೆ, ಯಾವುದೇ ಒಂದು ಆಯವ್ಯಯವನ್ನು ಯಾರೇ ಮಂಡಿಸಲಿ, ಅದಕ್ಕೆ ಸಂಪನ್ಮೂಲಗಳು ಸರಿಯಾಗಿ ಇದ್ದರೆ ಮಾತ್ರ ಹಾಗೂ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಸಹಾಯ ಸರಿಯಾಗಿ ಬಂದರೆ ಮಾತ್ರ ಆ ರಾಜ್ಯ ಪ್ರಗತಿಯಾಗುತ್ತದೆ. ಆ ರೀತಿ ಒಂದು ರಾಜ್ಯ ಕೇಂದ್ರದಿಂದ ಎಷ್ಟು ನಿರೀಕ್ಷೆ ಮಾಡುತ್ತದೆಯೋ ಅಷ್ಟು ಬಂದರೆ ಖಂಡಿತವಾಗಿಯೂ ಎಲ್ಲಾ ಯೋಜನೆಗಳೂ ಕಾರ್ಯಗತವಾಗುತ್ತವೆ. 6 ಮತ್ತು 7ನೇ ಯೋಜನೆಯಲ್ಲಿ ನೀರಾವರಿ, ವಿದ್ಯುತ್ ಯೋಜನೆಗಳನ್ನೆಲ್ಲ ಕಾರ್ಯಗತ ಮಾಡಬಹುದಾಗಿದೆ. ಎಲ್ಲಿಯವರೆಗೆ ಈ ಒಂದು ಧೋರಣೆ ಇಲ್ಲವೋ, ಮತ್ತು ರಾಜ್ಯ ಸರ್ಕಾರಗಳಿಗೆ ಎಷ್ಟು ಹಣವನ್ನು ಕೊಡಬೇಕೋ ಅದನ್ನು ಕೊಡುವುದಿಲ್ಲವೋ ಅಥವಾ ಕೊಡುವುದಕ್ಕೆ ಅಂಜುತ್ತಿರುತ್ತಾರೋ ಅಲ್ಲಿಯವರೆಗೆ ರಾಜ್ಯ ಸರ್ಕಾರಗಳು ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದಮೇಲೆ ಈ ರೀತಿ ಧೋರಣೆಯನ್ನು ಕೇಂದ್ರ ತಳೆದಿದೆ ಎಂದು ಹೇಳುತ್ತಾ ಇಲ್ಲ. ನನಗೆ ತಿಳಿದಮಟ್ಟಿಗೆ ಮೊದಲಿನಿಂದಲೂ ಕರ್ನಾಟಕ ರಾಜ್ಯಕ್ಕೆ ಕೇಂದ್ರದಿಂದ ತೀವ್ರವಾದ ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಕೇಂದ್ರ ಎಷ್ಟು ಸಹಾಯ ಮಾಡಬೇಕೋ ಅಷ್ಟು ಮಾಡಿಲ್ಲವಾದ್ದರಿಂದ ನಮ್ಮ ರಾಜ್ಯ ಬಹಳ ಹಿಂದೆ ಬಿದ್ದಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಉದಾಹರಣೆಗೆ ಹೇಳಬೇಕೆಂದರೆ, 7ನೇ ಪಂಚವಾರ್ಷಿಕ ಯೋಜನೆಯಲ್ಲಿ ತಲಾ ವೆಚ್ಚ ಎಷ್ಟು ಆಗುತ್ತದೆ ಎನ್ನುವುದು, ಅಖಿಲ ಭಾರತ ಮಟ್ಟದಲ್ಲಿ ತಲಾ ವೆಚ್ಚ 1,500 ರೂಪಾಯಿಗಳು ಆಗುತ್ತವೆ. ಕೇಂದ್ರ ಸರ್ಕಾರದ 7ನೇ ಪಂಚವಾರ್ಷಿಕ ಯೋಜನೆಯ ತಲಾ ಖರ್ಚು 1,500 ರೂಪಾಯಿಗಳು. ಇದರಲ್ಲಿ ರಾಜ್ಯ ಸರ್ಕಾರಗಳದ್ದು ಹೇಳುವುದಾದರೆ, ಬಿಹಾರದ ತಲಾ ಖರ್ಚು 731 ರೂ. ಖರ್ಚು ಆದರೆ ಕರ್ನಾಟಕ ರಾಜ್ಯದ್ದು 720 ರೂಪಾಯಿಗಳು. ಈ ಲೆಕ್ಕಾಚಾರವನ್ನು ಆರ್ಥಿಕ ತಜ್ಞರು ಕೊಟ್ಟಿದ್ದಾರೆ. ಇದರಿಂದ ಏನು ಕಂಡುಬರುತ್ತದೆ ? ನಮಗೆ ಎಷ್ಟು ಸಿಗಬೇಕೋ ಅದು ಸಿಕ್ಕುತ್ತಾ ಇಲ್ಲ ಎನ್ನುವುದು ಇಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಯೋಜನೆಗಳಿಗೂ ಕೂಡಾ ಎಷ್ಟು ಖರ್ಚು ಮಾಡಬೇಕೋ ಆ ಹಣವನ್ನು ಕೇಂದ್ರ ಸರ್ಕಾರ ಒದಗಿಸುತ್ತಾ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ಎರಡನೆಯದಾಗಿ ನಮ್ಮ ರಾಜ್ಯದಲ್ಲಿ ಖನಿಜ ಸಂಪತ್ತು ಬೇಕಾದಷ್ಟು ಇದೆ. ನಮ್ಮಲ್ಲಿ ತಾಮ್ರ, ಕಲ್ಲಿದ್ದಲು, ಮ್ಯಾಂಗನೀಸ್, ಜಿಂಕ್, ಚಿನ್ನ ಹಾಗೂ ಸ್ವಲ್ಪ ಭಾಗ ಬೆಳ್ಳಿ ಸಿಗುತ್ತದೆ. ಇಲ್ಲಿನ ಖನಿಜ ಸಂಪತ್ತನ್ನು ಅದರ ರೂಪದಲ್ಲಿ ತೆಗೆದು ರಫ್ತು ಮಾಡಲಾಗುತ್ತಿದೆ. ಈ ಬಗ್ಗೆ ಕೇಂದ್ರ ಕೂಡಾ ರಾಯಲ್ಟಿಯನ್ನು ಕೊಡಬೇಕಾಗುತ್ತದೆ. ಕೆಲವು ಮಿನರಲ್ಸ್ ಮೇಲೆ ಇದು ಇದೆ. ಈ ಬಗ್ಗೆ ರಾಯಲ್ಟಿ ಕೇಂದ್ರ ಸರ್ಕಾರದಿಂದ ಬರಬೇಕು ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ನಮಗೆ ಹೇಳಬೇಕು. ಕೇಂದ್ರ ಎಷ್ಟು ರಾಯಲ್ಟಿಯನ್ನು ಕೊಡಬೇಕೋ ಅದನ್ನು ಕೊಟ್ಟಿಲ್ಲವೆಂಬ ಆಪಾದನೆಗಳನ್ನು ಸಹ ಅನೇಕ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ಮಾಡಿದ್ದಾರೆ. ಈ ಬಗ್ಗೆ ನಮ್ಮ ರಾಜ್ಯದವರು ಏನು ಮಾಡುತ್ತಿದ್ದಾರೆ ? ನಮಗೆ ತಿಳಿದ ಮಟ್ಟಿಗೆ ನಮ್ಮ ರಾಜ್ಯಕ್ಕೆ ಎಷ್ಟು ಕೋಟಿ ರೂಪಾಯಿ ರಾಯಲ್ಟಿ ಬರಬೇಕು ಎಂಬುದು ನಮಗೆ ತಿಳಿದಿಲ್ಲ, ಆದರೆ ಬಿಹಾರಕ್ಕೆ 20 ಕೋಟಿ ರೂ,ಗಳು ಬರಬೇಕು ಎಂದು ಅವರು ಹೇಳುತ್ತಿದ್ದಾರೆ. ಬಿಹಾರದ ಮುಖ್ಯಮಂತ್ರಿಗಳು ಆ ರೀತಿ ಹೇಳಿದ್ದಾರೆ. ನಮಗೆ ಕೇಂದ್ರದಿಂದ ಮಿನರಲ್ಸ್ ಮೇಲೆ ಎಷ್ಟು ರಾಯಲ್ಟಿ ಬರಬೇಕೋ ಅಷ್ಟು ಬಂದಿಲ್ಲ ಎಂದು ಹೇಳುತ್ತೇನೆ. ಇನ್ನು ಮೂರನೆಯದಾಗಿ, ಬಹಳ ಗಹನವಾದ ವಿಷಯ ಎಂದರೆ, ಅನೇಕ ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಸ್ಥಾಪನೆಮಾಡಿದ್ದಾರೆ. ನಮ್ಮ ರಾಜ್ಯದಲ್ಲೂ ಇದೇ ರೀತಿಯ ಎಚ್ಎಂಟಿ, ಎಚ್ಎಎಲ್, ಬಿಇಎಲ್. ಮುಂತಾದ ಕಾರ್ಖಾನೆಗಳು ಇವೆ. ಅದೇರೀತಿ ಬೇರೆ ರಾಜ್ಯಗಳಲ್ಲೂ ಸಹ ಬಂದಿವೆ. ಅದು ಒಳ್ಳೆಯದು. ಸಾರ್ವಜನಿಕ ಕ್ಷೇತ್ರದಲ್ಲಿ ಬೃಹತ್ ಕೈಗಾರಿಕೆಗಳು ಬರಬೇಕು. ನಮ್ಮ ದೇಶದ ಆರ್ಥಿಕ ಭದ್ರತೆಗೆ, ಸ್ವಾವಲಂಬನೆಗೆ, ದೇಶ ಮುಂದುವರಿಯುವುದಕ್ಕೆ ಬೃಹತ್ ಕೈಗಾರಿಕೆಗಳು ಬರಬೇಕು, ಇದನ್ನು ನಮ್ಮ ಜನತಾ ಪಕ್ಷದ ಮುಖಂಡರು ಒಪ್ಪಿಕೊಳ್ಳುತ್ತಾರೋ, ಇಲ್ಲವೋ ಗೊತ್ತಿಲ್ಲ. ಈ ಬಗ್ಗೆ ಸಂಶಯ ನನಗೆ ಇದೆ. ಅವರ ಕೈಗಾರಿಕಾ ನೀತಿಯ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಏಕೆ ಹೇಳುತ್ತಿದ್ದೇನೆ ಎಂದರೆ, ಬೃಹತ್ ಕೈಗಾರಿಕೆಗಳು ಬೇಕು ಎನ್ನುವುದು ಹೆಚ್ಚು ಉದ್ಯೋಗ ಸಿಗಲಿ ಎನ್ನುವ ದೃಷ್ಟಿಯಿಂದ ಇದರಿಂದ ಉದ್ಯೋಗ ಅವಕಾಶ ಜಾಸ್ತಿಯಾಗುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಒಟ್ಟಾರೆ ಎಷ್ಟು ಇದೆಯೋ ಆ ಅವಕಾಶವನ್ನು ಎಷ್ಟು ದೂರ ಒಂದೊಂದು ರಾಜ್ಯಕ್ಕೆ ಕಲ್ಪಿಸಿಕೊಟ್ಟಿದ್ದಾರೆ ಎನ್ನುವುದು

ಮುಖ್ಯ ಅಂಶ. ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಚರ್ಚೆಮಾಡುವಾಗ ಪ್ಲಾನಿಂಗ್ ಕಮಿಷನ್ ಈ ಬಗ್ಗೆ ಚರ್ಚೆಮಾಡುತ್ತದೆ. ನಿರುದ್ಯೋಗ ಎಲ್ಲಿ ಹೆಚ್ಚು ಇದೆ ಎಂಬುದನ್ನು ಅವರು ಕಂಡುಹಿಡಿದು ಅಲ್ಲಿಗೆ ಯೋಜನೆಗಳನ್ನು ಹಾಕುತ್ತಾರೆ. ಇದರಲ್ಲೂ ಕೂಡಾ ನಮ್ಮ ಕರ್ನಾಟಕಕ್ಕೆ ಮತ್ತೆ ಪುನಃ ಅನ್ಯಾಯವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಈಗ ನಮ್ಮಲ್ಲಿ ಬಂದಿರುವ ಕೈಗಾರಿಕೆಗಳೂ ಹಿಂದೆ ಬಂದಂತಹವುಗಳು. ಹಾಗೂ ಐಟಿಐ. ಹಾಗೂ ಎಚ್‌ಎಎಲ್. ಮುಂತಾದ ಕೈಗಾರಿಕೆಗಳು ಮುಂದೆ ಬೆಳೆಯುವುದಕ್ಕೆ ಅವಕಾಶವಿಲ್ಲ. ಹಾಗೂ ಇವನ್ನು ಕ ರ್ನಾ ಟ ಕ ರಾಜ್ಯದಲ್ಲಿ ಬೆಳೆಸುವುದಕ್ಕೆ ಅವಕಾಶವಿಲ್ಲ. ಇವೆಲ್ಲವನ್ನೂ ಬೇರೆ ರಾ ಜ್ಯ ಗ ಳಿ ಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಐಟಿಐ.ನ ಒಂದು ಯೂನಿಟ್‌ನ್ನು ಗೋಂಡಾದಲ್ಲಿ ಹಾಕುತ್ತಿದ್ದಾರೆ. ಬಿಇಎಲ್.ನ ಒಂದು ಪ್ರಾಜೆಕ್ಟ್‌ನ್ನು ಗುಲ್ಬರ್ಗಾದಿಂದ ಬೇರೆ ಎಲ್ಲಿಗೋ ತೆಗೆದುಕೊಂಡು ಹೋಗಿದ್ದಾರೆ. ಕೇಂದ್ರದ ಕೈಗಾರಿಕೆಗಳು ಹೀಗೆ ಹೋದರೆ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗಾದರೂ ಹೇಗೆ ತೊಡೆದುಹಾಕಲು ಸಾಧ್ಯವಾಗುತ್ತದೆ? ಹೆಚ್ಚು ಕೈಗಾರಿಕೆಗಳನ್ನು ನಮ್ಮ ರಾಜ್ಯಕ್ಕೆ ಕೊಟ್ಟು ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡುವ ಪ್ರವೃತ್ತಿಯನ್ನು ಕೇಂದ್ರ ಸರ್ಕಾರ ನಮ್ಮ ರಾಜ್ಯದ ಬಗ್ಗೆ ತೋರಿಸಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಇವತ್ತು ಏನಾಗಿದೆ ಎಂದರೆ, ಒಟ್ಟಾರೆ ಸುಮಾರು 30 ಲಕ್ಷ ಜನರು ಇವತ್ತು ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಈಗ ಕೇವಲ 1.25 ಲಕ್ಷ ಜನ ಮಾತ್ರ ಇದ್ದಾರೆ. ಹಿಂದೆ 15 ಅಥವಾ 20 ಲಕ್ಷ ಜನರು ಇದ್ದಾಗ ನಮ್ಮ ರಾಜ್ಯದ ಸಂಖ್ಯೆ 1.2 ಲಕ್ಷವೋ ಏನೋ ಇತ್ತು. ಈಗ ಕೆಲವು ರಾಜ್ಯಗಳಲ್ಲಿನ ಶೇರ್ ಶೇಕಡಾ 7ರಿಂದ 8 ಪರ್ಸೆಂಟ್ ಇದ್ದರೆ, ನಮ್ಮ ರಾಜ್ಯದ್ದು ಕೇವಲ 3 ರಿಂದ 4 ಪರ್ಸೆಂಟ್ ಮಾತ್ರ. ಆದುದರಿಂದ ಈ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳ ಉದ್ಯೋಗಾವಕಾಶ ಎಷ್ಟರಮಟ್ಟಿಗೆ ನಮ್ಮ ರಾಜ್ಯಕ್ಕೆ ಸಿಗಬೇಕೋ ಅದು ಸಿಕ್ಕಿಲ್ಲವೆಂದು ನಿಜವಾಗಿಯೂ ವ್ಯಥೆಪಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಈಗ ಹೆಚ್ಚು ನಿರುದ್ಯೋಗ ಸಮಸ್ಯೆ ಇದೆ. ಮಾನ್ಯ ಕಡಪಟ್ಟಿಯವರು ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ ಹಾಗೂ ಮಂಗಳೂರು ತೈಲಾಗಾರದ ಬಗ್ಗೆ ಹೇಳಿದರು. ಶ್ರೀಮತಿ ಇಂದಿರಾಗಾಂಧಿಯವರು 13 ವರ್ಷಗಳ ಹಿಂದೆ ವಿಜಯನಗರ ಉಕ್ಕು ಕಾರ್ಖಾನೆಗೆ ಅಡಿಗಲ್ಲು ಹಾಕಿದರು. ಹಾಗೂ ಆ ಬಗ್ಗೆ 3600 ಎಕರೆಗಳನ್ನು ಬಿಟ್ಟುಕೊಡಲಾಗಿದೆ. ಅಂತಹ ಉತ್ಕೃಷ್ಟ ಅದುರು ಪ್ರಪಂಚದಲ್ಲಿಯೇ ಇಲ್ಲ ವೆನ್ನುವುದನ್ನು ತಜ್ಞರು ಒಪ್ಪಿಕೊಳ್ಳುತ್ತಾರೆ ಹಾಗೂ ಬೇರೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಇನ್ನೂ ಕೂಡ ಉಕ್ಕು ಕಾರ್ಖಾನೆ ನಮಗೆ ಬರಲಿಲ್ಲ. ಈ ಬಗ್ಗೆ ನಾವು ಕೇಳಿದಾಗ ಇದಕ್ಕೆ ನಾವು ಹಣವನ್ನು ಒದಗಿಸಿದ್ದೇವೆಂದು ಕೇಂದ್ರದವರು ಹೇಳುತ್ತಾರೆ. ಆದರೆ ಮೂರು ಸಾವಿರದ ಐದುನೂರು ಕೋಟಿ ರೂ ಖರ್ಚಾಗುವ ಈ ಕಾರ್ಖಾನೆಗೆ ಇವರು ಕೇವಲ 4 ಕೋಟಿ ರೂಪಾಯಿ ಒದಗಿಸಿದರೆ ಇದು ಹೇಗೆ ಕಾರ್ಯಗತವಾಗುವುದಕ್ಕೆ ಸಾಧ್ಯವಾಗುತ್ತದೆ? ಇದು ಸಾಧ್ಯವಾಗುವುದಿಲ್ಲ. ಇದು ಬರೀ ಕಣ್ಣು ಒರೆಸುವ ತಂತ್ರವೇ ಹೊರತು ಕರ್ನಾಟಕಕ್ಕೆ ಅನುಕೂಲ ಮಾಡುವ ವಿಷಯ ಅಲ್ಲ. ಇನ್ನು ಮಂಗಳೂರು ತೈಲಾಗಾರದ ಬಗ್ಗೆ ಹೇಳುವುದಾದರೆ, ಇದನ್ನು ರಾಜಸ್ಥಾನದಲ್ಲಿ ತೆರೆಯಬೇಕೆಂಬ ಯೋಜನೆಗಳು ಆಗುತ್ತವೆ. ಇದರ ಅರ್ಥ ಏನು ? ಇಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಇದೆ ಎಂದು ನಾವು ಇದನ್ನು ಇಲ್ಲಿ ಹೀಗೆ ಹೇಳುವುದಕ್ಕೆ ಬರುತ್ತದೆಯೇ ? ಹೀಗೆ ನಾವು ಹೇಳಿದರೆ ಮಾನ್ಯ ಮಿತ್ರರು ಕೋಪಮಾಡಿಕೊಳ್ಳುತ್ತಾರೆ. ಆದರೆ ನಿಜಾಂಶ ಏನು ? ಆದರೆ ಇವರೇ ಆಳುತ್ತ ಇದ್ದಾಗಲೂ ಕೂಡಾ ಉಕ್ಕಿನ ಕಾರ್ಖಾನೆ ನಮಗೆ ಬರಲಿಲ್ಲ. ಜನತಾ ಬಂದಮೇಲಂತೂ ಇದು ಮೂಲೆಗುಂಪಾಗಿದೆ.

ಮಾನ್ಯ ಮುಖ್ಯಮಂತ್ರಿಗಳು ಬಹಳ ಧೈರ್ಯವಾಗಿ ಹೇಳಿದರು. ಏನೆಂದರೆ, ನಾವು ಧೈರ್ಯವಾಗಿ ಹೋರಾಟ ಮಾಡುತ್ತೇವೆ ಎಂದು. ವಿದ್ಯಾರ್ಥಿ ಯುವಕರು ಎರಡನೇಬಾರಿ ಬಳ್ಳಾರಿಯಿಂದ ಬೆಂಗಳೂರಿಗೆ ಜಾಥಾ ಬಂದರು. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಏನು ಹೇಳಿದರು ಎಂದರೆ, ನಾವು ಇದನ್ನು ಬಿಟ್ಟುಕೊಡುವುದಿಲ್ಲ, ನಮ್ಮ ಪ್ರಾಣವನ್ನು ಬೇಕಾದರೂ ಬಿಡುತ್ತೇನೆ ಎಂಬ ವೀರಾವೇಶದ ಮಾತನ್ನು ಹೇಳಿದರು. ಇದರ ಜೊತೆಗೆ ಇನ್ನೊಂದು ಮಾತನ್ನು ಏನು ಹೇಳಿದರು ಎಂದರೆ ಈ ಸದನದ ಸದಸ್ಯರ ನಿಯೋಗವನ್ನೂ ತೆಗೆದುಕೊಂಡು ದೆಹಲಿಗೆ ಹೋಗುತ್ತೇನೆ ಎಂದು. ಆದರೆ ಇದನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮಾಡಲಿಲ್ಲ, ಕೇವಲ ತೋರಿಕೆಗಾಗಿ ಈ ಮಾತನ್ನು ಹೇಳಿದರೇ ಹೊರತು ಕಾರ್ಯತಃ ಮಾಡಲಿಲ್ಲ. ವಿಜಯನಗರ ಉಕ್ಕಿನ ಕಾರ್ಖಾನೆ ಅಂದರೆ 30 ಸಾವಿರ ಜನರಿಗೆ ಕೆಲಸ ಸಿಕ್ಕುತ್ತದೆ. ಆದರೆ ಅದನ್ನೂ ಕೂಡ ಮಾಡುತ್ತಿಲ್ಲವಲ್ಲಾ ಎಂದು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಅಥವಾ ಜನತಾ ಸರ್ಕಾರದ ಬಗ್ಗೆ ನನಗೆ ಇರತಕ್ಕ ಆಕ್ಷೇಪಣೆ. ಇದರ ಬಗ್ಗೆ ಏನು ಉತ್ತರ ಕೊಡುತ್ತಾರೋ ನೋಡೋಣ.

ಇನ್ನು ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಏನು ಎಂಬ ಬಗ್ಗೆ ಒಂದು ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಓವರ್‌ಡ್ರಾಫ್ಟ್ ತಕರಾರು ಇದೆ. ಆದರೆ ನಾನು ಅದರ

ಬಗ್ಗೆ ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ವಿಚಾರದಲ್ಲಿ ಅನೇಕಸಾರಿ ಬಹಳಷ್ಟು ಚರ್ಚೆಯಾಗಿದೆ. ಈ ಓವರ್‌ಡ್ರಾಫ್ಟ್‌ನ್ನು ಸಾಲ ಎಂದು ತಿಳಿದುಕೊಂಡು 15 ವರ್ಷಗಳ ಅವಧಿಯಲ್ಲಿ ತೀರಿಸುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಕೇಳಿದ್ದಾರೆ. ಇದನ್ನು ಮಾನ್ಯ ಪ್ರಧಾನ ಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದಾರೆ. ಈ ರೀತಿ ಮಾಡುವುದಾದರೆ ಇದನ್ನು ನಾವು ಮೆಚ್ಚಬೇಕಾಗಿದೆ. ಇನ್ನುಳಿದ ವಿಚಾರದಲ್ಲಿ ನಮ್ಮ ಕರ್ನಾಟಕ ಸರ್ಕಾರಕ್ಕೆ ಅನ್ಯಾಯವಾಗಿದೆಯೆಂದು ನಾನು ಹೇಳಬೇಕಾಗಿದೆ. ಇಲ್ಲಿ ಬಜೆಟ್ ಭಾಷಣದಲ್ಲಿ ಹೇಳುವುದು ಒಂದಾದರೆ, ಆಡಳಿತದಲ್ಲಿ ಮಾಡುವುದು ಇನ್ನೊಂದು ಆಗಿದೆ.

ಇನ್ನು ರಾಜ್ಯದ ಪರಿಸ್ಥಿತಿ ವಿಚಾರದಲ್ಲಿ ಹೇಳುವುದಾದರೆ ಈ ಆಯುವ್ಯಯ ಭಾಷಣವನ್ನು ಓದಿದರೆ ನಮಗೆ ಏನೂ ಗೊತ್ತಾಗುವುದಿಲ್ಲ. ಪರಿಸ್ಥಿತಿ ಬಹಳ ಚೆನ್ನಾಗಿದೆ, ಸ್ವಲ್ಪ ಬರಗಾಲ ಪರಿಸ್ಥಿತಿ ಬಂದಿದೆ, ಅಥವಾ ಅಭಾವ ಪರಿಸ್ಥಿತಿ ಬಂದಿದೆ, ಇದನ್ನು ಬಿಟ್ಟರೆ ಉಳಿದ ಎಲ್ಲ ವಿಷಯಗಳಲ್ಲೂ ಚೆನ್ನಾಗಿದೆ ; ಯಾವುದೇ ರೀತಿಯ ಸಂಶಯವನ್ನೂ ಪಡಬೇಕಾಗಿಲ್ಲ ಎನ್ನುವ ರೀತಿಯಲ್ಲಿ ಈ ಭಾಷಣ ಇದೆ.

ಇನ್ನು ''ಥಿಂಕ್ ಟ್ಯಾಂಕ್'' ಎಂದು ಮಾಡಿದ್ದೀರಿ. ಈ ಥಿಂಕ್ ಟ್ಯಾಂಕ್‌ನವರು ಇದನ್ನು ಯೋಚನೆಮಾಡಿ ಇಂಥ ಒಂದು ಉದ್ಗ್ರಂಥವನ್ನೇ ಬರೆದಿಟ್ಟಿದ್ದಾರೆ. ಅವರು ಏನು ಹೇಳುತ್ತಿದ್ದಾರೆ ಎಂದರೆ Karnataka Economy is Stagnated. ಎಂದು ಮಾರ್ಚಿ 1983ರಲ್ಲೇ ಇವರು ಬರೆದಿಟ್ಟಿದ್ದಾರೆ. ಅಲ್ಲಿಂದೀಚೆಗೆ ಇವರ ಪೇಪರ್ಸ್ ನಮಗೆ ಬಂದಿಲ್ಲ. ಇದಾದಮೇಲೆ ನಮ್ಮ ಕರ್ನಾಟಕದ ಪರಿಸ್ಥಿತಿ ಬಹಳ ಸ್ಥಗಿತವಾಗಿದೆ. ಹಿಂದಕ್ಕೂ ಹೋಗಿಲ್ಲ, ಮುಂದಕ್ಕೂ ಹೋಗಿಲ್ಲ. 1983-84 ಹಾಗೂ 1984-85ರ ಈ ಎರಡು ವರ್ಷಗಳ ಅವಧಿಯಲ್ಲಿ ತಾವು ಏನು ಸಾಧನೆ ಮಾಡಿದ್ದೀರೆಂದು ನಾವು ಸರ್ಕಾರದವರನ್ನು ಕೇಳಬೇಕಾಗುತ್ತದೆ. ನಾವು ಕಾಂಗ್ರೆಸ್‌ನವರಿಗಿಂತ, ಗುಂಡೂರಾಯರಿಗಿಂತ ಉತ್ತಮ ಕೆಲಸವನ್ನು ಮಾಡಿದ್ದೇವೆ, ಲೋಕಾಯುಕ್ತವನ್ನು ಮಾಡಿದ್ದೇವ ಜಿಲ್ಲಾ ಪರಿಷತ್ತು ಮಾಡಿದ್ದೇವ, ಮಹಿಳೆಯರಿಗೆ ಮತದಾನದ ಹಕ್ಕನ್ನು ಕೊಟ್ಟಿದ್ದೇವೆ ಎಂದು ಇನ್ನೂ ಮುಂತಾದುವನ್ನು ಹೇಳುತ್ತಾರೆ. ಇವೆಲ್ಲಾ ಹಳೆಯದಾಯಿತು. ಈಗ ನಿಮ್ಮ ದೃಷ್ಟಿಕೋನ ಹೊಸದಾಗಿ ಏನಾಗಿದೆ ಕಳೆದ 2 ವರ್ಷದಿಂದ ನೀವು ಏನು ಮಾಡಿದ್ದೀರಿ ? ನೀವು ಘೋಷಣೆ ಮಾಡಿದ್ದರಲ್ಲಿ ಯಾವುದನ್ನು ಕಾರ್ಯಗತ ಮಾಡಿದ್ದೀರಿ ಎಂಬುದನ್ನು ಕೇಳಬೇಕಾಗಿದೆ,

ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ಎರಡುಮೂರು ಅಂಶಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆದರೆ ನಾನು ಹೇಳುವುದನ್ನು ಕೇಳುವುದಕ್ಕೆ ಯಾರಿಗೂ ಮನಸ್ಸಿಲ್ಲವೆಂದು ಕಾಣುತ್ತದೆ. ಕೇವಲ ಮಾನ್ಯ ಲಕ್ಷ್ಮೀಸಾಗರ್‌ರವರು ಮಾತ್ರ ಕೇಳಿಸಿಕೊಳ್ಳುತ್ತಿದ್ದಾರೆ, ಇನ್ನುಳಿದ ಮಾನ್ಯ ರಘುಪತಿಯವರಾಗಲಿ, ಜೀವರಾಜ ಆಳ್ವಾ ಆಗಲಿ, ಸಿಂಧ್ಯಾರವರಾಗಲಿ ಇದನ್ನು ಗಮನಿಸುತ್ತಿಲ್ಲ. ಇವತ್ತು ನನ್ನ ಪ್ರಶ್ನೆ ಏನೆಂದರೆ, ನಮ್ಮ ರಾಜ್ಯದ ಪರಿಸ್ಥಿತಿ ಏನಾಗಿದೆ ಎಂಬುದು. ಇಲ್ಲಿ ಆರ್ಥಿಕ ತಜ್ಞರು ಏನು ಹೇಳಿದ್ದಾರೆ ಇವರ ಪೈಕಿ ಕೆಲವು ಅಂಶಗಳಾದರೂ ಸರಿಯಾಗಿದ್ದರೆ ನಮ್ಮ ರಾಜ್ಯದ ಪರಿಸ್ಥಿತಿ ಸರಿಯಾಗಿದೆ ಎಂದು ಅರ್ಥಮಾಡಿಕೊಳ್ಳಬಹುದು, ಇಲ್ಲದೇಹೋದರೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಕೆಟ್ಟುಹೋಗಿದೆ ಸ್ಥಗಿತವಾಗಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇದರ ಮೊದಲನೇ ಲಕ್ಷಣ ಎಂದರೆ, ಬೆಲೆಗಳು. ನಮ್ಮ ರಾಜ್ಯದಲ್ಲಿ ಬೆಲೆ ಏರಿಕೆಯಾಗುತ್ತಿದೆಯೇ ಎಂಬುದನ್ನು ನಾವು ನೋಡಬೇಕು. ದೇಶಧಲ್ಲಿ ಬೆಲೆ ಏರಿಕೆಯನ್ನು ತಡೆಗಟ್ಟುವ ಜವಾಬ್ದಾರಿ ಕೇಂದ್ರ ಸರ್ಕಾರ ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಸೇರಿದ್ದು. ಬೆಲೆಗಳನ್ನು ಹತೋಟಿ ಮಾಡದಿದ್ದರೆ ನೀವು ಏನೇ ಯೋಜನೆಗಳನ್ನು ಹಾಕಿಕೊಂಡರೂ ಅದನ್ನು ಯಶಸ್ವಿಯಾಗಿ ಕಾರ್ಯಗತಮಾಡುವುದಕ್ಕಾಗುವುದಿಲ್ಲ. ಜನರ ಕಷ್ಟಕಾರ್ಪಣ್ಯಗಳನ್ನು ನೀವು ಬಗೆಹರಿಸುವುದಕ್ಕಾಗುವುದಿಲ್ಲ, ಹಣದುಬ್ಬರವನ್ನು ತಡೆಹಿಡಿಯುವುದಕ್ಕಾಗುವುದಿಲ್ಲ. ತಮ್ಮ ಬಜೆಟ್ ಭಾಷಣದಲ್ಲಿ ಏನು ಹೇಳುತ್ತೀರಿ, ರಾಜ್ಯದಲ್ಲ ಬೆಲೆ ಏರಿಕೆ ಅಷ್ಟೇನೂ ಆಗಿಲ್ಲ ಎಂದು. ನಾನಾದರೂ ಕೇಳುತ್ತೇನೆ, ಈ ವಿಚಾರವನ್ನು ತಮಗೆ ಯಾರು ಹೇಳಿದರು ? ಇದನ್ನು ಯಾರು ಹೇಳಿದರೋ ನನಗಂತೂ ಗೊತ್ತಿಲ್ಲ. ಯಾರು ಈ ಅಂಕಿಅಂಶಗಳನ್ನು ಕೊಟ್ಟಿದ್ದಾರೆ ಆ ಪ್ರಕಾರವೇ ಅವರೇ ಹೇಳಿರುವುದು ತಪ್ಪಾಗುತ್ತದೆ. ಬೆಲೆಗಳ ವಿಚಾರದಲ್ಲಿ ಪ್ರಸ್ತಾಪಮಾಡುತ್ತಾ ಪುಟ 24ರಲ್ಲಿ ತಾವು ಒಂದು ಟೇಬಲ್‌ನ್ನು ಕೊಟ್ಟಿದ್ದೀರಿ. ನಾವು ಎಕನಾಮಿಕ್ ಸರ್ವೆ ಮಾಡಿದ್ದೇವೆಂದು ತಾವೇ ಇಲ್ಲಿ ಹೇಳಿಕೊಂಡಿದ್ದೀರಿ. ಅದು ಏನೆಂದರೆ, While sale price index of Agricultural commodities of Karnataka :-ಮಾರ್ಚಿ 1983ರಲ್ಲಿ 627. ಮಾರ್ಚಿ 1984ರಲ್ಲಿ 733, ಅದೇ ಮಾರ್ಚಿ 1985ರಲ್ಲಿ 824 ಎಂದು ಇದೆ. 1983-84ರಲ್ಲಿ 16.91 ಪರ್ಸೆಂಟ್ ಜಾಸ್ತಿಯಾಯಿತು. 1984-85ರಲ್ಲಿ 12.41 ಪರ್ಸೆಂಟ್ ಜಾಸ್ತಿಯಾಗಿದೆ. ಒಟ್ಟು 16.91+12.41 ಪರ್ಸೆಂಟ್ ಜಾಸ್ತಿ ಆದಂತಾಯಿತು. ಕಳೆದ 3 ವರ್ಷದಲ್ಲಿ ಕಾಂಗ್ರೆಸ್ ಪಕ್ಷದವರು ಆಳುತ್ತಿದ್ದಾಗಲೂ ಕೂಡ ಬೆಲೆಗಳು ಜಾಸ್ತಿ

ಯಾಗಿವೆ. ಹಿಂದಿನ ಸರ್ಕಾರದಲ್ಲೂ ಜಾಸ್ತಿಯಾಗಿತ್ತು ಎಂದು ಹೇಳುವುದಾದರೆ ನೀವು ಏನು ಮಾಡಿದ್ದೀರಿ ? Consumer price index for Industrial workers : ಕರ್ನಾಟಕದಲ್ಲಿ ಮಾರ್ಚಿ 1983ರಲ್ಲಿ 539, ಮಾರ್ಚಿ 1984ರಲ್ಲಿ 615 ಮಾರ್ಚಿ 1985ರಲ್ಲಿ 641. ಇದುವರೆಗೆ 14.10+4.23 ಪರ್ಸೆಂಟ್ ಜಾಸ್ತಿಯಾಗಿದೆ. ಇದನ್ನು ವೈಜ್ಞಾನಿಕವಾಗಿ ನೋಡಿದರೆ ಆಲ್ ಇಂಡಿಯಾಕ್ಕೆ ಹೋಲಿಸುವುದು ಕಷ್ಟ. ಆದರೆ ಈಗಿರತಕ್ಕ ಆಧಾರದಮೇಲೆ ನಮ್ಮ ಆರ್ಥಿಕ ತಜ್ಞರು, ಅಂಕಿಅಂಶಗಳ ಇಲಾಖೆಯವರು ಕೊಟ್ಟಿರುವ ಮಾಹಿತಿಯ ಪ್ರಕಾರ ಬೆಲೆಗಳು ಜಾಸ್ತಿಯಾಗುತ್ತಿವೆ. ಪಟ್ಟಣಗಳಲ್ಲಿರುವ ಕಾರ್ಮಿಕ ವರ್ಗದವರು ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಕೃಷಿ ಕಾರ್ಮಿಕರು ಈ ಬೆಲೆಗಳ ಏರಿಕೆಯ ಹೊಡೆತವನ್ನು ಅನುಭವಿಸುತ್ತಿದ್ದಾರೆ.

ಶ್ರೀಮಂತರು ಹೇಗೊ ತಪ್ಪಿಸಿಕೊಳ್ಳುತ್ತಾರೆ. ಹಾಗೆಯೇ ಬ್ಲಾಕ್ ಮಾರ್ಕೆಟೀಯರ್ಸ್ ಹೇಗೂ ತಪ್ಪಿಸಿಕೊಳ್ಳುತ್ತಾರೆ. ಆದರೆ ಬಡವರಾಗಿರತಕ್ಕಂಥವರು, ಯಾರು ಕನಿಷ್ಟ ಕೂಲಿ ಪಡೆಯುತ್ತಿರುವವರೋ ಅಂಥವರಿಗೆ ಒಂದು ಪರ್ಸೆಂಟ್ ಜಾಸ್ತಿಯಾಯಿತು. ಒಂದು ಹೊತ್ತು ಊಟ ಮಾಡತಕ್ಕಂಥವರು 14 ರಿಂದ 16 ಪರ್ಸೆಂಟ್‌ವರೆಗೆ ಜಾಸ್ತಿ ತೆರಿಗೆಯನ್ನು ಕೊಡಬೇಕಾಯಿತು. ಅವರು ಯಾವರೀತಿ ಜೀವನ ಮಾಡಬೇಕು ? ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕು.

ಇನ್ನೊಂದು ಮುಖ್ಯವಾದ ಅಂಶ. ಅದೇನೆಂದರೆ ಬಜೆಟ್‌ನಲ್ಲಿ ಅಭಿವೃದ್ಧಿಗಾಗಿ ಖರ್ಚುಮಾಡುತ್ತೇವೆಂದು ಹೇಳಿದ್ದೀರಿ. ಒಂದೊಂದು ಸೆಕ್ಟಾರಿಗೂ ಸಹ ಎಷ್ಟೆಷ್ಟು ಖರ್ಚುಮಾಡುತ್ತಿದ್ದೀರಿ ಎನ್ನುವುದು ಬಹಳ ಮುಖ್ಯ. ನೀರಿನ ಉತ್ಪಾದನೆ, ಟ್ರಾನ್ಸ್‌ಪೋರ್ಟ್ ಅಂಡ್ ಕಮ್ಯುನಿಕೇಶನ್ಸ್, ಮತ್ತು ಕೈಗಾರಿಕೆ, ಇದಕ್ಕೆಲ್ಲ ಟೋಟಲ್ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡೀಚರ್ ಎಷ್ಟು ಮೀಸಲಾಗಿಟ್ಟಿದ್ದೀರಿ ಎನ್ನುವುದು ಬಹಳ ಮುಖ್ಯವಾದ ಅಂಶ. ಇದರಲ್ಲಿ ಬಹಳ ಮುಖ್ಯವಾಗಿ ಪವರ್‌ಗೆ ತೆಗೆದುಕೊಂಡಿರತಕ್ಕಂಥದ್ದು ನಮ್ಮ ಸ್ನೇಹಿತರಾದ ಮಾನ್ಯ ಬಂಗಾರಪ್ಪನವರು ಮಾತನಾಡುವಾಗ ಹೇಳಿದರು. ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಏನು ಮಾಡಿದ್ದೀರಿ ? ನಮ್ಮ ರಾಜ್ಯದಲ್ಲಿ ಸಾಕಷ್ಟು ವಿದ್ಯುಚ್ಛಕ್ತಿಯ ಕೊರತೆ ಇದೆ. ನಾನು ಅದರ ಬಗ್ಗೆ ಈಗ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ವಿದ್ಯುಚ್ಛಕ್ತಿಯ ಡಿಮ್ಯಾಂಡ್ ಬಂದವೇಲೆ ಅದರ ಬಗ್ಗೆ ಮಾತನಾಡುತ್ತೇನೆ. ಈವತ್ತಿನ ದಿವಸ ವಿದ್ಯುಚ್ಛಕ್ತಿಯ ಉತ್ಪಾದನೆ ಬಹಳ ಮುಖ್ಯ. ಹಾಗೆಯೇ ಟ್ರಾನ್ಸ್‌ಪೋರ್ಟ್, ಸಾರಿಗೆ ಮತ್ತು ಕೈಗಾರಿಕೆಯು ಬಹಳ ಮುಖ್ಯವಾಗಿದೆ, ಒಂದು ರಾಜ್ಯದ ಸಂಪನ್ಮೂಲಗಳನ್ನು ಬೆಳೆಸುವುದಕ್ಕೆ ಮತ್ತು ಒಂದು ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಸುಭದ್ರಗೊಳಿಸಬೇಕಾದರೆ ಈ ಮೂರು ಬಾಬುಗಳು ಬಹಳ ಮುಖ್ಯ ಎನ್ನುವುದನ್ನು ಎಲ್ಲರೂ ಕೂಡ ಒಪ್ಪಿಕೊಳ್ಳುತ್ತಾರೆ. ಆದರೆ ನೀವು ಬಜೆಟ್ ತಯಾರು ಮಾಡುವಾಗ ಅದನ್ನು ಅಭಿವೃದ್ಧಿಪಡಿಸಲು ಎಷ್ಟು ಹಣವನ್ನು ಮೀಸಲಾಗಿಡಬೇಕಾಗಿತ್ತೋ ಅಷ್ಟು ಹಣವನ್ನು ಮೀಸಲಾಗಿಟ್ಟಿಲ್ಲ. ಅದು ಬಹಳ ದೂರದಲ್ಲಿ ಹೋಗುತ್ತಿದೆ ಎನ್ನುವ ಅಭಿಪ್ರಾಯಕ್ಕೆ ಅವಕಾಶವಾಗಿದೆ. ನಮ್ಮ ರಾಜ್ಯದ ಬಜೆಟ್ ತೆಗೆದುಕೊಂಡರೆ ಟೋಟಲ್ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡೀಚರ್ ಒಟ್ಟಾರೆ ಏನು ಖರ್ಚುಮಾಡುತ್ತಿದ್ದೀರೋ ಅದು ಬಹಳ ಕಡಿಮೆಯಾಗುತ್ತಾ ಹೋಗುತ್ತಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಪೇಜ್ ನಂಬರ್ 40ರಲ್ಲಿ ಹೇಳಿದ್ದೀರಿ. ಇದರಲ್ಲಿ ಏನಾಗಿದೆ ಎಂದರೆ 1984–85ಕ್ಕೆ ಶೇರ್ ಇನ್ ದಿ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡೀಚರ್ ಆನ್ ಅಗ್ರಿಕಲ್ಚರ್ ಮತ್ತು ಅಲೈಡ್ ಸರ್ವೀಸಸ್ ಇದು 1983–84ಕ್ಕೆ 21 ಪರ್ಸೆಂಟ್ ಇಟ್ಟಿದ್ದರೆ 1984-85ಕ್ಕೆ 22 ಪರ್ಸೆಂಟ್ ಆಗುತ್ತದೆ. ಜಾಸ್ತಿಯಾದಂತೇನು ಆಗಲಿಲ್ಲ. ಜನರಲ್ ಎಕನಾಮಿಕ್ಸ್ ಸರ್ವೀಸಸ್‌ಗೆ 1983–84ಕ್ಕೆ 5 ಪರ್ಸೆಂಟ್ ಇದ್ದರೆ, 1984-85ಕ್ಕೆ 6 ಪರ್ಸೆಂಟ್, ಇದು ಈಗಲೂ ಅಷ್ಟೇ ಇದೆ. ಒಂದು ಪರ್ಸೆಂಟ್ ಮಾತ್ರ ಜಾಸ್ತಿಯಾಯಿತು. ವಾಟರ್ ಪವರ್ ಡೆವಲಪ್‌ಮೆಂಟ್‌ಗೆ 1983–84ರಲ್ಲಿ 22 ಪರ್ಸೆಂಟ್, 1984-85ರಲ್ಲಿ 21 ಪರ್ಸೆಂಟ್ ಟ್ರಾನ್ಸ್‌ಪೋರ್ಟ್ ಮತ್ತು ಕಮ್ಯುನಿಕೇಷನ್ಸ್‌ಗೆ 5 ಪರ್ಸೆಂಟ್ ಇದ್ದುದು ಈಗಲೂ 5 ಪರ್ಸೆಂಟ್ ನಿಗದಿಮಾಡಿದ್ದೀರಿ. ಜಾಸ್ತಿ ಏನು ಮಾಡಲಿಲ್ಲ. ಇಂಡಸ್ಟ್ರೀಸ್ ಅಂಡ್ ಕಾಮರ್ಸ್‌ಗೆ 1983–84ಕ್ಕೆ 8 ಪರ್ಸೆಂಟ್. 1984–85ಕ್ಕೆ 5 ಪರ್ಸೆಂಟ್ ಇದು ಬಹಳ ಕಡಿಮೆ ಆಯಿತು. ಇದು ಏನು ತೋರಿಸುತ್ತದೆ ಎಂದರೆ ಮುಖ್ಯವಾದಂಥ ಸೆಕ್ಟಾರ್ಸ್ ಎಂದು ಏನು ಕರೆಯುತ್ತೇವೋ ಅವುಗಳಿಗೆ ಎಷ್ಟುದೂರ ಖರ್ಚುಮಾಡಬೇಕಾಗಿತ್ತೋ ಅಷ್ಟು ದೂರ ಖರ್ಚುಮಾಡತಕ್ಕಂಥ ಮನೋಭಾವವನ್ನು ತಾವು ತೋರಲಿಲ್ಲವೆಂದು ಈ ಬಜೆಟ್‌ನಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಆದ್ದರಿಂದ ಈ ಬಜೆಟ್‌ನಲ್ಲಿ ಹಿಂಜರಿತವಿದೆಯೇ ಹೊರತು ಮುಂಜರಿತ ಕಾಣುವುದಿಲ್ಲವೆಂದು ಹೇಳಬೇಕಾಗುತ್ತದೆ.

ಈಗಾಗಲೇ ಅನೇಕ ಮಾನ್ಯ ಮಿತ್ರರು (ಎಂಪ್ಲಾಯ್‌ಮೆಂಟ್) ಉದ್ಯೋಗ ಕಲ್ಪಿಸುವುದರ ಬಗ್ಗೆ ಮಾತನಾಡಿದ್ದಾರೆ. ಎಕನಾಮಿಕ್ಸ್ ಸರ್ವೆ ಆಫ್ ಇಂಡಿಯಾದವರು ನಮ್ಮ ಆರ್ಥಿಕ ನೀತಿಯ ಬಗ್ಗೆ ಹೇಳಿದ್ದಾರೆ. 1983-84ಕ್ಕೆ ಒಂದು ರಿಪೋರ್ಟನ್ನು ಸಹ ಕೊಟ್ಟಿದ್ದಾರೆ. It is said "There is a marginal increase in unemployment.". It is not marginal increase in unemployment in 1983-84, 1984-85 and if you have not enunciated enough funds either for irrigation purpose or industries particularly, how can we make Progress and marginally increase in employment ? It is impossible. That way the whole trend of this budget is one against the indicators that have been proposed by the Finance Minister. That is most important. ಇದರಲ್ಲಿ ಬಹಳ ಮುಖ್ಯವಾದ ಅಂಶವೇನೆಂದರೆ, ಈಗಾಗಲೇ ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆ. ಅವರೂ ಕೂಡ ಅಭಿವೃದ್ಧಿಯ ವಿಚಾರಗಳ ಬಗ್ಗೆ ಹೇಳಿದ್ದಾರೆ. ನಾನು ತಮ್ಮ ಮೂಲಕ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತಾವು ಬಜೆಟ್‌ನಲ್ಲಿ ಡೆವಲಪ್‌ಮೆಂಟಲ್ ಎಕ್ಸ್‌ಪೇಂಡಿಚರ್ ಈವತ್ತಿನ ದಿವಸ ಜಾಸ್ತಿ ಮಾಡುತ್ತೇವೆ, ನಾನ್ ಡೆವಲಪ್‌ಮೆಂಟಲ್ ನಾನ್ ಎಕ್ಸ್‌ಪೆಂಡೀಚರ್‌ನ್ನು ಕಡಿಮೆ ಮಾಡುತ್ತೇವೆಂದು ಹೇಳಿದ್ದೀರಿ. ತಮಗೂ ಗೊತ್ತಿದೆ ಇದರ ಬಗ್ಗೆ ಅನೇಕ ಸಲ ಮಾತನಾಡಿದ್ದೇವೆ "Our present financial difficulty should be viewed in this context. The compulsions to resort to overdraft in the case of Karnataka was not the consequences of either our failure to mobilise additional resources or the result of uncontrolled expenditure or non-plan i.e. unproductive fancy schemes. You said our difficulty is only because of the Central Government, over-draft, etc., it is not because of the non-plan expenditure. Is it true on the basis of the facts is the question. It is true that we should go on that line ? If this is not changed, my humble submission is that it is not true. 1973-74ರಿಂದ 5 ವರ್ಷಗಳ ಲೆಕ್ಕವನ್ನು ತೆಗೆದುಕೊಂಡರೆ 1973-74ರಲ್ಲಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 341.50 ಕೋಟಿ ರೂಪಾಯಿಗಳು. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 213.85 ಕೋಟಿ ರೂಪಾಯಿಗಳು ಅಂದರೆ ಒಟ್ಟು 555.35 ಕೋಟಿ ರೂ.ಗಳು ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಮತ್ತು ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಒಟ್ಟು 38 ಪರ್ಸೆಂಟ್ ಬರುತ್ತದೆ, 1982-83, 1983-84, 1984-85 ಮತ್ತು 1985-86ರಲ್ಲಿ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಕಡಿಮೆಯಾಗುತ್ತಾ ಬರುತ್ತಿದೆ. 1982-83ರಲ್ಲಿ 1233,69 ಕೋಟಿ ರೂ.ಗಳ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡಿಚರ್ ಇದ್ದರೆ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 505.42 ಕೋಟಿ ರೂಪಾಯಿಗಳು. ಒಟ್ಟು 10,739.11 ಕೋಟಿ 1973-74ರಲ್ಲಿ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 38 ಪರ್ಸೆಂಟ್ ಇದ್ದುದು 1982-83ರಲ್ಲಿ 29 ಪರ್ಸೆಂಟ್‌ಗೆ ಬಂದಿತು. 1983-84ರಲ್ಲಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 1471.30 ಕೋಟಿ ರೂಪಾಯಿಗಳು, ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 656.67 ಕೋಟಿ ರೂಪಾಯಿಗಳು. ಟೋಟಲ್ 2127.97 ಕೋಟಿ ರೂಪಾಯಿಗಳು ಅಂದರೆ 31 ಪರ್ಸೆಂಟ್ ಆಗಿದೆ. ಹಿಂದಿನ ವರ್ಷಕ್ಕಿಂತ 2 ಪರ್ಸೆಂಟ್ ಜಾಸ್ತಿಯಾಯಿತು. 1984-85ರಲ್ಲಿ 1646.62 ಕೋಟಿ ರೂಪಾಯಿಗಳು ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಆದರೆ, ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 734.27 ಕೋಟಿ ರೂಪಾಯಿಗಳು. ಟೋಟಲ್ 2174 ಕೋಟಿ ರೂಪಾಯಿಗಳು. 1985-86ರ ಬಜೆಟರಿ ಫಿಗರ್‌ನಲ್ಲಿ ಕೊಟ್ಟಿರತಕ್ಕಂಥದ್ದು ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 1590.49 ಕೋಟಿ, ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 915.23 ಕೋಟಿ ರೂಪಾಯಿಗಳು ಟೋಟಲ್ 2505.77 ಕೋಟಿ ರೂಪಾಯಿಗಳು, ಒಟ್ಟು ನಾನ್ ಡೆವಲಪ್‌ಮೆಂಟ್ ಎಕ್ಸ್‌ಪಂಡಿಚರ್ 36 ಪರ್ಸೆಂಟ್ ಬರುತ್ತದೆ. ಇದನ್ನು ಯಾವ ಆಧಾರದಮೇಲೆ ಹೇಳಿದ್ದಾರೆಂದು ನೋಡೋಣ, ಡೆವಲಪ್‌ಮೆಂಟ್ ಮತ್ತು ನಾನ್ ಡವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ವಿಚಾರದಲ್ಲಿ ಅವರೇ ಹೇಳಿದ್ದಾರೆ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿದೆ ಎಂಬುದನ್ನು ಅವರೇ ಒಪ್ಪಿಕೊಂಡಿದ್ದಾರೆ, ಇದನ್ನು ಯಾವರೀತಿ ಲೆಕ್ಕಾಚಾರ ಹಾಕಬೇಕೆಂದು ನಾವು ಯಾರೂ ಯೋಚಿಸಬೇಕಾಗಿಲ್ಲ. ಇದನ್ನೂ ಕೂಡ ಅವರೇ ಒಂದು ಪಟ್ಟಿ ಮಾಡಿ ಕೊಟ್ಟಿದ್ದಾರೆ, ಅದರ ಆಧಾರದಮೇಲೆ ತೆಗೆದುಕೊಡರೆ 36 ಪರ್ಸೆಂಟ್ ಜಾಸ್ತಿಯಾಗಿದೆ. ಇದರಲ್ಲಿ ನಾವೇನೂ

ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ನ್ನು ಕಡಿಮೆ ಮಾಡಿ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ನ್ನು ಜಾಸ್ತಿಮಾಡಿ ಎಂದು ಹೇಳುತ್ತಿಲ್ಲ. ಹೋಗಲಿ ಇದಕ್ಕೂ ಹಿಂದೆ 31 ಪರ್ಸೆಂಟ್ ಇತ್ತು. ಅದನ್ನು ಲೆಕ್ಕಹಾಕಿ ಅದರ ಆಧಾರದಮೇಲೆ ನೀವು ಖರ್ಚುಮಾಡಿದರೂ ಅದು ತಪ್ಪಾಗುತ್ತದೆ.

4-00 p.m.

ಇನ್ನೊಂದು ಬಹಳ ಮುಖ್ಯವಾದ ಅಂಶ ಎಂದರೆ, ಇಲ್ಲಿ ನೆಟ್ ಡೊಮೆಸ್ಟಿಕ್ ಪ್ರಾಡಕ್ಟ್ಸ್ ಎಂದು ನಮ್ಮ ಆರ್ಥಿಕ ತಜ್ಞರು ಹೇಳಿದ್ದಾರೆ. ಅದು ಜಾಸ್ತಿಯಾದರೆ ಏನೂ ತೊಂದರೆ ಇಲ್ಲ. ಒಂದುವೇಳೆ ಅದೇನಾದರೂ ಕಡಿಮೆಯಾದರೆ ಆಗ ರಾಜ್ಯದ ಆರ್ಥಿಕ ಪರಿಸ್ಥಿತಿ ತೊಂದರೆಯಲ್ಲಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವತ್ತು ನೆಟ್ ಡೊಮೆಸ್ಟಿಕ್ ಪ್ರಾಡಕ್ಟ್ಸ್ ಕಡಿಮೆಯಾಗುತ್ತಿದೆ. ಇದರಲ್ಲಿ ಕರೆಂಟ್ ಪ್ರೈಸ್ ಮತ್ತು ಕಾನ್‌ಸ್ಟೆಂಟ್ ಪ್ರೈಸ್ ಎಂದು ಎರಡು ರೀತಿ ಇದೆ. ಕರೆಂಟ್ ಪ್ರೈಸ್‌ನ್ನು ಲೆಕ್ಕ ಹಾಕಿದರೆ ತಪ್ಪಾಗುತ್ತದೆ. ಹಿಂದೆ ಒಂದು ವಸ್ತುವಿನ ಬೆಲೆ 1200 ರೂ. ಇದ್ದುದು ಇವತ್ತು 20() ರೂ. ಆಗಿದೆ. ಆದರೆ ಕಾನ್‌ಸ್ಟೆಂಟ್ ಪ್ರೈಸ್ ಏನಿದೆ ಅದನ್ನು ತೆಗೆದುಕೊಂಡು ಲೆಕ್ಕ ಹಾಕಿ ಪ0 ಗೊತ್ತಾಗುತ್ತದೆ. ಸರ್ಕಾರದವರು ತಮ್ಮ ಅಂಕಿ ಅಂಶಗಳನ್ನು ಬೇರೆ ರಾಜ್ಯಗಳಿಗೆ ಹೋಲಿಸಿ ಇಲ್ಲಿ ಕೊಟ್ಟಿದ್ದಾರೆ. ಇದು 1972ರಿಂದ 1982-83ರವರೆಗೆ ಇದೆ. ನಮ್ಮ ಕರ್ನಾಟಕದಲ್ಲಿ 1979-80ರಿಂದ ತೆಗೆದುಕೊಂಡರೆ, ಈ ರೀತಿ ಇದೆ ;

	ಕರ್ನಾಟಕ	ಕೇರಳ	ಮಧ್ಯಪ್ರದೇಶ	ತಮಿಳ್ನಾಡು	ಆಂಧ್ರಪ್ರದೇಶ
1979—80	675	590	480	669	659
1980—81	637	619	397	646	631
1981—82	678	636	493	615	649
1982—83	662		512	667	718

ನಮ್ಮ ರಾಜ್ಯದ ಜೊತೆಗೆ ದಕ್ಷಿಣದ ಇತರೆ 4 ರಾಜ್ಯಗಳ ಅಂಕಿಅಂಶಗಳನ್ನು ಕೊಟ್ಟಿದೆ. ಇವು ಅನೇಕ ರೀತಿಯಲ್ಲಿ ಒಂದೇ ಮಾದರಿಯಾಗಿವೆ. ಬೇರೆ ರಾಜ್ಯಗಳಲ್ಲಿರುವುದಕ್ಕೂ ನಮ್ಮ ರಾಜ್ಯದಲ್ಲಿರುವುದಕ್ಕೂ ಹೋಲಿಕೆ ಮಾಡಿದಾಗ ನಮ್ಮಲ್ಲಿ ಇರತಕ್ಕ ಹಣವನ್ನು ಯಾವರೀತಿ ಉಪಯೋಗ ಮಾಡಿಕೊಳ್ಳುತ್ತಿದ್ದೇವೆ ಆ ವಿಧಾನದಲ್ಲಿ ಸ್ವಲ್ಪ ತಪ್ಪು ಮಾಡುತ್ತಿದ್ದೇವೆಂದು ಅನಿಸುತ್ತದೆ. ನಮ್ಮಲ್ಲಿ ಹಣಕಾಸಿನ ಕೊರತೆ ಏನೂ ಇಲ್ಲ. ಆದರೆ ಯಾವರೀತಿ ರಿಸೋರ್ಸ್ ಮೊಬಲೈಸ್ ಮಾಡಿದೆ ಎಂಬುದು ಗೊತ್ತಿಲ್ಲ. It is not the question of resource mobilisation. What is that you have spent ? How do you spend that money, on what sector you spend the money and where it goes ?

ಈ ಅನಾಲಿಸಿಸ್ ಮಾಡುವುದಕ್ಕೆ ಹೊರಟರೆ ನಮ್ಮ ಕರ್ನಾಟಕ ರಾಜ್ಯಕ್ಕೂ ಇತರೇ ರಾಜ್ಯಗಳಿಗೂ ಏನೂ ವ್ಯತ್ಯಾಸ ಇಲ್ಲವೆ ? ಇದನ್ನೆಲ್ಲಾ ನಾವು ನೋಡಿದರೆ ಹಣವಂತರು ಇನ್ನೂ ಹೆಚ್ಚು ಹೆಚ್ಚು ಹಣವಂತರಾಗುತ್ತಿದ್ದಾರೆ, ಬಡವರು ಇನ್ನೂ ಕಡು ಬಡವರಾಗುತ್ತಿದ್ದಾರೆ, ಬಡವರಿಗೆ ಯಾವುದೇ ರೀತಿಯ ಉಪಯೋಗವೂ ಆಗಿಲ್ಲ ; ಎನ್ನತಕ್ಕ ಅಂಶ ಈ ನೆಟ್ ಡೊಮೆಸ್ಟಿಕ್ ಪ್ರಾಡಕ್ಟ್ಸ್‌ನಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಅಂಶ ಪ್ರಮುಖವಾದುದು ಎಂದರೆ, ಎಲ್ಲರಿಗೂ ಗೊತ್ತಿರತಕ್ಕ ವಿಚಾರವೇ ಆಗಿದೆ. ಇವತ್ತು ಬಡತನ ರೇಖೆಯಿಂದ ಕೆಳಗಿರುವವರು ದಿನೇದಿನೇ ಹೆಚ್ಚಾಗುತ್ತಿದ್ದಾರೆ, ಇದಕ್ಕೆ ಒಂದು ನಿದರ್ಶನ ಎಂದರೆ, ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಿಯಾಗಿ ಬಂದಮೇಲೆ ಹಿಂದೆ ಬಡತನ ರೇಖೆಯಿಂದ ಕೆಳಗೆ ಇದ್ದವರ ಸಂಖ್ಯೆ 42 ಪರ್ಸೆಂಟ್ ಇದ್ದುದು 48 ಪರ್ಸೆಂಟ್‌ಗೆ ಏರಿತು. ಹಿಂದೆ ನಾನು ಈ ಮಾತನ್ನು ಹೇಳಿದಾಗ, ಈ ರೀತಿ ಹೇಳುವುದು ಸರಿಯಲ್ಲ ವೆಂದು ಆ ಕಡೆಯಿಂದ ಆಕ್ಷೇಪಣೆ ಬಂತು. ಇವರ ಸಂಖ್ಯೆ ಇಲ್ಲಿ ಕಡಿಮೆ ಆಗಿದ್ದರೆ ನೀವು ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದು ಸರಿ. ಆದರೆ ಇಲ್ಲಿಯೂ ಕೂಡ ಬಡವರ ಸಂಖ್ಯೆ ಜಾಸ್ತಿಯಾಗಿದೆ. ಬಡತನ ರೇಖೆಯಿಂದ ಕೆಳಗಿರುವವರ ಸಂಖ್ಯೆಯ ಬಗ್ಗೆ "ಥಿಂಕ್ ಟ್ಯಾಂಕ್"ನವರು ಹೊರಡಿಸಿರುವ ಅಂಕಿಅಂಶಗಳನ್ನು ನಾನು ಓದಬಯಸುತ್ತೇನೆ.

Proportion of people below the poverty line,
(ALL INDIA AND KARNATAKA)

Year	All India			Karnataka		
	Rural	Urban	Total	Rural	Urban	Total
1963-64	70	59	68	77	70	76
1970-71	73	55	68	72	54**	68
1977-78	51*	38*	48	72	64	69

ಆಲ್ ಇಂಡಿಯ ಲೆವೆಲ್‌ಗೆ ಹೋಲಿಸಿದಾಗ 48 ಎಲ್ಲಿ 69 ಎಲ್ಲಿ ? ಇದನ್ನು ತಾವೇ ಯೋಚನೆಮಾಡಿ ನೋಡಬೇಕು. ನೀವು ಬೇರೆಯವರನ್ನು ದೂರಿ ಏನೂ ಪ್ರಯೋಜನವಿಲ್ಲ. ನೀವೇ ಅರ್ಥಮಾಡಿಕೊಂಡು ಬಡತನ ರೇಖೆಯಿಂದ ಕೆಳಗೆ ಇರುವವರನ್ನು ಮೇಲಕ್ಕೆ ಎತ್ತಲು ಕ್ರಮ ಕೈಗೊಳ್ಳಬೇಕು. ಆದರೆ ನೀವು ಆ ರೀತಿ ಮಾಡುತ್ತಿಲ್ಲ. ನಾವು ಈಗ 1985ನೇ ಇಸವಿಯಲ್ಲಿದ್ದೇವೆ. ನಿಮ್ಮ ಎಕನಾಮಿಕ್ ಅಂಡ್ ಪ್ಲಾನಿಂಗ್ ಕೌನ್ಸಿಲ್‌ನವರು ಕೊಟ್ಟಿರತಕ್ಕ ಅಂಕಿಸಂಖ್ಯೆಗಳನ್ನೇ ನಾನು ಇಲ್ಲಿ ಓದಿದ್ದೇನೆ. ಇವರು 1983ರ ಮಾರ್ಚಿಯಲ್ಲಿ ಇದನ್ನು ಕೊಟ್ಟಿದ್ದಾರೆ. ಅಂದಮೇಲೆ ಈಗ 1985ರಲ್ಲಿ ನಾವು ಯಾವ ಹಂತ ದಲ್ಲಿದ್ದೇವೆ ಎಂಬುದನ್ನು ತಾವೇ ಯೋಚನೆ ಮಾಡಬೇಕು.

ಇನ್ನೊಂದು ಇಂಡಿಕೇಟರ್ ಎಂದರೆ ಕನ್‌ಸಂಪಷನ್ ಎಕ್ಸ್‌ಪೆಂಡಿಚರ್. ಒಬ್ಬ ಮನುಷ್ಯ ಎಷ್ಟು ಖರ್ಚುಮಾಡುತ್ತಾನೆಂಬುದು ಮುಖ್ಯ. ಜನರ ಜೀವನ ಸುಗಮವಾಗಿ ಮುಂದುವರಿಯುತ್ತಿದೆ ಎಂದರೆ ದೇಶವೂ ಮುಂದುವರಿಯುತ್ತಿದೆ, ಜನರ ಜೀವನ ಕಷ್ಟಮಯವಾಗಿದೆ ಎಂದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ ಎಂಬುದು ಗೊತ್ತಾಗುತ್ತದೆ. I will just read few sentences from the Background papers written for The Economic and Planning Council for Karnataka. It says :

> "A more disaggregated feel for the distribution of consumption expenditure and nutrition is available in TABLE-1.2B It demostrates that the profile of consumption expenditure distribution has shown little change in the last 20 years. It is apparent that the poorest 30% of the State's population shares less than 15% of the aggregate consumption expenditure, whereas the richest 30% shares over 50% of the aggregate consumption expenditure. There has been a general increase to most sections of the Population in the nutrition available from cereals and coarse grains in the last 10 years. The mean daily by the poorest 30% of the population in 1983 was 1255 calories. the mean calorie consumption of the richest 30% was 40% higher."

ಇದರ ಆಧಾರದ ಮೇಲೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳುವುದು ಖಂಡಿತವಾಗಿಯೂ ತಪ್ಪಾಗುತ್ತದೆ. ಇದು 1983ರಲ್ಲಿ ತಯಾರಾಗಿದ್ದು. ಆದರೂ ಸಹ ಈಗಲೂ ಅದೇರೀತಿಯ ಪರಿಸ್ಥಿತಿ ಇದೆ ಎಂದು ಹೇಳಬಹುದು. ಆದ್ದರಿಂದ ಜನರ ಜೀವನ ಮಟ್ಟವನ್ನು ಉತ್ತಮ ಗೊಳಿಸುವ ಬಗ್ಗೆ ನಿಮ್ಮ ತಂತ್ರ ಏನಿದೆ ಎಂಬುದನ್ನು ತಿಳಿಸಬೇಕಾಗುತ್ತದೆ. ಈ ಬಜೆಟ್ ಮೂಲಕ ರಾಜ್ಯದ ಜನತೆಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರಿ ಎಂಬುದು ನಮಗೆ ಮುಖ್ಯ. ಜನರ ಜೀವನ ಮಟ್ಟ ಸುಧಾರಣೆಗೊಳ್ಳದಿದ್ದರೆ ಅನೇಕ ತೊಂದರೆಗಳು ಬರುತ್ತವೆಂದು ಹೇಳಬೇಕಾಗುತ್ತದೆ. ಬಡತನ ವನ್ನು ಹೋಗಲಾಡಿಸಲು ಅನೇಕ ಯೋಜನೆಗಳಿವೆ. ಆದರೆ ಆ ಯೋಜನೆಗಳು ಸರಿಯಾಗಿ ಕಾರ್ಯಗತ ವಾಗಬೇಕಾದರೆ ಸರಿಯಾದ ಆಡಳಿತ ಯಂತ್ರ ಇರಬೇಕಾಗುತ್ತದೆ. ಇದರ ಜೊತೆಗೆ ಸರ್ಕಾರದವರು ಎಲ್ಲ ರೀತಿಯ ಅನುಕೂಲಗಳನ್ನು ಒದಗಿಸಿಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್

ಭಾಷಣದಲ್ಲಿ 'ಆಹಾರ, ಉದ್ಯೋಗ ಮತ್ತು ಉತ್ಪಾದನೆಗಳು ಏಳನೇ ಯೋಜನೆಯ ಮೂರು ಪ್ರಧಾನ ಉದ್ದೇಶಗಳಾಗಿವೆ. ಎಂದು ಹೇಳಿದ್ದಾರೆ ಮುಂದೆ ಆರ್ಥಿಕ ಮತ್ತು ಸಾಮಾಜಿಕ ಶಕ್ತಿಗಳ ಪರಿಣಾಮವಾಗಿ ಯಾರ ಸ್ಥಿತಿಗತಿಗಳು ಇನ್ನಷ್ಟು ಕೆಟ್ಟಿವೆಯೋ ಅಂಥ ಜನರ ಜೀವನ ಮೌಲ್ಯವನ್ನು ಯೋಜನೆಯು ಸುಧಾರಿಸಬೇಕು ಎಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಕೇಂದ್ರ ಸರ್ಕಾರ ಯೋಜನೆಗಳ ಬಗ್ಗೆ ಯಾವ ಧೋರಣೆಯನ್ನು ಅನುಸರಿಸುತ್ತದೆಯೋ ಅದನ್ನೇ ರಾಜ್ಯ ಸರ್ಕಾರಗಳೂ ಸಹ ಒಪ್ಪಿಕೊಳ್ಳುತ್ತವೆ. ನಮ್ಮ ದೇಶವನ್ನು ಸಮಾಜವಾದಿ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕೆಂದು ಎಲ್ಲರೂ ಹೇಳುತ್ತಾರೆ. ಆರ್ಥಿಕ ಅಭಿವೃದ್ಧಿಯ ಬಗೆಗಿನ ನಮ್ಮ ಧೋರಣೆಯು ಗಾಂಧೀಜಿಯವರ ಪ್ರತಿಪಾದಿಸಿದ ಧೋರಣೆಯಾಗಿರಬೇಕು. ಎಂದು ಇಲ್ಲಿ ಹೇಳಿದ್ದಾರೆ. ಆದರೆ ಈ ದಾರಿಯಲ್ಲಿ ಹೋಗುವುದಕ್ಕೆ ಇವರ ಕೈಯಲ್ಲಿ ಇನ್ನೂ ಆಗಿಲ್ಲ, ಇವರು ಕೈಕೊಂಡ ಯೋಜನೆಗಳಲ್ಲಿ ಏರುಪೇರುಗಳು ಮತ್ತು ವ್ಯತ್ಯಾಸಗಳು ಇದ್ದೇ ಇವೆ. ಈ ಏರುಪೇರುಗಳನ್ನು ಮತ್ತು ವ್ಯತ್ಯಾಸಗಳನ್ನು ಪೂರ್ತಿಯಾಗಿ ತೊಡೆದುಹಾಕಬೇಕು. ಇಲ್ಲದಿದ್ದರೆ ತಲೆನೋವು ಬಂದಾಗ ಆಸ್ಪರೀನ್ ಮಾತ್ರೆ ತೆಗೆದುಕೊಂಡಂತೆ ಆಗುತ್ತದೆ. ಈ ಮಾತ್ರೆ ತೆಗೆದುಕೊಂಡರೆ ತಲೆನೋವು ತಾತ್ಕಾಲಿಕವಾಗಿ ಶಮನವಾಗುತ್ತದೆಯೇ ಹೊರತು ಪೂರ್ತಿಯಾಗಿ ಶಮನವಾಗುವುದಿಲ್ಲ. ಈ ಕಾರಣದಿಂದ ಎಲ್ಲ ಹಂತಗಳಲ್ಲಿಯೂ ಸಹ ಸಮಾಜವಾದಿ ಸಮಾಜವನ್ನು ಜಾರಿಗೆ ತರುವುದಕ್ಕೆ ಸರ್ಕಾರದವರು ಯೋಚನೆ ಮಾಡಬೇಕು. ನಮ್ಮ ಧೋರಣೆಯು ಗಾಂಧೀಜಿಯವರು ಪ್ರತಿಪಾದಿಸಿದ ಧೋರಣೆಯಾಗಿರಬೇಕು ಎಂದು ಏನು ಇಲ್ಲಿ ಹೇಳಿದ್ದಾರೆ, ಈ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ, ಮುಂದೆ ಜನತಾ ವಲಯದ ಬಗ್ಗೆ ಇಲ್ಲಿ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ :—

> ''.......ಖಾಸಗಿ ಸಹಕಾರಿ ಹಾಗೂ ಸಾರ್ವಜನಿಕ ವಲಯಗಳೆಲ್ಲವೂ ಸರ್ವತೋಮುಖ ಅಭಿವೃದ್ಧಿಯ ನಮ್ಮ ಅಂತಿಮ ಗುರಿಗಳನ್ನು ಸಾಧಿಸುವಲ್ಲಿ ವಿಫಲವಾಗಿವೆ. ಅಭಿವೃದ್ಧಿಯ ಪ್ರಯೋಜನಗಳು ಅಥವಾ ಲಾಭಗಳು ಕೆಲವು ವರ್ಗಗಳ ಜನತೆಗೆ ಮಾತ್ರವೇ ಮುಟ್ಟಿವೆ. ಈಗಾಗಲೇ ಪ್ರಯೋಜನ ಪಡೆದವರು ತಾವು ಮಾತ್ರ ಹೆಚ್ಚಿನ ಪ್ರಯೋಜನಗಳನ್ನು ಪಡೆಯಲು ಕೂಗಾಡುತ್ತಿರುವ ಹಾಗೂ ಆ ಕಾರ್ಯದಲ್ಲಿ ಯಶಸ್ವಿಯಾಗುತ್ತಿರುವ ಅಹಿತಕರ ಪ್ರವೃತ್ತಿಯನ್ನು ನಾವು ನೋಡುತ್ತಿದ್ದೇವೆ. ಈಗಾಗಲೇ ಲಾಭದಾಯಕವಾದ ಉದ್ಯೋಗಗಳಲ್ಲಿರುವವರು ಅಧಿಕ ವೇತನಗಳನ್ನು ಕೋರುತ್ತಿದ್ದಾರೆ ಮತ್ತು ಆಗಾಗ ನಿರುದ್ಯೋಗಿಗಳು ಮತ್ತು ಉದ್ಯೋಗರಹಿತ ಜನರನ್ನು ಸಂಪೂರ್ಣವಾಗಿ ಉಪೇಕ್ಷಿಸಿ ಅವರ ಹಿತಾಸಕ್ತಿಗಳಿಗೆ ಹಾನಿಯುಂಟು ಮಾಡಿ ಅವುಗಳನ್ನು ಪಡೆಯುತ್ತಾರೆ........''

ಎಂದು ಇಲ್ಲಿ ಹೇಳಿದ್ದಾರೆ. ಇಲ್ಲಿ ಹೇಳಿರುವ ಪ್ರಕಾರ ಜಾಸ್ತಿ ಸಂಬಳ ಪಡೆಯುವವರೂ ಸಹ ತಮಗೆ ಇನ್ನೂ ಜಾಸ್ತಿ ಸಂಬಳ ಬೇಕೆಂದು ಕೇಳುತ್ತಾರೆಯೇ ಹೊರತು ಕೆಲಸವಿಲ್ಲದ ಜನರ ಬಗ್ಗೆ ಇವರಿಗೆ ಅಭಿಮಾನ ಎಂಬುದೇ ಇಲ್ಲ. ಅಷ್ಟೇ ಅಲ್ಲ, ಇಂತಹ ಜನರ ಬಗ್ಗೆ ಇವರಿಗೆ ಕಾಳಜಿಯಾಗಲೀ, ಕಳವಳವಾಗಲೀ ಇಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ಮುಂದೆ ಇದೇ ವಿಚಾರದಲ್ಲಿ ಈ ರೀತಿ ಹೇಳಿದ್ದಾರೆ :—

> ....''ನೀರಾವರಿ ಅಥವಾ ಇತರ ಅಭಿವೃದ್ಧಿ ಪರ ಚಟುವಟಿಕೆಗಳಿಂದ ಸೌಲಭ್ಯ ದೊರೆತಿರುವ ಜನರು ಬಹುಕಾಲದಿಂದ ಕ್ಷಾಮ ಪರಿಸ್ಥಿತಿ ಇರುವ ಪ್ರದೇಶದಲ್ಲಿ ವಾಸಿಸುವ ಜನರನ್ನು ಸಂಪೂರ್ಣ ಕಡೆಗಣಿಸಿ ಇನ್ನೂ ಹೆಚ್ಚಿನ ಪರಿಹಾರಗಳನ್ನು ಕೋರುತ್ತಿದ್ದಾರೆ........!'

ಎಂದು. ಹಾಗಿದ್ದರೆ ಇದಕ್ಕೆ ಬೇರೆ ಪರಿಹಾರವೇನು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬೇಕಾಗುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಪರಿಹಾರ ಏನು ಎಂಬುದನ್ನು 17ನೇ ಪ್ಯಾರಾದಲ್ಲಿ ವಿವರಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ನೀವು ಕಡಿಮೆ ಸಂಬಳ ಬರುವವರನ್ನು ಜಾಸ್ತಿ ಸಂಬಳ ಬರುವವರ ಮೇಲೆ ಎತ್ತಿಕಟ್ಟಲು ಹೋಗುತ್ತಿದ್ದೀರಿ. ಕಡಿಮೆ ಸಂಬಳ ಬರುವವರು ಹೆಚ್ಚು ಸಂಬಳ ಕೇಳುವುದರಲ್ಲಿ ತಪ್ಪೇನಿದೆ ? ನಮ್ಮ ರಾಜ್ಯದಲ್ಲಿ ವ್ಯವಸಾಯ ಕ್ಷೇತ್ರ ತೆಗೆದುಕೊಂಡರೆ, ಕೃಷಿ ಕಾರ್ಮಿಕರು ಶೇಕಡಾ 27ರಷ್ಟು ಇದ್ದಾರೆ. ಇಂತಹ ಜನರಿಗೆ ಅನುಕೂಲವಾಗುವಂತಹ ಒಂದು ಶಾಸನವನ್ನು ನೀವು ಇಲ್ಲಿಯವರೆಗೆ ತರಲಿಲ್ಲ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಅಗರಬತ್ತಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಬಹಳ ಕಷ್ಟದಲ್ಲಿದ್ದಾರೆ. ಇವರನ್ನೆಲ್ಲಾ ಸಂಘಟಿತರನ್ನಾಗಿ ನಾವು ಮಾಡಿದೆವು. ಇವರ ಅನುಕೂಲಕ್ಕಾಗಿ ಒಂದು ಶಾಸನ ತರಬೇಕೆಂದು ನಾವು ಕೇಳಿಕೊಂಡೆವು. ಇದಕ್ಕೆ ಸಂಬಂ

ಧಪಟ್ಟ ಬಿಲ್‌ನ್ನು ಸಹ ನಾವೇ ಮಾಡಿಕೊಟ್ಟಿದ್ದೇವೆ, ಆದರೆ ಅದನ್ನು ಸಹ ಇವರು ಜಾರಿಗೆ ತರಲಿಲ್ಲ. ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿ ದಿನಗೂಲಿ ಕೆಲಸ ಮಾಡುತ್ತಿದ್ದವರನ್ನು ಕೆಲಸದಿಂದ ತೆಗೆದುಹಾಕಿದ್ದರಿಂದ, ಆ ಜನರು ಇಂದು ಬೆಂಗಳೂರಿಗೆ ಬಂದು ಮತಪ್ರದರ್ಶನ ಮಾಡುವ ಸಮಯದಲ್ಲಿ ಅರೆಸ್ಟ್ ಆಗಿದ್ದಾರೆ. ಸುಮಾರು 5 ಸಾವಿರ ಜನರನ್ನು ಅರೆಸ್ಟ್ ಮಾಡಿದ್ದಾರೆ. ಇವರ ಜೊತೆಗೆ ನಮ್ಮ ಗೆಳೆಯ ಶಾಸಕರಾದಂಥ ಶ್ರೀ ಭೂಪತಿ ಅವರು ಮತ್ತು ಶ್ರೀ ಶಾನಪ್ಪನವರು ಸಹ ಅರೆಸ್ಟ್ ಆಗಿದ್ದಾರೆ. 1982ಕ್ಕೂ ಮೊದಲು ಕೆಲಸ ಮಾಡುತ್ತಿದ್ದವರನ್ನು ಶ್ರೀ ದೇವೇಗೌಡರು 300 ರೂಪಾಯಿಗಳ ಸಂಬಳದ ಮೇಲೆ ಖಾಯಂಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ 1982ರ ನಂತರ ಕೆಲಸಕ್ಕೆ ತೆಗೆದುಕೊಂಡವರನ್ನು ಮನೆಗೆ ಕಳುಹಿಸುವುದು ನ್ಯಾಯವೇ ? ಮಾನ್ಯ ದೇವೇಗೌಡರು ಎದುರಿಗೆ ಸಿಕ್ಕಿದರೆ ಸಾಕು, ಏನು ಗುರುಗಳೇ ಎಂದು ನನ್ನ ಮೈಮೇಲೆ ಕೈಹಾಕುತ್ತಾರೆ. ಇಂತಹವರ ಮಾತನ್ನು ನಂಬಿಕೊಂಡರೆ 'ಗೋವಿಂದಾ' ಆಗಬೇಕಾಗುತ್ತದೆ. ತೆಲುಗು ಗಂಗಾ ಯೋಜನೆ ಬಗ್ಗೆ ಅವರು ಮಾತನಾಡಿದ್ದನ್ನು ಕೇಳಿ ಬಹಳ ಸಂತೋಷವಾಯಿತು ಆದರೆ ಈ ಜನರ ಬಗ್ಗೆ ಏತಕ್ಕೆ ಇಂತಹ ಕ್ರಮ ತೆಗೆದುಕೊಂಡರು ? ಈ ಬಗ್ಗೆ ಅವರು ಉತ್ತರ ಕೊಡಬೇಕಾಗುತ್ತದೆ. ಅಸಂಘಟಿತ ಕಾರ್ಮಿಕರ ಬಗ್ಗೆ ಹೆಚ್ಚಿನ ಕಳವಳ ಇದೆ ಎಂದು ಇವರು ತೋರಿಸಿಕೊಳ್ಳುವುದಕ್ಕೆ ಬದಲು ಈ ಜನರಿಗೆ ಮತ್ತೆ ಕೆಲಸ ಕೊಡಬೇಕು. ಈ ಕೆಲಸ ಮಾಡುವುದಕ್ಕೆ ಬದಲು ಒಬ್ಬರನ್ನು ಇನ್ನೊಬ್ಬರ ಮೇಲೆ ಎತ್ತಿಕಟ್ಟಲು ಹೋಗಬೇಡಿ. ಏಕೆಂದರೆ, ಅಸಂಘಟಿತ ಕಾರ್ಮಿಕರು ಸಹ ಇವೊತ್ತಿನ ದಿವಸ ಸಂಘಟಿತ ಕಾರ್ಮಿಕರ ವಲಯಕ್ಕೆ ಬರುತ್ತಿದ್ದಾರೆ. ಆದ್ದರಿಂದ ಇವರಿಗೆ ತಾವು ಏನಾದರೂ ಒಂದು ವ್ಯವಸ್ಥೆ ಮಾಡಲೇಬೇಕು. ರೈತರು ಮತ್ತು ಬಡ ಜನರ ಅನುಕೂಲಕ್ಕಾಗಿ ಇಲ್ಲಿ ಕೆಲವೊಂದು ಕ್ರಮಗಳನ್ನು ಈಗಾಗಲೇ ಪ್ರಾರಂಭಿಸಿದ್ದೇವೆಂದು ಹೇಳಿದ್ದಾರೆ. ಈ ಕೆಲವೊಂದು ಕ್ರಮಗಳನ್ನು ಕೈಕೊಳ್ಳುವುದರ ಮೂಲಕ ಜನತೆಯ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ನೀವು ತಿಳಿದುಕೊಂಡಿದ್ದರೆ ಅದು ನಿಮ್ಮ ಭ್ರಮೆಯೇ ಹೊರತು ಬೇರೆ ಯಾವುದೂ ಅಲ್ಲ ಎಂದು ಹೇಳುತ್ತೇನೆ. ಬಡವರಿಗೆ 2 ರೂಪಾಯಿಗಳಿಗೆ ಒಂದು ಕೆಜಿ. ಅಕ್ಕಿ ಕೊಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಅದನ್ನು ನಾನು ಸ್ವಾಗತಮಾಡುತ್ತೇನೆ ಸೀರೆ, ಧೋತಿ, ಮಾಂಗಲ್ಯ ಮುಂತಾದುವನ್ನು ಕೊಡಿ, ನಾನು ಬೇಡ ಎಂದು ಹೇಳುವುದಿಲ್ಲ. ಏಕೆಂದರೆ, ತೀರಾ ಕೆಳದರ್ಜೆಯಲ್ಲಿರುವ ಜನರಿಗೆ ಇದರಿಂದ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದಕ್ಕೆ ನನ್ನ ವಿರೋಧ ಏನೂ ಇಲ್ಲ.

ಆಹಾರ, ಉದ್ಯೋಗ ಮತ್ತು ಉತ್ಪಾದನೆ ಇವು ಮೂರೂ ಸಾಲ್ವ್ ಆಗುವುದಿಲ್ಲ. ಮುಂದಕ್ಕಾದರೂ ಆಗುತ್ತದೆಯೇ ? ಯಾವುದೇ ಒಂದು ಯೋಜನೆ ಮಾಡಲಿ ಅದರಲ್ಲಿ ಎರಡು ವಿಧವಿದೆ : ಒಂದು ಉತ್ಪಾದನೆ, ಮತ್ತೊಂದು ಹಂಚಿಕೆ. ಹಾಲಿ ಉತ್ಪಾದನೆಯಾಗುತ್ತಿರುವುದು ಖಾಸಗಿಯವರ ಕೈಯಲ್ಲಿದೆ ಡಿಸ್ಟ್ರಿಬ್ಯೂಷನ್ ಸರ್ಕಾರ ಹೇಗೆ ನಿರ್ವಹಿಸುತ್ತಿದೆ ? ನಮ್ಮ ಸಹಾಯ ನಿಮಗೆ ಬೇಕು ತಾನೇ ? ಹಾಗಾದರೆ ಎರಡು ರೂ.ಗೊಂದು ಕೆಜಿ. ಅಕ್ಕಿ. ಸೀರೆ ಕುಪ್ಪಸ, ಉಚಿತ ಪುಸ್ತಕ ಎಲ್ಲ ಮಾಡಿಕೊಂಡು ನೀವು ಸ್ಟೇಟ್ ಎಕಾನಮಿಯನ್ನು ಮುಂದೆ ಹೋಗದಂತೆ ಮಾಡುತ್ತಿರುವಿರಲ್ಲ. ನಿಮ್ಮ ಉದ್ದೇಶಗಳು ಒಳ್ಳೆಯದಿರಬಹುದು, ಆದರೆ ಯೋಜನೆಯಿಲ್ಲದ ರಾಜ್ಯದ ಅರ್ಥ ಸ್ಥಿತಿಯನ್ನು ಯೋಚಿಸಿದ್ದೀರಾ ? ಆಹಾರ ಮತ್ತು ಉದ್ಯೋಗ ಎಂದರೇನು ಅರ್ಥ ? ಸರ್ಕಾರದವರು ಹೇಳಿದ್ದಾರೆ ''Recognised right to work as fundamental right'' Nobody has recognised the right to work as fundamental right. In fact, that has been the basic demand of all the progressive sections in the country. And you must change the constitution and the directive principles accordingly. ಬರೀ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಎಂದು ಸಾಕಷ್ಟು ದಿವಸಗಳಿಂದ ಹೋರಾಟ ಮಾಡಲಾಗುತ್ತಿದೆ, ಅದು ಬಹಳ ಒಳ್ಳೆಯ ಕೆಲಸ. ನಾವು ಯೋಜನಾಬದ್ಧವಾಗಿ ಸಾಗುತ್ತಿದ್ದೇವೆ. ಆದರೆ ಈ ಸರ್ಕಾರ ಬಂದಮೇಲೆ ಫಂಡಮೆಂಟಲ್ ರೈಟ್ಸ್ ಬಗ್ಗೆ ಕಾನೂನು ಮಾತ್ರ ಇಲ್ಲ. ಆದರೆ ಕೆಲಸ ಜಾಸ್ತಿಮಾಡುವ ವಿಷಯದಲ್ಲಿ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ ಎಂಬುದು ಮುಖ್ಯ.

ಇನ್ನು ಇಂಡಸ್ಟ್ರಿಯಲ್ ಪಾಲಿಸಿ. Tiny Sector ಸ್ಮಾಲ್ ಸೆಕ್ಟರ್ ಎಂದು ಏನು ನೀವು ಕರೆದುಕೊಳ್ಳುತ್ತೀರೋ ಇದರಿಂದೆಲ್ಲ ಏನೂ ಉಪಯೋಗವಾಗದು. ನೀವು ಬಿಗುವು ಮತ್ತು ಕಾರ್ಯವಿಧಾನದಲ್ಲಿ ಚುರುಕುತನ ತೋರದಿದ್ದರೆ ಇನ್ನೂ ತೀವ್ರವಾದ ಆರ್ಥಿಕ ಬಿಕ್ಕಟ್ಟುಗಳಿಗೆ ಸಿಕ್ಕಿಕೊಳ್ಳುತ್ತೀರಿ.

ಇನ್ನು ಕೇಂದ್ರ ಸರ್ಕಾರದ ಜವಳಿ ನೀತಿ ಬಗ್ಗೆ ಹೇಳುವುದಾದರೆ ಈ ಕಾನೂನನ್ನು ತೀವ್ರವಾಗಿ ಟೀಕೆ ಮಾಡಿದ್ದಾರೆ. ಇದರಲ್ಲಿ ಏನು ಹೇಳಿದ್ದಾರೆಂದರೆ ಸಣ್ಣ ಕೈಗಾರಿಕೆಗಳ ಮತ್ತು ಪುಟಾಣಿ ಕೈಗಾರಿಕೆ

ಗಳ ಅಭಿವೃದ್ಧಿ. ಕೈಮಗ್ಗದ ನೌಕರರಿಗೆ ಅನುಕೂಲವಾಗಬೇಕು. ಇದರಿಂದ ಗ್ರಾಮೀಣ ನಿರುದ್ಯೋಗ ನಿವಾರಣೆಯಾಗಬೇಕು. ಹೇಗೆ? Govt, of India Textile Policy is a total surrender to the textile magnets of our country. ಹೇಗೆ ಇದನ್ನು ಸೇರಿಸಿದರೋ ಗೊತ್ತಿಲ್ಲ. ತೋರಿಕೆಗೆ ಬಹಳ ಚೆನ್ನಾಗಿ ಕಾಣುತ್ತದೆ. ನನ್ನ ಅನುಭವದಲ್ಲಿ ಜವಳಿ ನೀತಿ ಬಗ್ಗೆ ಟೀಕಿಸಿರುವುದು ಸ್ವಾಗತಾರ್ಹ.

ಬೇಕಾದಷ್ಟು ರಿಯಾಯ್ತಿಗಳನ್ನು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಕೊಟ್ಟಿದ್ದಾರೆ, ಎರಡನೆಯದು ಅವರ ಮೇಲೆ ಹೊಣೆ ಇಲ್ಲ. ರಿಸ್ಟ್ರಿಕ್ಷನ್ಸ್ ತೆಗೆದುಬಿಟ್ಟಿದ್ದಾರೆ. ಕಡಿಮೆ ಬೆಲೆಯಲ್ಲಿ ಕ್ರಾಪ್ ತೆಗೆಯ ಬೇಕಾದಂಥ ಪ್ರಮೇಯ ಇಲ್ಲ. ಯಾವುದು ಲಾಭ ತರುವಂಥದೋ ಅಂಥದನ್ನು ಮಾತ್ರ ಮಾಡಿದ್ದಾರೆ. ಕಡಿಮೆ ಬೆಲೆಯಲ್ಲಿ ಬಡ ಜನರಿಗೆ ಕೊಡಲು ತಯಾರಿಲ್ಲ.

ನಾಲ್ಕನೇದಾಗಿ ಕಂಪ್ಯೂಟರ್ ಬಗ್ಗೆ ಮಾತಾಡಿದ್ದಾರೆ. ಅದು ಒಳ್ಳೆಯ ಪದ್ಧತಿ ಎಂದು ಹೇಳಿದ್ದಾರೆ. ಟೆಕ್ಸ್‌ಟೈಲ್ ನೀತಿಯಿಂದಾಗಿ ಮತ್ತು ಇಂಡಸ್ಟ್ರಿಗಳಲ್ಲೆಲ್ಲ ಕಂಪ್ಯೂಟರ್ ಬಂದಮೇಲೆ ಸಾವಿರಾರು ಜನರನ್ನು ನಿರುದ್ಯೋಗಕ್ಕೆ ತಳ್ಳಿದ್ದಾರೆ. ಆಂಧ್ರದಲ್ಲಿ 15 ಮಿಲ್ಸ್ ಇನ್ನೂ ತೆಗೆದಿಲ್ಲ. 35 ಸಾವಿರ ಕಾರ್ಮಿಕರಿಗೆ ಕೆಲಸವಿಲ್ಲದೆ ಹೋಗಿದೆ. ಈ ಮಾಡ್ರನೈಸೇಷನ್ ಮತ್ತು ಕಂಪ್ಯೂಟರೈಸೇಷನ್ ಗಳನ್ನು ಮಾತ್ರ ನಾನು ವಿರೋಧಮಾಡುತ್ತೇನೆ. ಇದು ನನ್ನ ಖಂಡಿತ ನಿಲುವು.

ಹ್ಯಾಂಡ್‌ಲೂಂ ಬಗ್ಗೆ ಹೇಳಿದ್ದಾರೆ. ಅದು ಅಭಿವೃದ್ಧಿಯಾಗಬೇಕಾದರೆ ಹ್ಯಾಂಡ್‌ಲೂಂ ಮಾರು ಕಟ್ಟೆ ಮಾಡಬೇಕು. ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು. ಈ ದಿಸೆಯಲ್ಲಿ ಅನುಕೂಲದ ಕಲ್ಪನೆ ಅಸಾಧ್ಯವಾಗಿದೆಯಲ್ಲ. ಏಕೆಂದರೆ ಟೆಕ್ಸ್‌ಟೈಲ್ ಮಿಲ್‌ಗಳು ದೊಡ್ಡ ಶ್ರೀಮಂತರಿಗೆ ಸೇರುವುದರಿಂದ ಅಲ್ಲಿ ಸುಧಾರಣೆ ಆಗುವುದಿಲ್ಲ. ಕ್ರೈಸಿಸ್ ಆಫ್ಟರ್ ಕ್ರೈಸಿಸ್ ಬರುತ್ತವೆ. ಇದಕ್ಕೆಲ್ಲ ಒಂದು ದಾರಿ ಏನು ಎಂದರೆ ನ್ಯಾಷನಲೈಜೇಷನ್ ಆಫ್ ಟೆಕ್ಸ್‌ಟೈಲ್ ಇಂಡಸ್ಟ್ರಿ. ನನಗೆ ಗೊತ್ತು ನೀವು ಮಾಡುವುದಕ್ಕಾಗುವುದಿಲ್ಲ. ಆದರೆ ಧೈರ್ಯವಿದ್ದರೆ, ಎದೆಗಾರಿಕೆಯಿದ್ದರೆ ಆ ದಾರಿಯಲ್ಲಿ ಹೋದರೆ ಖಂಡಿತ ಬೆಂಬಲ ಸಿಗುತ್ತದೆ.

ಇನ್ನೊಂದು ಮಾತು. ನಷ್ಟದಲ್ಲಿರುವಂಥ ಇಂಡಸ್ಟ್ರಿಗಳನ್ನು ಟಾಟಾ, ಬಿರ್ಲಾ, ಮಫತಲಾಲ್ ಗಳಿಗೆ ಮಾರಿಕೊಂಡುಬಿಡುತ್ತೇವೆ ಎಂಬ ಅಭಿಪ್ರಾಯವನ್ನು ಸಮಾಜವಾದಿಯಾಗಿದ್ದ ಪಟೇಲರಂಥವರು ಹೇಳುತ್ತಿದ್ದಾರಲ್ಲ, ಏನು ಸ್ವಾಮಿ ಇದು? ಪ್ರಾಗ್ಮಟಿಕ್ ಎಂದು ಹೇಳುತ್ತಾರೆ. ನಾನು ಅದನ್ನು ಒಪ್ಪುವುದಿಲ್ಲ. ನಷ್ಟವಿರಬಹುದು, ಆದರೆ ಅದಕ್ಕೆ ಕಾರಣ ಕಾರ್ಮಿಕರಲ್ಲ. ಬೇರೆ ಕಾರಣಗಳಿವೆ. ಇವತ್ತು ನಾವು ಪಬ್ಲಿಕ್ ಸೆಕ್ಟರ್ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಅವಲೋಕಿಸೋಣ. ಇನ್ನೊಂದು ದಿವಸ ಆ ಚರ್ಚೆಯನ್ನು ದೀರ್ಘವಾಗಿ ವಿಶ್ಲೇಷಣೆ ಮಾಡುತ್ತೇನೆ. ಟೆಕ್ಸ್‌ಟೈಲ್ ಇಂಡಸ್ಟ್ರಿಯನ್ನು ನ್ಯಾಷನಲೈಸ್ ಮಾಡದೇ ಹೋದಲ್ಲಿ ಇದೆಲ್ಲ ಸಾಧ್ಯವಾಗುವುದಿಲ್ಲ.

ಆಹಾರದ ಬಗ್ಗೆ ಮಾತನಾಡಿದ್ದಾರೆ. ಕೇಂದ್ರ ಎಷ್ಟು ಆಹಾರ ಕೊಡಬೇಕೋ ಅಷ್ಟು ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಕೇಂದ್ರದ ಆಹಾರ ನೀತಿಯ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಆದರೆ ಮೂಲಭೂತವಾಗಿ ನೋಡಿದರೆ ಫುಡ್, ಪ್ರೊಡಕ್ಷನ್ ಮುಖ್ಯವಾದುದು.

4-30 p.m.

ದೇಶದಲ್ಲಿ ಭೂ ಸುಧಾರಣೆಯನ್ನು ಜಾರಿಗೆ ತಂದು, ಅದನ್ನು ಸರಿಯಾದ ಸ್ಟಡೀಮಾಡಿ ಅದರ ಆಧಾರದ ಮೇಲೆ ಮುಂದಿನ ಸ್ಟೆಪ್ಸ್ ತೆಗೆದುಕೊಂಡರೆ, ಆಗ ಮಾತ್ರ ಆಹಾರಧಾನ್ಯಗಳನ್ನು ಇನ್ನೂ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಪ್ಲಾನಿಂಗ್ ಕಮಿಷನರ್‌ರವರು ಒಪ್ಪಿಕೊಂಡಿದ್ದಾರೆ. ಅದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಮ್ಮ ರಾಜ್ಯದಲ್ಲಿ ಭೂ ಸುಧಾರಣಾ ಮಸೂದೆ ಬಂದಿದೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇವತ್ತು ಭೂಸುಧಾರಣಾ ಮಸೂದೆ ಬಂದಿದ್ದರೂ ಸಹ, ಸರ್‌ಪ್ಲಸ್ ಲ್ಯಾಂಡನ್ನು ಎಷ್ಟು ಜನಕ್ಕೆ ಕೊಟ್ಟಿದ್ದೀರಿ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಗೇಣಿದಾರರಿಗೆ ಅನುಕೂಲವಾಗಿದೆ. ಸರ್‌ಪ್ಲಸ್ ಲ್ಯಾಂಡನ್ನು ಎಷ್ಟು ಜನಕ್ಕೆ ಹಂಚಿದ್ದೀರಿ, ಐಡೆಂಟಿಫೈ ಎಷ್ಟು ಮಾಡಿದ್ದೀರಿ. ನಮಗೆ ತಿಳಿದು ಬಂದಿರುವ ಹಾಗೆ ಸರ್‌ಪ್ಲಸ್ ಲ್ಯಾಂಡ್ ನಾಲ್ಕೂವರೆ ಲಕ್ಷ ಇದೆಯೆಂದು ಅದರಲ್ಲಿ 4 ಸಾವಿರ ಎಕರೆ ಲ್ಯಾಂಡನ್ನು ಹಂಚಿದ್ದೇವೆಂದು ಒಂದು ಸಂದರ್ಭದಲ್ಲಿ ಹೇಳಿದರು. ಆದರೆ ಇದರಲ್ಲಿ ಚಕಾರವೇ ಎತ್ತಿಲ್ಲ. ಹೀಗಿರಬೇಕಾದರೆ, ಆಹಾರದ ಬಗ್ಗೆ ಮಾತಾಡಿ ಏನು ಪ್ರಯೋಜನ. ಮೊದಲು ಸರ್‌ಪ್ಲಸ್ ಲ್ಯಾಂಡನ್ನು ಐಡೆಂಟಿಫೈ ಮಾಡಬೇಕು. ಅದನ್ನು ಹಂಚಬೇಕು. ಅಗ್ರಿಕಲ್ಚರಲ್

ಪ್ರೈಸನ್ನು, ಪ್ರೊಡ್ಯೂಸರ್ಸ್ ಯಾರಿದ್ದಾರೆ, ಅವರಿಗೆ ಸರಿಯಾದಂತಹ ರೀತಿಯಲ್ಲಿ ಕೊಡಬೇಕು. ತಮಗೆ ಇದರ ಬಗ್ಗೆ ಯೋಚನೆಯಿಲ್ಲವೆಂದು ಹೇಳುವುದಿಲ್ಲ. ಅದರಲ್ಲೂ ಕೂಡ ಬಹಳಷ್ಟು ಹಿಂದೆ ಬಿದ್ದಿದ್ದೀರಿ ಅದನ್ನು ಸರಿಯಾಗಿ ಮಾಡಬೇಕು. ಇನ್ನು ಕೃಷಿ ಕಾರ್ಮಿಕರಿಗೆ ಅನುಕೂಲ ಮಾಡಿಕೊಟ್ಟಿಲ್ಲ. ಅದನ್ನು ಮಾಡಿಕೊಡಬೇಕು. Now, I am referring to background papers written for THE ECONOMIC AND PLANNING COUNCIL FOR KARNATAKA-Page 110. It says as follows :

"Karnataka is one of the states where land reforms, particularly tenancy reforms, has been implemented effectively. However, we are not every sure whether surplus land distribution is successful. In the case of tenancy reforms, the effect has been nothing more than conversion of defacto ownership to dejure ownership. This has, perhaps, not contributed significantly to increasing the incomes of those who are below poverty line. Therefore, land reforms without successfully distributing surplus land will not have the impact that was envisaged by the policy makers Because of the option available to the land owner regarding the choice of land to be surrendered, in most of the cases, the surplus lands distributed have been very bad quality lands and have not been brought under cultivation by the beneficiary. In some cases where the grantee is willing to bring the land under cultivation he is deprived of credit and other facilities There is a scheme which is currently in operation under which Central Assistance is provided at the rate of Rs. 1000 per hectare to surplus land grantees. The implementation of this scheme has not been effective as is evident from the figures of 1975 to 1983-84. As things stand today, there appears little hope of changing the land reforms scenario considerably in the next few years."

ಈ ಬಜೆಟ್ಟಿನಲ್ಲಿ ಕೆಲವು ಸ್ವಾಗತಾರ್ಹ ಅಂಶಗಳೂ ಇವೆ. ಇಲ್ಲಿಯವರೆಗೆ ಬೇವಿನ ವಿಷಯವನ್ನು ಹೇಳಿದೆ. ಇದರಲ್ಲಿ ಸ್ವಲ್ಪ ಬೆಲ್ಲವೂ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಕನ್ನಡ ಅಂಡ್ ಕಲ್ಚರ್ ಬಗ್ಗೆ ಬಜೆಟ್ಟಿನಲ್ಲಿ ಏನು ಅಲೊಕೇಷನ್ ಮಾಡಿದ್ದಾರೆ ಅದು ಬಹಳ ಕಡಿಮೆ, ಕನ್ನಡದ ಬಗ್ಗೆ ಶ್ರೀ ಜಿ. ನಾರಾಯಣ್‌ಕುಮಾರ್‌ರವರು ಜಾಸ್ತಿ ಮಾತನಾಡುತ್ತಾರೆ ಈ ಅಲೋಕೇಷನ್ ಬಗ್ಗೆ ಏತಕ್ಕೆ ಮಾತನಾಡುವುದಿಲ್ಲ. ಕನ್ನಡ ಅಂಡ್ ಕಲ್ಚರ್‌ಗೆ 75 ಲಕ್ಷದಿಂದ 1 ಕೋಟಿವರೆಗೆ ಕೊಟ್ಟಿದ್ದೀರಿ. What is provided is very little........ ....ಈಗ ವಿಶ್ವ ಕನ್ನಡ ಸಮ್ಮೇಳನವನ್ನು ಮಾಡಬೇಕೆಂದು ಯೋಜನೆ ಮಾಡಿದ್ದೀರಿ. ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ಹಿಂದೆ, ಈ ಸಮ್ಮೇಳನಕ್ಕೆ 6 ಕೋಟಿ ಖರ್ಚಾಗುತ್ತದೆಂದು ಹೇಳಿದ್ದೀರಿ. ಈಗ ಇನ್ನು ಎಷ್ಟು ಖರ್ಚಾಗುತ್ತದೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಬರಗಾಲ ಪರಿಸ್ಥಿತಿ ಇರಬೇಕಾದರೆ ಮತ್ತು ಕ್ಷಾಮದ ಪರಿಸ್ಥಿತಿ ಇರಬೇಕಾದರೆ, ಇಂತಹ ಕಾರ್ಯಕ್ರಮಗಳು ಅವಶ್ಯಕವೇ ಎಂದು ಯೋಚನೆ ಮಾಡಿ ಪಬ್ಲಿಸಿಟಿ ಗೋಸ್ಕರ ಮಾಡುತ್ತೇವೆಂದರೆ, ಅದು ಬೇರೆ ಸಮಾಚಾರ. ಗುಲ್ಬರ್ಗ ಯುನಿವರ್ಸಿಟಿಯ ವೈಸ್ ಛಾನ್ಸಲರ್ ಆಗಿರುವ ಶ್ರೀ ಹಾ. ಮಾ. ನಾಯಕ್‌ರವರು ನಿನ್ನೆ ಒಂದು ಮಾತನ್ನು ಹೇಳಿದ್ದಾರೆ. 500 ಪುಸ್ತಕಗಳನ್ನು ಗ್ರಂಥಾಲಯದವರು ತೆಗೆದುಕೊಳ್ಳುವಂತಹ ಒಂದು ಸ್ಕೀಮನ್ನು ಈಗ ನಿಲ್ಲಿಸಿದ್ದಾರೆ. ಪಬ್ಲಿಕೇಷನ್ ಮಾಡುತ್ತಿಲ್ಲವೆಂದು ಪರಿಸ್ಥಿತಿ ಬಹಳ ಕ್ರಿಟಿಕಲ್ ಆಗಿದೆ ಎಂದು ಮಾತನಾಡಿದ್ದಾರೆ. ಸರ್ಕಾರ ಅದನ್ನು ಗಮನಕ್ಕೆ ಗೆತೆದುಕೊಂಡು ಕಾರ್ಯಗತ ಮಾಡಬೇಕು. ಇನ್ನು ಕಾವೇರಿ 3ನೇ ಯೋಜನೆಯನ್ನು ಜಾರಿಗೆ ತರಬೇಕೆಂದು ಹೇಳಿದ್ದೀರಿ. ಅದು ಬಹಳ ಒಳ್ಳೆಯದು. ಕಾವೇರಿ 4ನೇ ಯೋಜನೆಯನ್ನು ಈಗಿನಿಂದಲೇ ಮಾಡುವ ಬಗ್ಗೆ ಯೋಚನೆ ಮಾಡಬೇಕು. 3ನೇ ಯೋಜನೆಯಿಂದ ಬೆಂಗಳೂರಿಗೆ ಪೂರ್ತಿಯಾಗಿ ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ, 4ನೇ ಯೋಜನೆಯನ್ನು ಮಾಡಬೇಕೆಂದು ಎಲ್ಲರೂ ಹೇಳುತ್ತಾರೆ. ಬೆಂಗಳೂರು ಜಲಮಂಡಲಿ ಅಧ್ಯಕ್ಷರು ಹೇಳಿದ್ದಾರೆ. ನಗರಾಭಿವೃದ್ಧಿ

ಸಚಿವರಾದ ಮಾನ್ಯ ಲಕ್ಷ್ಮೀಸಾಗರ್‌ರವರು ಇದರ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ. ಯೋಚನೆ ಮಾಡೋಣವೆಂದು ಹೇಳಿದ್ದಾರೆ. ಈಗಲಾದರೂ ಸ್ಪಷ್ಟವಾಗಿ ಹೇಳಲಿ, ಇನ್ನು ಮೈನಾರಿಟೀಸ್ ಡೆವಲಪ್‌ಮೆಂಟ್ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಸಂಕ್ಷಿಪ್ತವಾಗಿ ಹೇಳುತ್ತೇನೆ. ಗುಂಡೂರಾವ್ ವರದಿ ಬಂದಿದೆ. ಅದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಮೈನಾರಿಟೀಸ್ ಬಗ್ಗೆ ನಿಮಗೆ ಕಾಳಜಿ ಕಳವಳ ಇದೆಯೆಂದು ನಾನು ಅಂದುಕೊಂಡಿದ್ದೇನೆ. ಇನ್ನು ಕನ್ನಡ ಸಿನಿಮಾದ ಬಗ್ಗೆ ತಾವು ಮಾಡಿರುವುದು ಒಳ್ಳೆಯ ಅಂಶ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸರ್ಕಾರಿ ನೌಕರರಿಗೆ ಇಂಟೀರಿಯಮ್ ರಿಲೀಫ್ ಎಂದು ಕೊಟ್ಟಿದ್ದೀರಿ ಮತ್ತು ಪೇ ಕಮಿಷನ್ ಮಾಡಿದ್ದೀರಿ. ಇದೆಲ್ಲ ಬಹಳ ಒಳ್ಳೆಯದು. ಅವರಿಗೆ ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟ್ ಕೊಡುವುದು ಸರಿಯಲ್ಲ. ನ್ಯಾಯವಾದುದಲ್ಲ, ಏಕೆಂದರೆ, ಬೆಂಗಳೂರು ಸಿಟಿ ಕಾಸ್ಟ್ಲಿಯೆಸ್ಟ್ ಸಿಟಿ ಆಗಿದೆ. ಇಲ್ಲಿ ಬೆಲೆಗಳು ಜಾಸ್ತಿಯಾಗುತ್ತಿದೆ, ಇಂತಹ ಕಾಲದಲ್ಲಿ ಅವರಿಗೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡದೆ, ಕ್ಯಾಶ್‌ನಲ್ಲಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಸೇಲ್ಸ್ ಟ್ಯಾಕ್ಸ್ ಬಗ್ಗೆ ಮಾನ್ಯ ಕಡಪಟ್ಟಿಯವರು ಮಾತನಾಡಿದ್ದಾರೆ ಅದು ಸ್ವಾಗತಾರ್ಹ. ಇದರ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ, ಮಲ್ಟಿ ಪಾಯಿಂಟ್‌ನಿಂದ ಸಿಂಗಲ್ ಪಾಯಿಂಟ್ ಮಾಡಬೇಕೆಂದು ಏನಿದೆ, ಅದು ಬಹಳ ಒಳ್ಳೆಯದು. ಸಿಂಗಲ್ ಪಾಯಿಂಟ್ ಮಾಡಿದಾಕ್ಷಣ ಜನಗಳ ಮೇಲೆ ಹೊರೆ ಬೀಳುವುದಿಲ್ಲವೇ ? ಹೊರೆ ಬೀಳುತ್ತದೆ. ಅನೆಕ್ಸರ್ 4, 5, 6ರಲ್ಲಿ ಅನೇಕ ಅಂಶಗಳು ಹೊರೆ ಜಾಸ್ತಿ ಬೀಳುವಂತಿದೆ. ಅದರಲ್ಲಿ ಕೆಲವನ್ನು ಇಲ್ಲಿ ವಿಶ್ಲೇಷಣೆ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ರೀಫೈಂಡ್ ಇಡಿಬಲ್ ಆಯಿಲ್ 4 ರಿಂದ 6 ಚೀಸ್ 6ರಿಂದ 12 ಮತ್ತು ಲಿಕ್ಕರ್, ಬ್ರ್ಯಾಂಡಿ, ವೈನ್ ಮತ್ತು ಬೀರ್. ಇವೆಲ್ಲಕ್ಕೂ ಹೊರೆ ಹೆಚ್ಚಾಗಿದೆ. At what point single point tax should be levied ? Should it be at the production point or at the consumption point ?......................ಆರ್ಥಿಕ ತಜ್ಞರಾದ ಡಾ|| ತಿಮ್ಮಯ್ಯನವರು, ಸೇಲ್ಸ್ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದಾರೆ. He is from the Indian Institute of management. He says it must be at the consumption point because you would not be conflicting with the customs duty of the centre. ಮತ್ತು ಹುಣಿಸೆಹಣ್ಣಿಗೂ ಟ್ಯಾಕ್ಸನ್ನು ಹೆಚ್ಚಿಗೆ ಹಾಕಿದ್ದೀರಿ. ಇನ್ನು ವೆಹಿಕಲ್ ಟ್ಯಾಕ್ಸ್ ಅಂತೂ ಜಾಸ್ತಿ ಮಾಡಿದ್ದಾರೆ ಟೂರಿಸ್ಟ್ ಬಸ್ ಇಟ್ಟುಕೊಂಡಿರುವವರಿಗೆ ಒಂದು ಸೀಟಿಗೆ ವರ್ಷಕ್ಕೆ 250 ರೂಪಾಯಿಗಳಿಂದ 500 ರೂಪಾಯಿಗಳಿಗೆ ಏರಿಸಿದ್ದಾರೆ, ಇದು ಬಹಳ ದುಬಾರಿಯಾಗುತ್ತದೆ. ಒಂದು ಬಸ್‌ನಲ್ಲಿ 50 ಸೀಟುಗಳು ಇರುತ್ತವೆ, ಒಂದು ಸೀಟಿಗೆ 500 ರೂಪಾಯಿಗಳನ್ನು ಕೊಡಬೇಕಾದರೆ ವರ್ಷಕ್ಕೆ 25 ಸಾವಿರ ರೂಪಾಯಿಗಳನ್ನು ಅವರು ಟ್ಯಾಕ್ಸ್ ರೂಪದಲ್ಲಿ ಕೊಡಬೇಕಾಗುತ್ತದೆ. ಇದರಿಂದ ಅವರು ಬಸ್‌ಗಳನ್ನೇ ಓಡಿಸುವುದನ್ನು ನಿಲ್ಲಿಸಬೇಕಾಗುತ್ತದೆ. ಈ ಬಡ್ಜೆಟ್‌ನಲ್ಲಿ ಕೆಲವು ಒಳ್ಳೆಯ ರೀತಿಯ ಟ್ಯಾಕ್ಸ್‌ಗಳನ್ನು ಹಾಕಿದ್ದಾರೆ, ಒಟ್ಟಾರೆ ಹೇಳುವುದಾದರೆ ಜನರಿಗೆ ಟ್ಯಾಕ್ಸ್ ಬರ್ಡನ್ ಜಾಸ್ತಿಯಾಗಿದೆ, ಇದರಿಂದ ಖಂಡಿತ ಬೆಲೆಗಳು ಜಾಸ್ತಿಯಾಗುತ್ತವೆ, ಈ ರೀತಿ ಟ್ಯಾಕ್ಸ್ ಹಾಕಿರುವುದರಿಂದ ಸರ್ಕಾರಕ್ಕೆ 50 ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆಂದು ಹೇಳಿದ್ದಾರೆ, ನನಗೆ ತಿಳಿದ ಮಟ್ಟಿಗೆ ಈ ಟ್ಯಾಕ್ಸ್‌ನಿಂದ ಸರ್ಕಾರಕ್ಕೆ 100 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಆದಾಯ ಬರುತ್ತದೆ. ಈ ಟ್ಯಾಕ್ಸಿನ ಹೊರೆ ಸಾಮಾನ್ಯ ಜನಗಳ ಮೇಲೆ ಬೀಳುತ್ತದೆ. ಆದುದರಿಂದ ಇದನ್ನು ಸರ್ಕಾರವು ರಿವೈಸ್ ಮಾಡಿ ಸರಿಯಾದ ರೀತಿಯಲ್ಲಿ ಟ್ಯಾಕ್ಸ್‌ಗಳನ್ನು ಕಡಿಮೆ ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಬಡ್ಜೆಟ್ಟಿನಲ್ಲಿ ವೀಕರ್ ಸೆಕ್ಷನ್ ಜನಗಳಿಗೆ ಬಹಳ ಅನುಕೂಲ ಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ. ಹೇಳಿದರೆ ಸಾಲದು ಅದನ್ನು 20 ಅಂಶಗಳ ಕಾರ್ಯಕ್ರಮದಲ್ಲಿ ಅಳವಡಿಸಿ ಜನರ ಕಲ್ಯಾಣವನ್ನು ಮಾಡಬೇಕು. ಒಟ್ಟಿನಲ್ಲಿ ಈ ಬಡ್ಜೆಟ್ ಬೇವು ಬೆಲ್ಲದ ರೀತಿಯ ಬಡ್ಜೆಟ್ ಎಂದು ನಾನು ಆಗಲೇ ಹೇಳಿದ್ದೇನೆ, ಅದನ್ನು ಚೌ, ಚೌ ಬಡ್ಜೆಟ್ ಎಂದೂ ಕರೆಯಬಹುದು ಎಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ, ಅನೇಕ ಜನ ಮಾನ್ಯ ಸದಸ್ಯರು ಸದನದಲ್ಲಿ ಈ ವರ್ಷದ ರಾಜ್ಯದ ಆಯವ್ಯಯ ಪಟ್ಟಿಯ ಮೇಲೆ ಈಗಾಗಲೇ ಮಾತನಾಡಿದ್ದಾರೆ. 1985-86ರ ರಾಜ್ಯದ ಆಯವ್ಯಯಪಟ್ಟಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಅತ್ಯಂತ ಜಾಣ್ಮೆಯಿಂದ ಈ ಆಯವ್ಯಯ ಪಟ್ಟಿಯನ್ನು ತಯಾರಿಸಿದ್ದಾರೆ. ಈ ಆಯವ್ಯಯ ಪಟ್ಟಿಯು ಸರ್ಕಾರದ ರೀತಿ ನಿಯಮಗಳು ಹಾಗೂ ಪ್ರಸ್ತುತ ವರ್ಷದ ಯೋಜನೆಯ ರೂಪುರೇಖೆಗಳನ್ನು ವಿಶ್ಲೇಷಣಾ ರೀತಿಯಲ್ಲಿ ನಮ್ಮ ಮುಂದಿಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಈ ವರ್ಷ ಕೂಡ ಭೀಕರವಾಗಿದೆ. ಕಳೆದ

ಎರಡುವರೆ ವರ್ಷಗಳಲ್ಲಿ ಸುಮಾರು 170 ಕೋಟಿ ರೂಪಾಯಿಗಳಷ್ಟು ಹಣವನ್ನು ಕ್ಷಾಮನಿವಾರಣಾ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾಯಿತು. ಆದರೆ ಕೇಂದ್ರದಿಂದ ದೊರೆತ ಹಣ ಕೇವಲ 40 ಕೋಟಿ ರೂಪಾಯಿಗಳು ಮಾತ್ರ. ಈ ವರ್ಷವಾದರೂ ಕೇಂದ್ರ ಸರ್ಕಾರದವರು ರಾಜ್ಯದ ಸಹಾಯಕ್ಕೆ ಬಂದು ಹೆಚ್ಚು ಹಣವನ್ನು ಕೊಡುವುದು ಅನಿವಾರ್ಯ. ಕ್ಷಾಮವು ಪದೇ ಪದೇ ನಮ್ಮ ರಾಜ್ಯದಲ್ಲಿ ಉಂಟಾಗುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಕ್ಷಾಮ ಪರಿಸ್ಥಿತಿಯನ್ನು ಶಾಶ್ವತವಾಗಿ ಎದುರಿಸಲು ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ. ಏಕೆಂದರೆ ಇಡೀ ರಾಜ್ಯದಲ್ಲಿ ನನ್ನ ಕ್ಷೇತ್ರವು ಕ್ಷಾಮದ ದವಡೆಗೆ ಸಿಕ್ಕಿ ಹೆಚ್ಚಾಗಿ ನರಳುತ್ತಿದೆ. ಕ್ಷಾಮಪೀಡಿತ ಪ್ರದೇಶಗಳಲ್ಲಿ ಈಗಾಗಲೇ ಸರ್ಕಾರವು ಕುಡಿಯುವ ನೀರು, ದನಗಳಿಗೆ ಮೇವು, ಜನಗಳಿಗೆ ಆಹಾರ ಮತ್ತು ಉದ್ಯೋಗವನ್ನು ಕಲ್ಪಿಸಿಕೊಡತಕ್ಕಂಥ ವ್ಯವಸ್ಥೆ ಮಾಡಿದೆ ಮತ್ತು ಇದರ ಬಗ್ಗೆ ವ್ಯಾಪಕ ಕಾರ್ಯಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರ ಕಾರ್ಯತತ್ಪರವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇನ್ನು 7ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯದಲ್ಲಿ 5,500 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದ್ದರು. ರಾಷ್ಟ್ರೀಯ ಯೋಜನಾ ಆಯೋಗದವರು 3,500 ಕೋಟಿ ರೂಪಾಯಿಗಳ ವೆಚ್ಚಕ್ಕೆ ಮಾತ್ರ ಅನುಮತಿ ನೀಡಿದೆ. ಒಂದು ವೇಳೆ ರಾಷ್ಟ್ರೀಯ ಯೋಜನಾ ಆಯೋಗವು ತನ್ನ ನಿಲುವನ್ನು ಬದಲಾಯಿಸದಿದ್ದರೆ ರಾಜ್ಯದ 7ನೇ ಪಂಚವಾರ್ಷಿಕ ಯೋಜನೆಯ ಗಾತ್ರ ಕಡಿಮೆಯಾಗಿ ರಾಜ್ಯದ ಆರ್ಥಿಕಾಭಿವೃದ್ಧಿ ಕುಂಠಿತವಾಗುವುದು. ಈ ವಿಚಾರವನ್ನು ಸದನವು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕೆಂದು ವಿನಂತಿಸುತ್ತೇನೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಕಳೆದ ಎರಡುವರೆ ವರ್ಷಗಳಿಂದ ಕಷ್ಟದ ಪರಿಸ್ಥಿತಿಯಲ್ಲಿಯೇ ಇದೆ. ಇತ್ತೀಚಿಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಓವರ್ ಡ್ರಾಫ್ಟನ್ನು ನಿಲ್ಲಿಸಿರುವುದರಿಂದ ಹಣಕಾಸಿನ ಪರಿಸ್ಥಿತಿ ಮತ್ತಷ್ಟು ಭೀಕರ ಸ್ವರೂಪವನ್ನು ತಾಳಿದೆ. ಹಾಲಿ ಕೊಡಬೇಕಾಗಿರುವ 221 ಕೋಟಿ ರೂಪಾಯಿಗಳಷ್ಟು ಓವರ್ ಡ್ರಾಫ್ಟ್ ಕೇಂದ್ರ ಸರ್ಕಾರದಿಂದ ಸಾಲ ಪಡೆದು ತೀರಿಸಬೇಕಾಗಿದೆ. ಈ ಸಾಲವನ್ನು 4 ವರ್ಷಗಳಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಪಾವತಿ ಮಾಡಬೇಕಾಗಿದೆ. ಇದು ಕಷ್ಟದ ವಿಚಾರ. ಸನ್ಮಾನ್ಯ ಮುಖ್ಯ ಮಂತ್ರಿಗಳು ಅದಕ್ಕಾಗಿ 15 ವರ್ಷಗಳ ಕಾಲವನ್ನು ಕೋರಿದ್ದಾರೆ. ಕಡೇಪಕ್ಷ 10–12 ವರ್ಷಗಳಾದರೂ ಕೊಡುವುದು ಸೂಕ್ತ. ಪ್ರಧಾನ ಮಂತ್ರಿಗಳು ಬಹಳ ಆಶಾವಾದಿಗಳಾಗಿದ್ದು ಎಲೆಕ್ಟ್ರಾನಿಕ್ಸ್ ಯುಗದ ಕನಸನ್ನು ಕಾಣುತ್ತಿದ್ದಾರೆ. ಆದ್ದರಿಂದ ಕಡುಬಡತನದ ಭಾಗದಲ್ಲಿ, ನಿರುದ್ಯೋಗದ ವಿಚಾರದಲ್ಲಿ, ಅನಕ್ಷರತೆಯ ಅಂಧಕಾರದಲ್ಲಿ ಬಳಲುತ್ತಿರುವ ಜನತೆಯು 19ನೇ ಶತಮಾನದಲ್ಲಿ ಇದ್ದು, 21ನೇ ಶತಮಾನದ ಕಂಪ್ಯೂಟರ್ ಯುಗಕ್ಕೆ ಹೊಂದಿಕೊಳ್ಳುವುದು ಕಷ್ಟಕರ ಪರಿಸ್ಥಿತಿ ಎಂಬ ವಿಚಾರವನ್ನು ತಮ್ಮ ಬಜೆಟ್‌ನಲ್ಲಿ ಮುಖ್ಯ ಮಂತ್ರಿಗಳು ವೈಜ್ಞಾನಿಕವಾಗಿ ಹೇಳಿದ್ದಾರೆ ಆದ್ದರಿಂದ ಬಡ ರಾಷ್ಟ್ರಕ್ಕೆ ಹೊಂದಿಕೊಳ್ಳುವ ಗಾಂಧಿ ಮಾರ್ಗದ ಆರ್ಥಿಕಾಭಿವೃದ್ಧಿ ಅಲ್ಲದೇ ಬೇರೆ ಮಾರ್ಗವೇ ನಮಗೆ ಇಲ್ಲ. ಬಡ ರಾಷ್ಟ್ರವಾದ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಖಾಸಗಿ ಕ್ಷೇತ್ರ ಮತ್ತು ಸರ್ಕಾರಿ ಕ್ಷೇತ್ರ ಸಫಲವಾಗದೇ ಇರುವ ಕಾರಣ ಮಾನ್ಯ ಮುಖ್ಯ ಮಂತ್ರಿಗಳು ತಮ್ಮದೇ ಆದ ಹೊಸ ಶೈಲಿಯ, ಹಾಗೂ ಪ್ರಸ್ತುತ ಸಂದರ್ಭಕ್ಕೆ, ಪರಿಣಾಮಕಾರಿಯಾಗಿ ಹೊಂದಿಕೊಂಡು ಹೋಗುವ ಜನತಾ ಕ್ಷೇತ್ರವನ್ನೂ ನಿರೂಪಿಸಿದ್ದಾರೆ. ಇದು ಆಧುನಿಕ ಆರ್ಥಿಕ ಸಿದ್ಧಾಂತಕ್ಕೆ ಶ್ರೀಮಾನ್ ಹೆಗಡೆಯವರ ಕಾಣಿಕೆಯಾಗಿದೆ. ಸರ್ವೋದಯ ತತ್ವಕ್ಕೆ ಹೊಂದಿಕೊಂಡಂತಿರುವ ಜನತಾ ಕ್ಷೇತ್ರದಲ್ಲಿ ಜನತೆಯು ಸಾಮೂಹಿಕವಾಗಿ ಸಕ್ರೀಯವಾಗಿ ಅಭಿವೃದ್ಧಿಯಲ್ಲಿ ಭಾಗವಹಿಸಿ ರಾಜ್ಯದ ಸರ್ವತೋಮುಖವಾದ ವೇಳೆಯಲ್ಲಿ ಭಾಗಿಯಾಗಬಹುದಾಗಿದೆ. ಈ ಕ್ಷೇತ್ರದಲ್ಲಿ ಒಣ ಭೂಮಿ ಅಭಿವೃದ್ಧಿ ಯೋಜನೆಗಳು, ಬಡವರಿಗೆ 2 ರೂಪಾಯಿಗೆ ಒಂದು ಕೇ.ಜಿ. ಅಕ್ಕಿ ವಿತರಣೆ, ಸುಲಭ ದರದಲ್ಲಿ ಸೀರೆ, ರವಿಕೆ, ಪಂಚೆ ಮತ್ತು ಅಂಗಿಗಳ ವಿತರಣೆ, ನಿರಕ್ಷತೆಯನ್ನು ಹೋಗಲಾಡಿಸಲು ಅಕ್ಷರ ಸೇನೆ ಕಾರ್ಯಕ್ರಮ ಹಾಗೂ ಗ್ರಾಮ ಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಅಧಿಕಾರ ವಿಕೇಂದ್ರೀಕರಣ ಸಾಧಿಸಲು ಜಿಲ್ಲಾ ಪರಿಷತ್ ಮಸೂದೆಗಳು ಸೇರಿವೆ. ಇಂಥಹ ಸಾಮೂಹಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಮ್ಮ ರಾಜ್ಯದಲ್ಲಿ ಇದೇ ಮೊಟ್ಟ ಮೊದಲು ಯೋಚಿಸಲಾಗಿದೆ. ಈ ಕೀರ್ತಿ ಮುಖ್ಯ ಮಂತ್ರಿಗಳಿಗೆ ಸಲ್ಲತಕ್ಕದ್ದು.

ಇನ್ನು ಕೇಂದ್ರ ಸರ್ಕಾರದ ಇತ್ತೀಚಿನ ಬಜೆಟ್ ನೀತಿಯಿಂದ ಹತ್ತು ಲಕ್ಷ ಜನರು 5 ವರ್ಷಗಳಲ್ಲಿ ನಿರುದ್ಯೋಗಿಗಳಾಗುವರು. ಆದ್ದರಿಂದ ಜನತಾ ಬಟ್ಟೆಗಳ ಉತ್ಪಾದನೆ ಮತ್ತು ಹಂಚಿಕೆಯನ್ನು ರಾಜ್ಯ ಸರ್ಕಾರ ರೂಪಿಸಿದೆ. ಇದರ ಮುಖಾಂತರ ಒಂದು ಲಕ್ಷ ಜನಕ್ಕೆ ಕೆಲಸ ಸಿಗುತ್ತದೆ. ಇದರಿಂದ ಜನತಾ ಸರ್ಕಾರವು ಬಡವರ ಕಲ್ಯಾಣಕ್ಕೆ ಕಂಕಣಬದ್ಧವಾಗಿರುವುದೆಂದು ತಿಳಿಯಬಹುದಾಗಿದೆ. ರಾಜ್ಯದಲ್ಲಿ 7ನೇ ಯೋಜನೆಯ ಅವಧಿಯಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳಿಗೆ 1,000

ಕೋಟಿ ರೂಪಾಯಿಗಳನ್ನು, ಸಣ್ಣ ನೀರಾವರಿ ಯೋಜನೆಗಳಿಗೆ 180 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದು ಸುಮಾರು 7 ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಿದೆ. ಪ್ರಸ್ತುತ ವರ್ಷದಲ್ಲಿ 1,13,000 ಹೆಕ್ಟೇರ್ ಭೂಮಿಗೆ ನೀರಾವರಿಯನ್ನು ಒದಗಿಸುವುದು ಶ್ಲಾಘನೀಯವಾದ ಕಾರ್ಯ. ಆದರೆ ದುರಾದೃಷ್ಟವಶಾತ್ 27 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಲ್ಲಿ ಹಿಪ್ಪರಗಿ ಮತ್ತು ರಾಮಥಲ್ ಯೋಜನೆಗಳಿಗೆ ಸಾಂಕೇತಿಕವಾಗಿ ಹಣವನ್ನು ಕೊಡದೇ ಇರುವುದು ಸರಿಯಲ್ಲ. ಈಗಲಾದರೂ ಮಾನ್ಯ ಮುಖ್ಯ ಮಂತ್ರಿಗಳು ಈ ಲೋಪವನ್ನು ಸರಿಪಡಿಸಲು ಕೇಳಿಕೊಳ್ಳುತ್ತೇನೆ. ಕನ್ನಡ ಮತ್ತು ಸಂಸ್ಕೃತಿಯ ಕಾರ್ಯಕ್ರಮಗಳಿಗೆ ಆಯವ್ಯಯ ಪಟ್ಟಿಯಲ್ಲಿ ಸುಮಾರು 12-13 ಕಾರ್ಯಕ್ರಮಗಳನ್ನು ಸೇರಿಸಿರುವುದು ಹಾಗೂ ಕನ್ನಡ ಚಲನಚಿತ್ರಗಳಿಗೆ ಅತೀ ಹೆಚ್ಚು ಪ್ರೋತ್ಸಾಹ ಕೊಟ್ಟಿರುವುದು ಪ್ರತಿಯೊಬ್ಬ ಕನ್ನಡಿಗನಿಗೂ ಸಂತೋಷವನ್ನು ಉಂಟು ಮಾಡಿದೆ.

ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಗೆ ಅನುಗುಣವಾಗಿ ಮಹಿಳೆಯರ ಅಭಿವೃದ್ಧಿಗೆ ನಿಗಮ ಒಂದನ್ನು ಸ್ಥಾಪಿಸಲು ಮಾಡಿರುವ ಪ್ರಸ್ತಾವನೆ ನಿಜವಾಗಿಯೂ ಸಕಾಲಿಕ ಮತ್ತು ಸಮಂಜಸವಾದುದಾಗಿದೆ ಕರ್ನಾಟಕದ ಸಮಗ್ರ ಮಹಿಳೆಯರ ಪರವಾಗಿ ನಾನು ಮುಖ್ಯಮಂತ್ರಿಗಳನ್ನು ಇದಕ್ಕೋಸ್ಕರ ಅಭಿನಂದಿಸುತ್ತೇನೆ. ಇತರ ನಿಗಮಗಳಿಗಿಂತ ಈ ಮಹಿಳಾ ಅಭಿವೃದ್ಧಿ ನಿಗಮವು ಹೆಚ್ಚು ಹಣವನ್ನು ಪಡೆದು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುವಂತೆ ಮುಖ್ಯಮಂತ್ರಿಗಳು ಸಹಾಯ ಮಾಡುತ್ತಾರೆಂದು ನಾನು ಆಶಿಸುತ್ತೇನೆ.

ಪ್ರಸ್ತುತ ಬಜಟ್ ಸರಕಾರಿ ನೌಕರರಿಗೆ ಕಾಮಧೇನು ಆಗಿದೆ. ಹೆಚ್ಚಿನ ಡಿ.ಎ. ಕಡಿಮೆ ಕೆಲಸ, ಐದು ದಿನಗಳ ವಾರ, ತಾತ್ಕಾಲಿಕ ಪರಿಹಾರ, ವೃದ್ಧಾಪ್ಯ ವೇತನ, ಇತ್ಯಾದಿ ಅನುಕೂಲತೆಗಳ ಜೊತೆಗೆ ವೇತನ ಆಯೋಗದ ರಚನೆಯನ್ನು ಸಹ ಸೇರಿಸಲಾಗಿದೆ. ಇದರಿಂದ ಸರಕಾರಿ ನೌಕರರು ಸಂತೃಪ್ತರಾಗಿ ಭ್ರಷ್ಟಾಚಾರವನ್ನು ಬಿಟ್ಟು ಜವಾಬ್ದಾರಿಯುತವಾಗಿ ವರ್ತಿಸುವರೆಂದು ಆಶಿಸುತ್ತೇನೆ. ಸರ್ಕಾರವು ಪ್ರತಿಯೊಬ್ಬ ಸರ್ಕಾರಿ ನೌಕರರಿಗೂ ಕೆಲಸದ ಪ್ರಮಾಣವನ್ನು ನಿಗದಿ ಮಾಡಿ ಅವರನ್ನು ಸಾರ್ವಜನಿಕ ಹೊಣೆಗಾರಿಕೆಗೆ ಗುರಿ ಮಾಡುವುದು ಸೂಕ್ತ ಎಂದು ನನ್ನ ಅಭಿಪ್ರಾಯವನ್ನು ಸೂಚಿಸಲು ಇಚ್ಛಿಸುತ್ತೇನೆ.

ಇನ್ನು ಅನೇಕ ಜನ ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ಮಹಿಳೆಯರ ಬಗ್ಗೆ ಏನು ಮಾಡಿದ್ದಾರೆಂದು ಪ್ರಶ್ನಿಸಿದ್ದಾರೆ. ನಮ್ಮ ಸರಕಾರವು ಮಹಿಳೆಯರಿಗಾಗಿ ಏನು ಮಾಡಿಲ್ಲ? ಸುಮಾರು ವರ್ಷಗಳ ವರೆಗೆ ಈ ದೇಶದ ಪ್ರಧಾನಿ ಮಹಿಳೆಯಾಗಿದ್ದರೂ ಮಹಿಳೆಯರಿಗಾಗಿ ಮಾಡಿದ್ದೇನು ? ಆದರೆ ನಮ್ಮ ಸರಕಾರ ಮಹಿಳೆಯರಿಗಾಗಿ ಅನೇಕ ಹೊಸ ಯೋಜನೆಗಳನ್ನು ಹಾಕಿಕೊಂಡು ಕಾರ್ಯಗತ ಮಾಡಲು ಪ್ರಯತ್ನಿಸುತ್ತಿದೆ. ಬಡವರಿಗೆ, ಅದರಲ್ಲೂ ಬಡಹೆಣ್ಣು ಮಕ್ಕಳಿಗೆ ತಾಳಿ, ಸೀರೆ, ಮುಂತಾದವುಗಳಿಗೆ ಕೋಟ್ಯಾಂತರ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡಿದ್ದಾರೆ.

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಹಿಳೆಯರಿಗಾಗಿ ಹಿಂದಿನ ಪ್ರಧಾನ ಮಂತ್ರಿಗಳು, 35 ವರ್ಷಗಳಿಂದ ಮಾಡದಂತಹ ಯೋಜನೆಗಳನ್ನು ನಮ್ಮ ಸರಕಾರ ಕಾರ್ಯರೂಪಕ್ಕೆ ತಂದಿದೆ ಎಂದು ಹೇಳುತ್ತಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಕೇಂದ್ರ ಸರಕಾರದವರು ಮಾಡಿಕೊಟ್ಟ ಹಣದಿಂದ ಕೊಟ್ಟಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಶೇಕಡಾ 58ರಷ್ಟು ಮಹಿಳೆಯರೇ ಇರುವಾಗ, ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವ ಸರಕಾರ ಈ ಭಾರತದ ದೇಶದಲ್ಲಿ ಇದ್ದರೆ, ಅದು ನಮ್ಮ ಸರಕಾರ ಮಾತ್ರ ಎಂದು ಹೇಳುತ್ತೇನೆ. ಜನತಾ ಸರಕಾರದ ಪ್ರತಿಯೊಂದೂ ಹೊಸ ಯೋಜನೆಯೂ ಮಹಿಳೆಯರನ್ನು ಕುರಿತು ಮೂಲವಾಗಿ ಹಮ್ಮಿಕೊಂಡಿದೆ. ಬಡಮಹಿಳೆಯರಿಗೆ ತಾಳಿಯ ಭಾಗ್ಯ, ಹೆರಿಗೆ ಭತ್ಯೆ, ದುರ್ದೈವ ಮಹಿಳೆಗೆ ವಿಧವಾ ಭತ್ಯೆ, ಸೀರೆ ಕುಪ್ಪಸಗಳ ಭಾಗ್ಯ. ಮಕ್ಕಳಿಗೆ ಉಚಿತ ಪುಸ್ತಕ, ಸಮವಸ್ತ್ರಗಳ ಭಾಗ್ಯ, ಇಂತಹ ಒಳ್ಳೆಯ ಯೋಜನೆಗಳನ್ನು ಹಮ್ಮಿಕೊಂಡಿದೆ.

ಎಷ್ಟೋ ದಿನ ಗಂಡ, ಮಕ್ಕಳಿಗೆ ಉಣ ಬಡಿಸಿ ತಾನು ಉಪವಾಸ ಇರುವ ಹೆಣ್ಣು ಮಕ್ಕಳ ಕಷ್ಟವನ್ನು ತಪ್ಪಿಸಲು ಎರಡು ರೂಪಾಯಿಗಳಿಗೆ, ಒಂದು ಕೆ.ಜಿ. ಅಕ್ಕಿ, ಕಡಿಮೆ ಬೆಲೆಗೆ ಜೋಳ, ರಾಗಿ, ಮುಂತಾದ ಧಾನ್ಯಗಳ ಪೂರೈಕೆ ಇವುಗಳಿಂದ ಬಡಜನಗಳಿಗೆ ಉದ್ಧಾರವಾಗಲು ಸುಸಮಯ, ಅಂದರೆ

ಎಲ್ಲ ಹಂತಗಳಲ್ಲಿಯೂ ಮಹಿಳೆಯ ಏಳಿಗೆಗಾಗಿ ಶ್ರಮಿಸಿರುವುದು ಕಂಡುಬರುತ್ತದೆ. ಇಷ್ಟೇ ಅಲ್ಲದೇ, ಮಹಿಳೆಗೆ ಎಲ್ಲಾ ಹಂತಗಳಲ್ಲಿಯೂ ಸ್ಥಳೀಯ ಸಂಘ ಸಂಸ್ಥೆಗಳಲ್ಲಿ ಶೇಕಡಾ ಇಪ್ಪತ್ತರಷ್ಟು ಮೀಸಲಾತಿ ಇಡಲಾಗಿದೆ. ಸಹಕಾರಿ ಸಂಘಗಳಲ್ಲಿ ಕಡ್ಡಾಯವಾಗಿ ಮಹಿಳೆಯ ಪ್ರಾತಿನಿಧ್ಯ. ಒಟ್ಟಿನಲ್ಲಿ ಮಹಿಳೆಯರಿಗಾಗಿ ಸರಕಾರ ಅತ್ಯುಪಯುಕ್ತವಾದ ಹಲವಾರು ಯೋಜನೆಗಳನ್ನು ಇಟ್ಟುಕೊಂಡು ಅವರ ಅಭಿವೃದ್ಧಿಗಾಗಿ ಹೆಚ್ಚು ಶ್ರಮಿಸಿದೆ ಎಂದು ಹೇಳುತ್ತಾ, ಈ ಬಜೆಟ್‌ನ್ನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಇದು ಬಹಳ ಸಮರ್ಪಕವಾಗಿರುವ, ಅರ್ಥಪೂರ್ಣವಾಗಿರುವ, ಆಯವ್ಯಯ ಪಟ್ಟಿ ಎಂದು ಹೇಳಿ ಇದನ್ನು ನಾನು ಸ್ವಾಗತ ಮಾಡುತ್ತೇನೆ.

* ಶ್ರೀ ಬಿ.ಎಂ. ಇದ್ದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಮುಖ್ಯಮಂತ್ರಿಗಳು, ಅರ್ಥಮಂತ್ರಿಗಳೂ ಆದ, ಶ್ರೀ ರಾಮಕೃಷ್ಣ ಹೆಗಡೆಯವರು ಸದನದ ಮುಂದೆ ಮಂಡಿಸಿರತಕ್ಕಂತಹ ಆಯವ್ಯಯ ಪಟ್ಟಿಯನ್ನು ಅನೇಕ ಕಾರಣಗಳಿಗಾಗಿ ವಿರೋಧಿಸಿ, ನನ್ನ ಕೆಲವು ವಿಚಾರಗಳನ್ನು ಈ ಸಭೆಯ ಮುಂದಿಡಲು ಬಯಸುತ್ತೇನೆ. ಈ ಬಜೆಟ್‌ನ್ನು ಸರಿಯಾಗಿ ಪರಿಶೀಲನೆ ಮಾಡಿದರೆ, ಕೇವಲ ಉಳ್ಳವರಿಗೆ, ಧನವಂತರಿಗೆ, ಹೆಚ್ಚು ಸಹಾಯ ಮಾಡತಕ್ಕಂತಹ ಶಕ್ತಿಯನ್ನು ಕೊಡುತ್ತದೆ ಎಂಬುದನ್ನು ನಾವು ಈ ಬಜೆಟ್‌ನಲ್ಲಿ ಕಾಣುತ್ತಾ ಇದ್ದೇವೆ. ಇದನ್ನು ಯಾವ ರೀತಿಯಿಂದ ಪರಿಶೀಲನೆ ಮಾಡಿದರೂ ಕೂಡಾ, ಬಡವರಿಗೆ, ಗ್ರಾಹಕರಿಗೆ, ರೈತರಿಗೆ, ಸ್ವಲ್ಪವೂ ಕೂಡಾ ಸಹಾಯಕ ಆಗಿರುವುದು ನಮಗೆ ಕಾಣುತ್ತಾ ಇಲ್ಲ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಈ ಬಜೆಟ್‌ನಿಂದ ಹೋಟೆಲ್‌ನವರು, ಧನವಂತರು, ಕಪ್ಪು ಹಣವಂತರು, ಮೇಲೆ ಬರುವುದಕ್ಕೆ ಅನುಕೂಲ ಇದೆ. ಬೆಲೆ ಏರಿಕೆ ಅತೀ ಹೆಚ್ಚಾಗಿ, ಕೆಲವು ವಸ್ತುಗಳಿಗೆ ದಿನೇ ದಿನೇ ಬೆಲೆ ಏರಿಸುತ್ತಿರುವುದರಿಂದಾಗಿ ಸಾಮಾನ್ಯರಿಗೆ ತುಂಬಾ ಕಷ್ಟವಾಗುತ್ತಿದೆ. ಜೀವನ ನಿರ್ವಹಣೆಗೆ ಬೇಕಾದಂತಹ ವಸ್ತುಗಳ ಬೆಲೆ ಹೆಚ್ಚುತ್ತಾ ಹೋಗುವುದನ್ನು ನೋಡಿದರೆ ಬೆಲೆ ಏರಿಕೆಯ ಪರಿಣಾಮವು ಗೊತ್ತಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಒಂದು ಕೆ.ಜಿ. ಮೆಣಸಿನಕಾಯಿ ಬೆಲೆಯು ರೂಪಾಯಿ 32 ಇದ್ದುದು ಈಗ 40 ರೂಪಾಯಿಗೆ ಹೋಗಿ ಮುಟ್ಟಿದೆ ಜನಸಾಮಾನ್ಯ ಬಳಕೆಯ ಚಹಾ ಪುಡಿಯ ಬೆಲೆ ರೂಪಾಯಿ 30 ಇದ್ದುದು 40,42 ಆಗಿದೆ. ಸಕ್ಕರೆಯ ಬೆಲೆ ರೂಪಾಯಿ, 8ರಿಂದ ಎಂಟುವರೆಗೆ ಹೋಗಿ ತಲುಪಿದೆ. ಇವೆಲ್ಲವುಗಳಿಂದ ಹಣದುಬ್ಬರಕ್ಕೆ ಆಸ್ಪದವಾಗಿದೆ. ಇಂತಹ ಅಂಶಗಳನ್ನು ಈ ಬಜೆಟ್‌ನಲ್ಲಿ ಕಾಣುತ್ತಾ ಇದ್ದೇವೆ. ಹೋಟೆಲ್‌ನವರಿಗೆ ಈ ಬಜೆಟ್‌ನಲ್ಲಿ ಬಹಳ ಸವಲತ್ತುಗಳನ್ನು ಕೊಟ್ಟಿರುವುದು ಕಾಣಬಹುದು. ಅವರು ತಿಂಗಳು, ತಿಂಗಳಿಗೆ ಆಹಾರಪಧಾರ್ಥಗಳ ಬೆಲೆಯನ್ನು ಹೆಚ್ಚು ಮಾಡುತ್ತಾ ಇದ್ದಾರೆ. ಬೆಲೆಯನ್ನು ಏರಿಸುವುದಷ್ಟೇ ಅಲ್ಲ ತಿಂಡಿಗಳು ಗಾತ್ರದಲ್ಲಿಯೂ ಸಹ ಕಡಿಮೆಯಾಗುತ್ತಾ ಇರುವುದನ್ನು ಕಾಣುತ್ತಾ ಇದ್ದೇವೆ. ತಮ್ಮ ಮನಸ್ಸಿಗೆ ಬಂದಷ್ಟು ರೀತಿಯಲ್ಲಿ ಬೇಕಾದಷ್ಟು ಹಣ ತೆಗೆದುಕೊಂಡರೂ ಕೂಡಾ ನಮಗೆ ಸರಿಯಾದ ತಿಂಡಿತಿನಸುಗಳು ಲಭ್ಯವಾಗುತ್ತಿಲ್ಲ. ಅದೇ ರೀತಿಯಲ್ಲಿ ಸಸ್ಯಾಹಾರಿ, ಮಾಂಸಾಹರಿ ಊಟದ ಹೋಟೆಲ್‌ಗೆ ಹೋದರೆ ಅಲ್ಲಿಯೂ ಇದೇ ಪರಿಸ್ಥಿತಿ. ಎರಡು, ಮೂರು ರೂಪಾಯಿಗಳಷ್ಟು ಬೆಲೆಯನ್ನು ಹೆಚ್ಚು ಮಾಡಿದ್ದಾರೆ, ಆದರೂ ಸರಿಯಾದ ಊಟವನ್ನು ಕೊಡುತ್ತಾ ಇಲ್ಲ. ಜನರನ್ನು ಲೂಟಿ ಮಾಡುವ ಸ್ಥಿತಿಯಲ್ಲಿ ಹೋಟೆಲ್‌ನವರು ಇದ್ದಾರೆ. ಇಂತಹವರ ಬಗ್ಗೆ ಕಡಿವಾಣ ಹಾಕದೇ ಹೋದರೆ ಇದರಿಂದ ಬಹಳಷ್ಟು ತೊಂದರೆಗಳು ಸಾರ್ವಜನಿಕರಿಗೆ ಉಂಟಾಗತಕ್ಕಂತಹ ಪರಿಸ್ಥಿತಿ ಇದೆ. ಈ ಹೋಟೇಲ್

5-00 p.m.

ಮಾಲೀಕರು ಗ್ರಾಹಕರಿಂದ ಮತ್ತು ಸಾರ್ವಜನಿಕರಿಂದ ಎಲ್ಲರಿಂದಲೂ ಕೂಡ ತೆರಿಗೆಯನ್ನು ವಸೂಲು ಮಾಡಿದ್ದಾರೆ. ಅಂತಹವರಿಗೆ ಸರ್ಕಾರದವರು 1978ರಿಂದ 1983ರವರೆವಿಗೆ ನಡೆಸಿದ ವಹಿವಾಟಿನ ಮಾರಾಟ ತೆರಿಗೆಯನ್ನು ಕೊಡಬೇಕಾಗಿಲ್ಲವೆಂದು ಹೇಳಿ ರಿಯಾಯಿತಿಯನ್ನು ತೋರಿಸಿದ್ದಾರೆ, ಈ ಹಣ ಸುಮಾರು 18-20 ಕೋಟಿ ರೂಪಾಯಿಗಳಾಗಬಹುದು. ಇಷ್ಟೊಂದು ಹಣವನ್ನು ಹೋಟೇಲ್ ಮಾಲೀಕರು ಗ್ರಾಹಕರಿಂದ ವಸೂಲು ಮಾಡಿದ್ದಾರೆ. ಈ ಹಣವನ್ನು ಬಡವರಿಗೆ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಇದರಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿಯನ್ನಾದರೂ ಮಾಡಬಹುದಿತ್ತು. ಪ್ರತಿಯೊಬ್ಬ ಗ್ರಾಹಕರಿಂದಲೂ 100ಕ್ಕೆ 80ರಷ್ಟು ತೆರಿಗೆಯನ್ನು ವಸೂಲು ಮಾಡಿದ್ದಾರೆ. ಹೋಟೆಲ್ ಮಾಲೀಕರು ತಮಗೆ ಮನಸ್ಸು ಬಂದ ರೀತಿಯಲ್ಲಿ ದರಗಳನ್ನು ಹೆಚ್ಚು ಮಾಡುತ್ತಾರೆ. ಅವರನ್ನು ಕೇಳುವವರೇ ಇಲ್ಲ. ಅವರ ಮನಸ್ಸಿಗೆ ಬಂದಂತೆ ವರ್ತನೆ ಮಾಡುತ್ತಾರೆ. ಅವರು ಎಷ್ಟು ದರ ಮಾಡಿದರೂ ಕೂಡ ಗ್ರಾಹಕ ಹೋಗಿ ತಿಂದು ಬರಬೇಕಾಗುತ್ತದೆ. ಅಂತಹವರಿಗೆ ಸರ್ಕಾರ ಮತ್ತೊ ಸಹಾಯ ಮಾಡಿದೆ. ಆದರೆ ಈ ಗ್ರಾಹಕನನ್ನು ಕೇಳುವವರೇ ಇಲ್ಲ, ಇನ್ನು ನಮ್ಮ ಮಾನ್ಯ ಮುಖ್ಯಮಂತ್ರಿ ಮಂಡಿಸಿರತಕ್ಕಂಥ ಆಯ್ಯವ್ಯಯದಲ್ಲಿ ಕನ್ನಡಕ್ಕೆ ಹೆಚ್ಚಿನ ಪ್ರೋತ್ಸಾಹದ ಮಾತುಗಳನ್ನು ಹೇಳಿದ್ದಾರೆ. ನಿಜವಾಗಿಯೂ

ಕೂಡ ನಾವು ಅವರನ್ನು ಅಭಿನಂದಿಸಬೇಕಾಗುತ್ತದೆ. ಆದರೂ ಸಹ ಅವರು ಕನ್ನಡದ ಅಭಿವೃದ್ಧಿಯನ್ನು ಸರಿಯಾಗಿ ಮಾಡುತ್ತಿಲ್ಲ. ಆಡಳಿತದ ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಬಳಸಲಾಗುತ್ತದೆಂದು ಹೇಳಿದ್ದರು. ಇವತ್ತಿನವರೆವಿಗೂ ಆ ಕೆಲಸ ಮಾಡಿಲ್ಲ. ಶೇಕಡ ಒಂದಂಶದಷ್ಟು ಕೂಡ ಕನ್ನಡದ ಅಭಿವೃದ್ಧಿಯಾಗಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕನ್ನಡದ ಅಭಿವೃದ್ಧಿಗೆ ಸಚಿವಾಲಯದ ಮಟ್ಟದಲ್ಲಿ ಕೆಲವೊಂದು ಹಿರಿಯ ಅಧಿಕಾರಿಗಳಿಗೆ ಮನಸ್ಸು ಇಲ್ಲದೆ ಇರುವುದರಿಂದ ಈ ರೀತಿಯಾಗುತ್ತಿದೆ ಎಂದು ನಾನು ಹೇಳಬಯಸುತ್ತೇನೆ. ಈ ಅಧಿಕಾರಿಗಳಲ್ಲಿ ಮನಸ್ಸು ಬದಲಾವಣೆಯಾಗಬೇಕು. ಇನ್ನು ಆಯವ್ಯಯ ಪತ್ರದಲ್ಲಿ ಕನ್ನಡದ ಅಭಿವೃದ್ಧಿಗೆಂದು ಸುಮಾರು 75 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಈ ಹಣ ಏನೇನು ಸಾಲದು. ಆದ್ದರಿಂದ ಕನಿಷ್ಟಪಕ್ಷ ಒಂದುಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಗ್ರಂಥಾಲಯಗಳಲ್ಲಿ ಕನ್ನಡದ ಪುಸ್ತಕದ ಪ್ರಕಾಶಕರಿಂದ ಕನಿಷ್ಟಪಕ್ಷ 300 ಪುಸ್ತಕಗಳನ್ನಾದರೂ ಕೊಂಡುಕೊಳ್ಳಬೇಕೆಂದು ಹಿಂದೆ ಒಂದು ಆಜ್ಞೆ ಇತ್ತು. ಆದರೆ ಆ ಆಜ್ಞೆ ಈಗ ರದ್ದಾಗಿದೆ ಎಂದು ನಾನು ಕೇಳಿದ್ದೇನೆ. ಮತ್ತೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಕನಿಷ್ಟಪಕ್ಷ ಗ್ರಂಥಾಲಯಗಳವರು ಪ್ರಕಾಶಕರಿಂದ 300 ಪುಸ್ತಕಗಳನ್ನಾದರೂ ಕೊಂಡುಕೊಳ್ಳುವ ಹಾಗೆ ವ್ಯವಸ್ಥೆ ಮಾಡಬೇಕು. ಇದರಿಂದ ಕನ್ನಡದ ಕಲೆಗೆ ಹೆಚ್ಚು ಪ್ರೋತ್ಸಾಹ ಸಿಗುತ್ತದೆ. ಈ ಕೆಲಸ ಮಾನ್ಯ ಮಂತ್ರಿಗಳು ಕಡ್ಡಾಯವಾಗಿ ಮಾಡಿಸಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಸರ್ಕಾರಿ ನೌಕರರಿಗೆ ವಾರದಲ್ಲಿ 5 ದಿವಸಗಳ ಕೆಲಸವೆಂದು ಮಾಡಿದ್ದಾರೆ. ನಿಜವಾಗಿಯೂ ಕೂಡ 5 ದಿವಸಗಳನ್ನು ಮಾಡಬಾರದಾಗಿತ್ತು. ಕಾರಣವೇನೆಂದರೆ ವಾರದಲ್ಲಿ 6 ದಿವಸಗಳ ಕಾಲ ಕೆಲಸ ಮಾಡಿಯೇ ಸಾರ್ವಜನಿಕರ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಅಂತದ್ದರಲ್ಲಿ 5 ದಿವಸಗಳ ಕೆಲಸವೆಂದು ಮಾಡಿದ್ದು ಸರಿಯಲ್ಲವೆಂದು ನನ್ನ ಭಾವನೆ. ರಾಜಧಾನಿಯಲ್ಲಿ ಸಾರ್ವಜನಿಕರ ತೊಂದರೆಗಳು ಅಷ್ಟಾಗಿ ಕಂಡುಬರುವುದಿಲ್ಲ. ಆದೇ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಪ್ರತಿದಿವಸ ಸಾರ್ವಜನಿಕರು ಜಿಲ್ಲಾ ಕಚೇರಿಗೆ, ತಾಲ್ಲೂಕು ಕಚೇರಿಗೆ ಮತ್ತು ಆರ್‌ಟಿಓ. ಕಚೇರಿಗೆ ಇತ್ಯಾದಿ ಸಾರ್ವಜನಿಕ ಸಂಪರ್ಕ ಕಚೇರಿಗಳಿಗೆ ಸುತ್ತಾಡಿದರೂ ಕೂಡ ಅವರ ಕೆಲಸಗಳು ಸರಿಯಾಗಿ ಮಾಡಿ ಕೊಡುತ್ತಿಲ್ಲ. ಎಷ್ಟೋ ಜನ ಸಾರ್ವಜನಿಕರು ಕಣ್ಣೀರು ಸುರಿಸಿರುವುದೂ ಸಹ ಇದೆ. ಈಗ ವಾರಕ್ಕೆ 6 ದಿವಸ ಇದೆ ಎಷ್ಟೋ ಜನ ಅಧಿಕಾರಿಗಳು ಮತ್ತು ನೌಕರರು ಶುಕ್ರವಾರ ಸಾಯಂಕಾಲವೇ ಸ್ಥಳದಲ್ಲಿ ಇರುವುದಿಲ್ಲ. ಅಂದರೆ 5 ದಿವಸದ ಕೆಲಸ ಮಾಡುತ್ತಿದ್ದಾರೆ. ಇನ್ನೂ ಸರ್ಕಾರವೇ 5 ದಿವಸ ಕೆಲಸವೆಂದು ಮಾಡಿದರೆ ಅವರು ಕೆಲಸ ಮಾಡುವುದು ವಾರದಲ್ಲಿ ನಾಲ್ಕು ದಿವಸ ಮಾತ್ರ. ತಾವು ನನ್ನನ್ನು ಪ್ರಶ್ನೆ ಮಾಡಬಹುದು. ಕೇಂದ್ರ ಸರ್ಕಾರದಲ್ಲಿ 5 ದಿವಸಗಳು ಮಾಡಿಲ್ಲವೇ ಎಂದು. ಆದರೆ ಕೇಂದ್ರ ಸರ್ಕಾರಕ್ಕೂ ನಮಗೂ ಹೆಚ್ಚು ವ್ಯತ್ಯಾಸ ಇದೆ,ಕೆ ಲವೊಂದು ಕಾರ್ಯಕ್ರಮಗಳಲ್ಲಿ ಕೇಂದ್ರ ಸರ್ಕಾರವನ್ನು ಟೀಕೆ ಮಾಡುತ್ತಿದ್ದೀರಿ ಆದರೆ ಅವರ ಕಾರ್ಯಕ್ರಮವನ್ನು ತಾವು ಈಗ ಏತಕ್ಕೆ ಅನುಸರಿಸಿದ್ದೀರಿ ? ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ರಾಜ್ಯ ಸರ್ಕಾರದವರು ವಾಹನಗಳ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿದ್ದೀರಿ. ಇದರಿಂದ ವಾಹನಗಳ ದರವನ್ನು ಸಹ ಹೆಚ್ಚು ಮಾಡುತ್ತಾರೆ. ಇದರಿಂದ ಪ್ರಯಾಣಿಕರಿಗೆ ಹೆಚ್ಚು ತೊಂದರೆಯಾಗುತ್ತದೆ. ಯಾವ ಕಡೆಯಿಂದ ನೋಡಿದರೂ ಸಹ ಗ್ರಾಹಕನಿಗೆ ಒಂದಿಲ್ಲ ಒಂದು ರೀತಿಯಲ್ಲಿ ಹೆಚ್ಚು ಹೊರೆ ಬಿದ್ದಿದೆ. ಆದ್ದರಿಂದ ಈ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡುತ್ತಾರೆಂದು ನಾನು ನಂಬಿರುತ್ತೇನೆ. ಇನ್ನು ಅಲ್ಪಸಂಖ್ಯಾತರಿಗೆ ಒಂದುಕೋಟಿ ರೂಪಾಯಿಗಳನ್ನು ಕೊಟ್ಟು ಅವರಿಗೆ ಪ್ರತ್ಯೇಕವಾಗಿ ಒಂದು ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುತ್ತೇವೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ನಾಲ್ಕು ಕೋಟಿ ಜನತೆಯಲ್ಲಿ ಸುಮಾರು ಒಂದುಕೋಟಿ ಜನ ಅಲ್ಪಸಂಖ್ಯಾತರಿದ್ದಾರೆ. ಅವರಲ್ಲಿ ಬಹುಮಂದಿ ಬಡವರು. ಆರ್ಥಿಕವಾಗಿ ಹಿಂದುಳಿದವರು, ರಾಜಕೀಯವಾಗಿ ಕೂಡ ಹಿಂದುಳಿದವರು ಶೈಕ್ಷಣಿಕವಾಗಿ ಕೂಡ ಹಿಂದುಳಿದಿದ್ದಾರೆ. ಎಲ್ಲಾ ರಂಗಗಳಲ್ಲಿ ಕೂಡ ಅವರು ಹಿಂದುಳಿದಿದ್ದಾರೆ. ಅವರ ಅಭಿವೃದ್ಧಿಯನ್ನು ಸರ್ಕಾರ ಮಾಡಬೇಕಾದರೆ ಕನಿಷ್ಟಪಕ್ಷ ಎರಡುಕೋಟಿ ರೂಪಾಯಿಗಳನ್ನಾದರೂ ಕೊಡಬೇಕು. ಹಿಂದೆ ಕರ್ನಾಟಕ ರಾಜ್ಯದಲ್ಲಿ ಟಿಪ್ಪುಸುಲ್ತಾನ್ ಆಡಳಿತ ನಡೆಸಿದಂತಹ ರಾಜ್ಯ. ಆದ್ದರಿಂದ ಅವರ ಬಗ್ಗೆ ಸರ್ಕಾರ ಹೆಚ್ಚು ನಿಗಾವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಈ ರಾಜ್ಯದ ರೈತರ ಬಗ್ಗೆ ಸರ್ಕಾರ ಅನುಕಂಪ ಅಷ್ಟಾಗಿ ತೋರಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಈ ರಾಜ್ಯದ ನಾಲ್ಕುಕೋಟಿ ಜನರಿಗೆ ಅನ್ನವನ್ನು ಕೊಡತಕ್ಕಂಥ ದಾತ ರೈತ. ನಗರಗಳಲ್ಲಿ ವಾಸಮಾಡುವಂತಹ ನಗರವಾಸಿಗಳಿಗೆ. ಸೈನಿಕರಿಗೆ ಬೇಕಾದಂತಹ ರಾಗಿ, ಅಕ್ಕಿ, ಜೋಳ, ಗೋಧಿ ಬೆಳೆದುಕೊಡುವಂತಹ ಮನುಷ್ಯ ರೈತ. ಈ ರೈತ ಮಣ್ಣಿನ ಮಗನೆಂದು ಸಹ ಕರೆಯಲ್ಪಡುತ್ತಾರೆ.

ನಮ್ಮ ಮಹಾಕವಿ ಕುವೆಂಪುರವರು ಒಂದುಕಡೆ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ "ನೇಗಿಲ ಕುಳದೊಳಗಡಗಿದೆ ಕರ್ಮ, ನೇಗಿಲಮೇಲೆ ನಿಂತಿದೆ ಧರ್ಮ" ಎಂದು ರೈತನು ತನ್ನ ನೇಗಿಲಿನಿಂದ ಕಷ್ಟಪಟ್ಟು ಈ ರಾಜ್ಯದ ಜನರಿಗೆ ಅನ್ನವನ್ನು ಕೊಡುತ್ತಿದ್ದಾನೆ. ಅವನ ಮೇಲೆ ನಿಂತಿದೆ ಎಲ್ಲಾ ಧರ್ಮ ಎಂದು ಶ್ರೀಮಾನ್ ರಾಷ್ಟ್ರಕವಿ ಕುವೆಂಪುರವರೇ ಹೇಳಿದ್ದಾರೆ. ಆ ರೈತನ ಕಲ್ಯಾಣ ಮಾಡುವುದಕ್ಕಾಗಿ ಎಲ್ಲಿಯೂ ಒಂದು ಮಾತನ್ನು ಸಹ ಈ ಆಯವ್ಯಯದಲ್ಲಿ ಹೇಳಿಲ್ಲ. ಕಳೆದಸಾರಿ ಮಾನ್ಯ ಮುಖ್ಯಮಂತ್ರಿಗಳು ತಾತ್ಕಾಲಿಕ ಆಯವ್ಯಯವನ್ನು ಮಂಡನೆ ಮಾಡಿದಾಗ ಸುಮಾರು 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನಾದರೂ ಹೇಳಿದ್ದರು. ಆದರೆ 1985-86ನೇ ಸಾಲಿನಲ್ಲಿ ಮಂಡಿಸಿದಂತಹ ಆಯವ್ಯಯದಲ್ಲಿ ಅಂತಹ ಯಾವುದೇ ಒಂದು ಮಾತನ್ನು ಸಹ ಮಾನ್ಯ ಮುಖ್ಯಮಂತ್ರಿಗಳು ಹೇಳಿಲ್ಲ. ಈ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಆಲೋಚನೆ ಮಾಡಬೇಕಾಗಿತ್ತು. ಮತ್ತೆ ರೈತರ ಬಗ್ಗೆ ಮಹಾಕವಿ ಕುವೆಂಪುರವರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ "ಹಚ್ಚಿಕೊಳ್ಳಿರೋ ಹಚ್ಚಿಕೊಳ್ಳಿ ಪುನುಗು ಜವಾಜಿ ಕಸ್ತೂರಿ, ಎಷ್ಟು ದಿನ ಹಚ್ಚಿಕೊಳ್ಳುವಿರಿ ಒಂದು ದಿನ ಗೊಬ್ಬರದ ಬಂಡಿಯ ಗೊಬ್ಬರವ ಹೊತ್ತು ಅದರಿಂದ ಜಿನುಗುವ ರಸವೇ ಪುನುಗು ಕಸ್ತೂರಿ ಜವಾಜಿಯಾಗಲಿದೆ ತಿಳಿದಿರಲಿ, ತಿಳಿದಿರಲಿ" ಎಂದು ಹೇಳಿದ್ದಾರೆ ಹೋಟೇಲ್ ಮಾಲೀಕರಿಗೆ ಸರ್ಕಾರದವರು ಸುಮಾರು 18-20 ಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ಕೊಟ್ಟಿರುವಾಗ ಈ ದೇಶದ ರೈತನನ್ನು ಯಾರೂ ಕೇಳುವವರೇ ಇಲ್ಲ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಸುಮಾರು 70 ವರ್ಷಗಳ ವಯಸ್ಸಾಗಿರುವಂತಹ ವೃದ್ಧರನ್ನು ಯಾರೂ ಕೇಳುವವರೇ ಇಲ್ಲ, ಈ ಹೋಟೆಲ್ ಮಾಲೀಕರಿಗೆ ಕೊಟ್ಟಿರುವ ರಿಯಾಯಿತಿ ಹಣವನ್ನು ಈ 70 ವರ್ಷದ ನಂತರ ಯಾರಿಗೆ ಗಂಡು ಮಕ್ಕಳಿರುವುದಿಲ್ಲವೋ ಅಂತಹವರಿಗೆ ಮತ್ತು ಗಂಡುಮಕ್ಕಳಿದ್ದು ಯಾರು ನೋಡಿಕೊಳ್ಳುವುದಿಲ್ಲವೋ ಅಂತಹವರಿಗೆ ವೃದ್ಧಾಪ್ಯ ವೇತನವನ್ನು ಕೊಡುವುದಕ್ಕಾದರೂ ಬಳಸಿಕೊಳ್ಳಬಹುದಿತ್ತು. ಈ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಬರೀ ಜನತಾ ಸರ್ಕಾರದವರು ಒಂದು ಸೀರೆ ಪಂಚೆ ಕೊಟ್ಟರೆ ಅದು ಕಾರ್ಯಕ್ರಮವಲ್ಲ. ಈ ಎಲ್ಲಾ ಕೆಲಸಗಳು ಯೋಜನೇತರ ವೆಚ್ಚಗಳಲ್ಲಿ ಬರುತ್ತವೆ. ಆದ್ದರಿಂದ ಈ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಒಂದು ಪುಸ್ತಕ ಮಗುವಿನ ಕೈಯಲ್ಲಿ ಹೋದರೆ, ಕೊನೆಯ ಪುಟ ಹರಿದು ಹೋದರೆ, ಆ ಪುಸ್ತಕ ಎಲ್ಲೂ ಸಿಗದಿದ್ದರೆ, ಆ ಪೇಜ್ ಸಿಗದಿದ್ದರೆ, ಆ ಮಗು ಏನು ಮಾಡಬೇಕು ? ಕದಿಯಬೇಕು, ಆದುದರಿಂದ ನಾವು ಮಗುವಿಗೆ ಕದಿಯುವುದನ್ನು ಕಲಿಸಿದಹಾಗೆ ಆಗುತ್ತದೆ. ಆ ಪುಸ್ತಕ ಕಡೆಯವರೆಗೂ ಉಳಿಯುವ ವ್ಯವಸ್ಥೆ ಇಲ್ಲ, ಆ ಪುಸ್ತಕ ಏನಾದರೂ ಆದರೆ ಆ ಮಗು ಏನು ಮಾಡಬೇಕು ? ಈ ಪುಸ್ತಕಗಳನ್ನು ಹಂಚುವಿಕೆಯೂ ಸರಿಯಾಗಿ ನಡೆದಿಲ್ಲ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ 25 ಪರ್ಸೆಂಟ್ ಕೂಡಾ ಬರಲಿಲ್ಲ ಎಂದು ಹೇಳತಕ್ಕ ಪರಿಸ್ಥಿತಿ ಉಂಟು. ಅನೇಕ ಕಡೆಗಳಲ್ಲಿ ಇದನ್ನು ಕೇಳಿದ್ದೇವೆ. ಇದರ ಬಗ್ಗೆ ಗಮನ ಕೊಡಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಹೇಳತಕ್ಕದ್ದು ಸರ್ಕಾರ ಒಳ್ಳೆಯ ಅಭಿಪ್ರಾಯದಲ್ಲಿ ಕೆಲವು ಯೋಜನೆಗಳನ್ನು ಮಾಡಿದೆ. ಕೆಲವು ವಿಚಾರ ಅವರ ದೃಷ್ಟಿಯಲ್ಲಿ ಒಳ್ಳೆಯದುಂಟು. ಮಂತ್ರಿಗಳ ಮನಸ್ಸಿನಲ್ಲಿ ಒಳ್ಳೆಯದುಂಟು. ಆದರೆ ಅದನ್ನು ಕಾರ್ಯರೂಪಕ್ಕೆ ತರುವಾಗ ಅದು ಸರಿಯಾಗಿ ಆಗುವುದಿಲ್ಲ ಆಡಳಿತ ಯಂತ್ರ ಸರಿಯಿಲ್ಲ. ಆಡಳಿತ ಯಂತ್ರದ ಬಗ್ಗೆ ಸರ್ಕಾರ ಏನು ವ್ಯವಸ್ಥೆ ಮಾಡಿದೆ ? ತನಿಖೆ ಉಂಟು ಸಿಐಡಿ. ಉಂಟು, ಎಲ್ಲಾ ಉಂಟು, ಯಾರಿಗೆ ಗೊತ್ತಿಲ್ಲ, ಆದರೆ ಸುಧಾರಣೆ ಏನಾಗಿದೆ. ಆದುದರಿಂದ ಮಾರುವೇಷದಲ್ಲಿ ಬಂದು ನೋಡಿದರೆ ಪ್ರತಿಯೊಂದೂ ಗ್ರಾಮದಲ್ಲಿಯೂ ಇಂತಹವರು ಕೆಲವರು ನೌಕರರು ಇದ್ದಾರೆ, ಇವರದ್ದೆಲ್ಲಾ ಗೊತ್ತಾಗುತ್ತದೆ.

ಮಹಿಳೆಯರ ಬಗ್ಗೆ ಒಳ್ಳೆಯ ಕೆಲಸ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಬಹಳ ಸಂತೋಷ. ವಿಧವೆಯರಿಗೆ ಮಾಸಾಶನ ಕೊಡುವುದು ಒಳ್ಳೆಯ ವಿಚಾರ ಅಲ್ಲಿ ಹೋಗಿ ನೋಡಬೇಕು, ಅನೇಕ ಅಧಿಕಾರಿಗಳು, ವಿಧವೆಯರಿಗೆ ಮಾಸಾಶನ ಕೊಡುವ ಅಧಿಕಾರಿಗಳು, ಅನೇಕ ರೀತಿಯ ತನಿಖೆಗಳನ್ನು ಮಾಡಿ, ಅನೇಕ ಕಾರಣಗಳನ್ನು ಮುಂದೊಡ್ಡಿ, ನಿಮಗೆ ಮಾಸಾಶನ ಕೊಡಲಿಕ್ಕೆ ಸಾಧ್ಯವಿಲ್ಲ ನಿಮಗೆ ಗಂಡುಮಕ್ಕಳಿದ್ದಾರೆ, ನಿಮಗೆ ಹೆಣ್ಣುಮಕ್ಕಳು ಉಂಟು, ಹಾಗೆ ಉಂಟು, ಹೀಗೆ ಉಂಟು ಎಂದು ಸಿಕ್ಕಿದ ಹಾಗೆ ಮಾಡುವುದನ್ನು ನಾವು ಜನಸಂಪರ್ಕ ಸಭೆಯಲ್ಲಿ ನೋಡುತ್ತಿದ್ದೇವೆ. ಜನರಿಗೆ ಒಳ್ಳೆಯದನ್ನು ಮಾಡಬೇಕು. ಒಳ್ಳೆಯ ಯೋಜನೆ ಇದ್ದೂ ಜನಗಳಿಗೆ ಒಳ್ಳೆಯದನ್ನು ಮಾಡಲಿಲ್ಲ ಎಂದರೆ ಏನು ಪ್ರಯೋಜನ ? ಈ ರೀತಿ ಯಾವ ಕಾರ್ಯಕ್ರಮ ಹಾಕಿದರೂ ಅದು ಬಡವರಿಗೆ, ರೈತರಿಗೆ ಹಳ್ಳಿಗರಿಗೆ ಹೋಗಿ ಮುಟ್ಟುವುದಿಲ್ಲ, ಈ ಬಗ್ಗೆ ತಾವು ತನಿಖೆ ಮಾಡಿದರೆ ಗೊತ್ತಾಗುತ್ತದೆ ಎಂದು ಹೇಳಲು ಅಪೇಕ್ಷೆ ಪಡುತ್ತೇನೆ.

ಇನ್ನು ಕೊಳವೆಬಾವಿಗಳ ವಿಚಾರ. ಬೇಕಾದಷ್ಟು ಕೊಳವೆಬಾವಿಗಳನ್ನು ಮಾಡಿದ್ದೀರಿ. ಎಲ್ಲರಿಗೂ ಏನಿಲ್ಲದಿದ್ದರೂ ನೀರು ಕೊಡಬೇಕು, ಸಾಯುವಾಗ ಒಂದು ಗುಟುಕು ನೀರು ಕುಡಿಯಬೇಕೆಂದು ಹೇಳಿದೆ, ಸಾಯುವ ಕಾಲದಲ್ಲಾದರೂ ಸ್ವಲ್ಪ ನೀರು ಕುಡಿಯಬೇಕೆಂದು ಹೇಳಿರುವುದು. ನೀರು ಕೊಡುವುದು ಎಷ್ಟು ಮಹತ್ವದ ವಿಚಾರ ಎಂದು ಗೊತ್ತಾಗುತ್ತದೆ. ಈ ವಿಚಾರ ಒಳ್ಳೆಯ ಕಾರ್ಯಕ್ರಮ. ಮಾನ್ಯ ನಜೀರ್ ಸಾಹೇಬರು ಒಳ್ಳೆಯ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ಬಹಳ ಸಂತೋಷ. ಆದರೆ ಕೊಳವೆಬಾವಿಗಳಿಗೆ ಅಳವಡಿಸುವ ಕೈಪಂಪು ಏನಿದೆ ಅದು ಕೆಟ್ಟುಹೋದರೆ ನೋಡುವವರು ಯಾರೂ ಇಲ್ಲ, ಕೊಳವೆಬಾವಿ ಎಲ್ಲಿದೆ ಎಂದು ನೋಡುವವರೂ ಯಾರೂ ಇಲ್ಲ, ಹೇಳಿದರೂ ಕೂಡಾ ನೋಡುವವರು ಇಲ್ಲ, ಜನರು ಬಂದು ಒತ್ತಾಡ ಮಾಡಿದರೂ ಪ್ರಯೋಜನ ಆಗಿಲ್ಲ, ನೀರು ಇಲ್ಲ, ಪಂಪ್ ಇಲ್ಲ. ಆದುದರಿಂದ ಈ ಕಾರ್ಯಕ್ರಮವನ್ನು ಮಾಡಿದರೂ ಕೂಡಾ ಅದು ಜನತೆಗೆ ಮುಟ್ಟದ ಕಾರ್ಯಕ್ರಮ, ಹಳ್ಳಿಗರಿಗೆ ಮುಟ್ಟದ ಕಾರ್ಯಕ್ರಮ, ಬಡವರಿಗೆ ಮುಟ್ಟದ ಕಾರ್ಯಕ್ರಮವಾಗಿದೆ ಎಂದು ಹೇಳುತ್ತೇನೆ. ಇದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ, ಇದು ಬಹಳ ದೊಡ್ಡ ವಿಷಯ ಪ್ರಮುಖವಾದ ವಿಚಾರ ಎಂದು ಹೇಳುತ್ತೇನೆ.

ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಜನತಾ ಮನೆ ಕಟ್ಟಿಕೊಡುವ ಕೆಲಸ ಆಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆ ತಬ್ಬಲಿಯಾಗಿದೆ. ಮಾನ್ಯ ದೇವೇಗೌಡರು ಬಹಳ ಒಳ್ಳೆಯ ಮಂತ್ರಿಗಳು. ಅವರು ಕೊಡತಕ್ಕ ಉತ್ತರವನ್ನು ಬಹಳ ಚಾಕಚಕ್ಯತೆಯಿಂದ ಬಹಳ ಸೂಕ್ಷ್ಮವಾಗಿ ಕೊಡುತ್ತಾರೆ. ನಾನು ಅವರ ಹತ್ತಿರ ಹೇಳತಕ್ಕದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಳ್ಳೆಯ ಮಳೆ ಬರುತ್ತದೆ, ನಮ್ಮ ರಸ್ತೆಗಳು ಬಹಳ ಬೇಗ ಹಾಳಾಗಿ ಹೋಗುತ್ತವೆ. ಕಂಟ್ರಾಕ್ಟರುಗಳು ಮೋಸ ಮಾಡಿ, ಡಾಂಬರು ಹಾಕುವುದರಲ್ಲಿ ಮೋಸ ಮಾಡಿ ಅದು ಹಾಳಾಗುತ್ತದೆ. ಎಲ್ಲಿ ನೋಡಿದರೂ ಕೂಡಾ ಹೊಂಡಗಳು. ಎಲ್ಲಿ ನೋಡಿದರೂ ಹೋಗುವುದಕ್ಕೆ ಸಾಧ್ಯವಿಲ್ಲ. ನನ್ನ ಉಳ್ಳಾಲ ಕ್ಷೇತ್ರದಲ್ಲಿ, ಉಳ್ಳಾಲ 36 ಸಾವಿರ ಜನಸಂಖ್ಯೆ ಇರತಕ್ಕಂಥ ಪ್ರದೇಶ, ಅಲ್ಲಿ ಒಂದೇ ರಸ್ತೆ ಇರುವಂಥಾದ್ದು, ಅದು ಹೊಂಡವಾಗಿದೆ. ಅಲ್ಲಿ ಕೆಲವರು ಸಸಿಗಳನ್ನು ನೆಟ್ಟು ವನಮಹೋತ್ಸವ ಮಾಡಿದರು, ಇದು ಉದಯವಾಣಿ ಪತ್ರಿಕೆಯಲ್ಲಿ ಫೋಟೋಹಾಕಿ ಪ್ರಕಟಿಸಿದರು. ಕಡೆಗೆ ಅಸಿಸ್ಟೆಂಟ್ ಎಂಜಿನಿಯರ್‌ರವರನ್ನು, ಜೂನಿಯರ್ ಎಂಜಿನಿಯರ್‌ರವರನ್ನು ಕರೆದುಕೊಂಡು ಹೋಗಿ ತೋರಿಸಿದೆವು, ಅವರು ವಿಚಾರಮಾಡಿ ನೋಡೋಣ ಎಂದು ಹೇಳಿದರು, ಆದರೆ ಏನೂ ಆಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಾರ್ಗಗಳನ್ನು ಒಳ್ಳೆಯ ರೀತಿಯಲ್ಲಿ ಮಾಡಬೇಕು, ಮಾನ್ಯ ದೇವೇಗೌಡರೂ ಎಷ್ಟೋ ಸಲ ಬಂದಿದ್ದಾರೆ, ಅವರಿಗೂ ಚೆನ್ನಾಗಿ ಗೊತ್ತಿದೆ. ದಕ್ಷಿಣ ಕನ್ನಡ ಜಿಲ್ಲೆ ಹೆಚ್ಚು ಮಳೆ ಬರತಕ್ಕ ಪ್ರದೇಶ. ಇಲ್ಲಿ ಪಿಡಬ್ಲ್ಯೂಡಿ. ಕೆಲಸ ಜಾಸ್ತಿಯಾಗಬೇಕಾದರೆ ಬಜೆಟ್‌ನಲ್ಲಿ ಹೆಚ್ಚು ಹಣ ಇಡಬೇಕು. ಆದರೆ ನಮ್ಮ ಜಿಲ್ಲೆಯ ಬಗ್ಗೆ ನೋಡಿದರೆ ಇದರಲ್ಲಿ ಏನೂ ಕಾಣುವುದಿಲ್ಲ. ವಾರಾಹಿ ಯೋಜನೆಗೆ ಹೆಚ್ಚು ಹಣ ಖರ್ಚುಮಾಡಬೇಕು. ಇದು ಪ್ರಮುಖವಾದಂಥ ಯೋಜನೆ. ಇದಕ್ಕೆ ಕೂಡಾ ಬಜೆಟ್‌ನಲ್ಲಿ ಯಾವುದೇ ಒಂದು ಚಕಾರ ಕಾಣುತ್ತಿಲ್ಲ. ಇನ್ನು ಜನತಾ ಮನೆ. ಇದು ಬಹಳ ದೊಡ್ಡ ವಿಷಯ. ಜನತೆಗೆ ಅನ್ನ ಬಟ್ಟೆ ವಸತಿ ಇದು ಬಹಳ ಮುಖ್ಯವಾದವು. ಅಂತಹ ಒಂದು ವಸತಿ ಕೊಡಬೇಕೆಂದು ಇದನ್ನು ಮಾಡಿದರೂ ಕೂಡಾ ಜನತಾ ಮನೆಗಳ ಮಟ್ಟಿಗೆ ಬಜೆಟ್‌ನಲ್ಲಿ ಯಾವುದೇ ಒಂದು ಚಕಾರ ಇಲ್ಲ. ಬಡವರಿಗೆ, ಬಡ ಜನತೆಗೆ ಪ್ರಮುಖವಾದಂಥ ಕಾರ್ಯಕ್ರಮಗಳನ್ನು ಮಾಡದೇ, ನಾವು ದೊಡ್ಡ ದೊಡ್ಡ ಜನರಿಗೆ ಸಹಾಯ ಮಾಡುವಂತಹ ಕಾರ್ಯಕ್ರಮ ಮಾಡಿದರೆ, ಉಳ್ಳವರಿಗೆ, ಧನಿಕರಿಗೆ ಹೆಚ್ಚು ಶಕ್ತಿ ಬರತಕ್ಕಂಥ ಬಜೆಟ್ ಇದು ಆಗಿದೆ. ಆದುದರಿಂದ ನಾನು ಬಡವರಿಗೆ ಉಪಕಾರ ಆಗಬೇಕು, ಬಡ ಜನತೆಗೆ ಉಪಕಾರ ಆಗಬೇಕು ಎಂದು ಹೇಳುತ್ತೇನೆ. ಮುಖ್ಯವಾಗಿ ರೈತರಿಗೆ ಉಪಕಾರವಾಗಬೇಕು. ಎಲ್ಲ ರೀತಿಯಲ್ಲೂ ಕಷ್ಟದಲ್ಲಿರತಕ್ಕಂಥ ಅಲ್ಪಸಂಖ್ಯಾತರಿಗೆ ಎಲ್ಲ ರೀತಿಯ ಉಪಕಾರ ಆಗಬೇಕಾದರೆ ಅದಕ್ಕೆ ಬೇಕಾದ ಮನಸ್ಸನ್ನು ಮಾಡಬೇಕು. ನಾನು ಮೊದಲೇ ಹೇಳಿದ ಹಾಗೆ ಮಂತ್ರಿಗಳ ಯೋಚನೆಗಳು ಒಳ್ಳೆಯದಿದ್ದರೂ ಕೂಡಾ, ಅದು ಸರಿಯಾಗಿ ನಡೆಯದಿರುವುದರಿಂದ, ಇದರ ಬಗ್ಗೆ ತನಿಖಾ ದಳ ಇಡಿ, ಅನಿರೀಕ್ಷಿತವಾಗಿ ಭೇಟಿಕೊಟ್ಟು ಪರಿಶೀಲನೆ ಮಾಡಿ, ಸರಿಯಾಗಿ ನಡೆಯುವ ಹಾಗೆ ಮಾಡಬೇಕು. ಹಿಂದಿನ ಕಾಲದಲ್ಲಿ ಇಸ್ಲಾಂ ರಾಜ್ಯ ಇರುವಾಗ, ಎರಡನೇ ಖಲೀಫರಾದಂಥ ಉಮರುಲ್ ಫಾರೂಕ್ ಎಂಬುವವರು ಇದ್ದರು, ಅವರು ಇಡೀ ಜಗತ್ತಿನಲ್ಲೇ ಮಾನ್ಯರಾದ ಕೆಲವಾರು ಆಡಳಿತಗಾರರಲ್ಲಿ ಒಬ್ಬರು, ಅವರು ಬಹಳ ದಕ್ಷರು ಎಂದು ಇತಿಹಾಸ ಹೇಳುತ್ತದೆ. ಅವರು ಏನು ಮಾಡುತ್ತಿದ್ದರು ಎಂದರೆ, ಇಷ್ಟು ದೊಡ್ಡ ಖಲೀಫರಾದ ಅವರು, ಇಡೀ ಅರಬಸ್ತಾನ್ ರಾಜ್ಯದೊಳಗೆ, ರಾತ್ರಿಯೆಲ್ಲಾ ನಿದ್ದೆಮಾಡದೆ ತಿರುಗಾಡಿ, ನನ್ನ ಪ್ರಜೆಗಳಿಗೆ ಎಲ್ಲಿ ಏನಾಗಿದೆ, ಯಾವ ಮನೆಯಲ್ಲಿ ತೊಂದರೆಯಾಗಿದೆ, ಎಂದು ಮಾರುವೇಷದಲ್ಲಿ ಬೆಳಗಿನವರೆಗೂ ಸುತ್ತಾಡತಕ್ಕ ಕಾರ್ಯಕ್ರಮ ಇಟ್ಟುಕೊಳ್ಳುತ್ತಿದ್ದರು. ಸ್ವಾತಂತ್ರ್ಯ ಸಿಕ್ಕಿದ ಕೂಡಲೇ ನಮ್ಮ ಗಾಂಧೀಜಿಯವರು

ಹೇಳಿದ್ದು, ನಮ್ಮ ದೇಶದಲ್ಲಿ ಉಮರಲ್ ಫಾರೂಕರ ಆಡಳಿತ ಪದ್ಧತಿಯನ್ನು ತರುವ ಪ್ರಯತ್ನ ಮಾಡಬೇಕು ಎಂದು ಹೇಳಿದ್ದರು. ಕಾಂಗ್ರೆಸ್ ಮುಖಂಡರಿಗೆ ಕೂಡಾ ಗಾಂಧೀಜಿಯವರು ಈ ರೀತಿ ಮಾಡಬೇಕೆಂದು ಹೇಳಿದ್ದರು. ಆದರೆ ಇವತ್ತು ಕೆಳಗಿನ ಅಧಿಕಾರಿಗಳು ಮಾಡತಕ್ಕಂಥ ವಂಚನೆಗಳು ಹೆಚ್ಚಾಗಿವೆ, ಒಳ್ಳೆಯ ಯೋಜನೆ ಇಟ್ಟು, ಒಳ್ಳೆಯ ಕಾರ್ಯಕ್ರಮಗಳನ್ನು ತರುತ್ತಿರುವುದರಿಂದ ಒಳ್ಳೆಯದಾದಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು, ದಕ್ಷವಾದಂಥ ವ್ಯವಸ್ಥೆಯನ್ನು ಮಾಡಿ, ಬಡ ಜನರಿಗೆ, ರೈತರಿಗೆ ಆದೇರೀತಿ ಅಲ್ಪಸಂಖ್ಯಾತರಿಗೆ ಉಪಕಾರ ಆಗುವ ಹಾಗೆ ಮಾಡಬೇಕೆಂದು ಹೇಳಿ, ಈ ಬಜೆಟ್ಟನ್ನು ಇದರಲ್ಲಿ ಇರತಕ್ಕಂಥ ಕೆಲವು ಯೋಜನೆಗಳಿಗೆ ನನ್ನ ವಿರೋಧವನ್ನು ಸೂಚಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ಈ ಸಭೆಯ ಸದಸ್ಯರುಗಳಾದ ಶ್ರೀ ಕೆ. ಬಿ. ಶಾಣಪ್ಪ ಮತ್ತು ಶ್ರೀ ಯು. ಭೂಪತಿ ಇವರುಗಳನ್ನು ಕರ್ನಾಟಕ ಪೊಲೀಸ್ ಕಾಯಿದೆಯ 71ನೇ ಕಲಮಿನ ಮೇರೆಗೆ, ಬೆಂಗಳೂರು ನಗರದ ಕೃಷ್ಣರಾಜೇಂದ್ರ ವೃತ್ತದ ಬಳಿ ಈ ದಿನ ಮಧ್ಯಾಹ್ನ 1-00 ಗಂಟೆಗೆ ದಸ್ತಗಿರಿಮಾಡಿ, ಬೆಂಗಳೂರು ನಗರದ, ಅಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಇಡಲಾಗಿದೆ, ಎಂದು ಬೆಂಗಳೂರು ನಗರದ ಪೊಲೀಸ್ ಕಮಿಷನರ್‌ರವರಿಂದ ಸಂದೇಶ ಬಂದಿದೆ,

ಚರ್ಚೆ ನಾಳೆ ಮುಂದುವರಿಯುತ್ತದೆ, ಸಭೆಯನ್ನು ನಾಳೆ ಬೆಳಿಗ್ಗೆ 11-00 ಗಂಟೆಗೆ ಮುಂದೂಡಲಾಗಿದೆ.

ಸಭೆಯು ಸಾಯಂಕಾಲ 5 ಗಂಟೆ 20 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 30-7-85 ರಂದು ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು.)

---

* ಈ ಚಿಹ್ನೆಯ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ANNEXURE

THE KARNATAKA CO-OPERATIVE SOCIETIES (AMENDMENT) BILL, 1985.

(L. A. Bill No. 24 of 1985)

A Bill further to amend the Karnataka Co-operative Societies Act, 1959.

Whereas, it is expedient further to amend the Karnataka Co-operative Societies Act, 1959 (Karnataka Act 11 of 1959) for the purposes hereinafter appearing ;